ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಎಂ.ಫಿಲ್.ಪದವಿಯ ನಿಬಂಧ

"ಕುಮಾರವ್ಯಾಸನ ವಿರಾಟಪರ್ವದ ವಿವಿಧ ಆವೃತ್ತಿಗಳು- ಒಂದು ಅಧ್ಯಯನ"

ಸಂಶೋಧನ ವಿದ್ಯಾರ್ಥಿನಿ
ಸಂಧ್ಯ.ವಿ.

ಮಾರ್ಗದರ್ಶಕರು
ಪ್ರೊ. ಜಿ.ಅಶ್ವತ್ಥನಾರಾಯಣ

ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ
ಬೆಂಗಳೂರು

೨೦೦೯

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಎಂ.ಫಿಲ್.ಪದವಿಯ ನಿಬಂಧ

“ಕುಮಾರವ್ಯಾಸನ ವಿರಾಟಪರ್ವದ ವಿವಿಧ ಆವೃತ್ತಿಗಳು- ಒಂದು ಅಧ್ಯಯನ”

ಸಂಶೋಧನ ವಿದ್ಯಾರ್ಥಿನಿ

ಸಂಧ್ಯ.ವಿ.

ಮಾರ್ಗದರ್ಶಕರು

ಪ್ರೊ. ಜಿ.ಅಶ್ವತ್ಥನಾರಾಯಣ

ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ

ಬೆಂಗಳೂರು

೨೦೦೮

ಮಾರ್ಗದರ್ಶಕರ ಪ್ರಮಾಣಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೮–೦೯ ಸಾಲಿನ ಎಂ.ಫಿಲ್ ಪದವಿಗಾಗಿ "**ಕುಮಾರವ್ಯಾಸನ ವಿರಾಟಪರ್ವದ ವಿವಿಧ ಆವೃತ್ತಿಗಳು – ಒಂದು ಅಧ್ಯಯನ**" ಎಂಬ ಸಂಪ್ರಬಂಧವನ್ನು ಸಂಧ್ಯ.ವಿ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ಸಂಪ್ರಬಂಧವು ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 29/09/2009

ಸ್ಥಳ: ಬೆಂಗಳೂರು

ಮಾರ್ಗದರ್ಶಕರು

(ಪ್ರೊ|| ಜಿ.ಅಶ್ವತ್ಥನಾರಾಯಣ)

ಅಭ್ಯರ್ಥಿಯ ಪ್ರಮಾಣಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೮–೦೯ ಸಾಲಿನ ಎಂ.ಫಿಲ್ ಪದವಿಗಾಗಿ **"ಕುಮಾರವ್ಯಾಸನ ವಿರಾಟಪರ್ವದ ವಿವಿಧ ಆವೃತ್ತಿಗಳು ಒಂದು ಅಧ್ಯಯನ"** ಎಂಬ ಸಂಪ್ರಬಂಧವನ್ನು **ಪ್ರೊ॥ಜಿ.ಅಶ್ವತ್ಥನಾರಾಯಣ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ಸಂಪ್ರಬಂಧವು ನನ್ನ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: ೨೧/೯/೦೯

ಸ್ಥಳ: ಬೆಂಗಳೂರು.

ಸಂಶೋಧನ ವಿಧ್ಯಾರ್ಥಿನಿ

Sandhya V.

ಸಂಧ್ಯಾ.ವಿ

ಪರಿವಿಡಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ

ಪ್ರಸ್ತಾವನೆ

ರಾಮಾಯಣ ಹಾಗೂ ಮಹಾಭಾರತ ನಮ್ಮ ನಾಡಿನ ಎರಡು ಮಹಾನ್ ಸಾಂಸ್ಕೃತಿಕ ಇತಿಹಾಸದ ಗ್ರಂಥಗಳು. ಇವುಗಳಲ್ಲಿ ಮಹಾಭಾರತವು ಪಂಚಮವೇದವೆಂದೇ ಪ್ರಸಿದ್ಧಿಯಾಗಿದೆ. ಅಷ್ಟೇಅಲ್ಲ ಬೃಹತ್ತು ಮಹತ್ತುಗಳೆರಡರಲ್ಲೂ ಮಹಾಭಾರತವನ್ನು ಮೀರಿಸುವ ಕಾವ್ಯ ಇನ್ನೂ ಜಗತ್ತಿನಲ್ಲಿ ಉದಯವಾಗಿಲ್ಲ. ಈ ಕಾವ್ಯವಾರಿಧಿಯಿಂದ ಭಾರತದಾದ್ಯಂತ ವಿವಿಧ ಭಾಷೆಗಳ ನೂರಾರು ಕವಿಗಳು ತಮ್ಮ ಕಾವ್ಯ ನಾಟಕ ಮುಂತಾದವುಗಳಿಗೆ ವಸ್ತುರತ್ನಗಳನ್ನು ಆಯ್ದುಕೊಂಡಿದ್ದಾರೆ. ಎಷ್ಟು ಮೊಗೆದರೂ ಮುಗಿಯದಷ್ಟು ವಿಷಯಗಳನ್ನು ಅಪಾರವಾಗಿ ಒಳಕೊಂಡಿರುವ ಮಹಾಕಾವ್ಯ ಮಹಾಭಾರತ. ಈ ಮಹಾಭಾರತವನ್ನು ಕುರಿತು 'ಜಗತ್ತಿನಲ್ಲಿ ಇರುವುದೆಲ್ಲವೂ ಭಾರತದಲ್ಲಿದೆ; ಭಾರತದಲ್ಲಿ ಇಲ್ಲದ್ದು ಜಗತ್ತಿನಲ್ಲಿ ಇಲ್ಲ'ವೆಂಬ ಹೇಳಿಕೆ ಸಮಗ್ರ ಭಾರತವನ್ನು ಓದಿದವರಿಗೆ ಅತಿಶಯೋಕ್ತಿ ಎನಿಸುವುದಿಲ್ಲ. "ಎಲ್ಲ ನೀತಿ ಕಲ್ಪನೆಗೂ ಆಕರ ಗ್ರಂಥವಾಗಯೂ ಅಸಮಾನವಾದ ಮಾನವ ಸ್ವಭಾವ ಚಿತ್ರಣವಾಗಿಯೂ, ಶ್ರೇಷ್ಠ ಕಾವ್ಯವಾಗಿಯೂ ಮಹಾಭಾರತವು ಪಡೆದಿರುವಷ್ಟು ಪ್ರಾಮುಖ್ಯವನ್ನು, ಜನಾದರವನ್ನು ಬೇರೆಯಾವ ಗ್ರಂಥವೂ ಪಡೆದಿರಲಾರದು[೧]

ಸಂಸ್ಕೃತದಲ್ಲಿ ವ್ಯಾಸರಿಂದ ರಚಿತವಾದ ಈ ಮಹಾಭಾರತ ಗ್ರಂಥವನ್ನು ಸಮಗ್ರವಾಗಿ ಹಾಗೂ ಬಿಡಿಬಿಡಿ ಪ್ರಸಂಗಗಳನ್ನು ಆಯ್ದುಕೊಂಡು ಕನ್ನಡದಲ್ಲಿ ಕಾವ್ಯ ರಚಿಸಿದ ಅನೇಕ ಕವಿಗಳು ಹಳೆಗನ್ನಡ ನಡುಗನ್ನಡ ಕಾಲದಲ್ಲಿ ದೊರೆಯುತ್ತಾರೆ. ಅವರಲ್ಲಿ ಹಳೆಗನ್ನಡದಲ್ಲಿ ಪಂಪ ಹಾಗೂ ನಡುಗನ್ನಡದಲ್ಲಿ ಕುಮಾರವ್ಯಾಸರು ರಚಿಸಿದ ಭಾರತಕಾವ್ಯಗಳು ಬಹಳ ಪ್ರಸಿದ್ಧಿ ಪಡೆದ ಕಾವ್ಯಗಳಾಗಿವೆ. ಪಂಪ ಕುಮಾರವ್ಯಾಸರ

ಕಾವ್ಯಗಳ ಮುಂದೆ ಉಳಿದ ಕೃತಿಗಳು ಸೂರ್ಯೋದಯದ ಅನಂತರದ ನಕ್ಷತ್ರಗಳಂತೆ ಕಾಂತಿ ಕಳೆದುಕೊಂಡಿವೆ ಎನ್ನುವಷ್ಟರಮಟ್ಟಿಗೆ ಈ ಎರಡು ಕೃತಿಗಳು ಶ್ರೇಷ್ಠವಾಗಿವೆ. ಪಂಪ ಕುಮಾರವ್ಯಾಸರು ಕನ್ನಡ ಮಹಾಭಾರತವನ್ನು ರಚಿಸಿ ಕನ್ನಡಸಾಹಿತ್ಯದ ಧ್ರುವತಾರೆಗಳೆನಿಸಿಕೊಂಡಿದ್ದಾರೆ.

ಈ ಇಬ್ಬರ ಕೃತಿಗಳಿಗೂ ವ್ಯಾಸ ವಿರಚಿತ ಸಂಸ್ಕೃತ ಭಾರತವೇ ಆಕರವಾದರೂ ನಿರೂಪಣೆಯಲ್ಲಿ ಸಾಕಷ್ಟು ಭಿನ್ನತೆ ಕಂಡುಬರುತ್ತದೆ. ಈ ಇಬ್ಬರು ಕವಿಗಳ ಕಾಲ, ಧರ್ಮ, ಬಳಸಿಕೊಂಡ ಛಂದೋಪ್ರಕಾರಗಳು, ಜೀವನ ಶೈಲಿ, ಯುಗಧರ್ಮ, ಭಿನ್ನವಾಗಿರುವುದು ಈ ಬದಲಾವಣೆಗಳಿಗೆ ಕಾರಣವಾಗಿವೆ. ವಿಕ್ರಮಾರ್ಜುನ ವಿಜಯವನ್ನು ರಚಿಸಿದ ಆದಿಕವಿ ಪಂಪ ತನ್ನ ಕಾವ್ಯ ಪ್ರೌಢಿಮೆಯಿಂದ ಪಂಡಿತರಿಂದ ಮೆಚ್ಚುಗೆ ಪಡೆದು ಕನ್ನಡದ ಮೇರುಕವಿ ನಾಡೋಜ ಎಂಬೆಲ್ಲ ಹೊಗಳಿಕೆಗೆ ಪಾತ್ರನಾದರೂ ಕುಮಾರವ್ಯಾಸ ಅವನಿಗೆ ಹೊಯ್ ಕಯ್ ಆಗುವಂತೆ ಕಾವ್ಯರಚಿಸಿ ವಿದ್ವಾಂಸರಷ್ಟೆ ಅಲ್ಲ ಸಾಮಾನ್ಯ ಜನರಿಂದಲೂ ಸೈ ಎನಿಸಿಕೊಂಡಿದ್ದಾನೆ. ಪಂಪ ಪಂಡಿತವರ್ಗದವರಿಂದ ಮೆಚ್ಚುಗೆ ಪಡೆದು ಕಲಿತವರ ಕಲ್ಪವೃಕ್ಷ ಎನಿಸಿಕೊಂಡರೆ ಕುಮಾರವ್ಯಾಸ ಓದುಬಾರದವರಿಗೂ ಕರ್ಣಾಮೃತವೀಯುತ್ತಾ ಕಲಿಯದವರ ಕಾಮಧೇನುವಾಗಿದ್ದಾನೆ.

ಕುಮಾರವ್ಯಾಸ ವಿರಚಿತ 'ಕರ್ಣಾಟ ಭಾರತ ಕಥಾಮಂಜರಿ' ಗೆ ಸಂಸ್ಕೃತದಲ್ಲಿ ವ್ಯಾಸರಿಂದ ರಚಿತವಾದ ಮಹಾಭಾರತವೇ ಮೂಲ ಆಕರವಾದರೂ ಕುಮಾರವ್ಯಾಸ ನಿರೂಪಣೆಯಲ್ಲಿ ತನ್ನದೇ ಆದ ಭಾಗವತ ಪ್ರಜ್ಞೆಯ ದಿವ್ಯ ಪ್ರಭಾವಬೀರಿ ತನ್ನತನವನ್ನು ತೋರಿಸಿದ್ದಾನೆ. 'ತಿಳಿಯಹೇಳುವೆ ಕೃಷ್ಣಕತೆಯನು'ಎನ್ನುತ್ತಾ ವ್ಯಾಸವಿರಚಿತ ಭಾರತವನ್ನು ಕೃಷ್ಣಕತೆಯನ್ನಾಗಿಸಿದ್ದಾನೆ. ವೀರನಾರಾಯಣನೇಕವಿ ತಾನು ಕೇವಲ ಲಿಪಿಕಾರ ಎಂದು ಭಕ್ತಿಯನ್ನುತೋರಿದ್ದಾನೆ ಇದರರ್ಥ ಅನ್ಯರಾರೋ ಹೇಳಿರುವ ಕಾವ್ಯಕ್ಕೆ ಇವನು ಕೇಲವ ಲಿಪಿಕಾರ ಎಂದಲ್ಲ, ಇದು ಕವಿಯ ಸ್ವಂತಕೃತಿ ಇಲ್ಲಿ ಕಾಣುವುದು ಅವನ ಸ್ವಯಂಪ್ರತಿಭೆ "ವೀರನಾರಾಯಣ ಕುಮಾರವ್ಯಾಸನ ಅಂತಃಸಾಕ್ಷಿಯೇ ಹೊರತು

ಹೊರಗಿನವ್ಯಕ್ತಿಯಲ್ಲ..... ಇಲ್ಲಿ ಕವಿಯ ಆತ್ಮನಿರಾಕರಣೆಯಾಗಲೀ ಬೇಜವಾಬುದಾರಿಕೆಯಾಗಲೀ ಕಾಣುವುದಿಲ್ಲ"[3] ಮೂಲಭಾರತದ ದಶಪರ್ವಗಳ ಕಥೆಯಲ್ಲಿನ ರಸವತ್ತಾದ ಭಾಗಗಳನ್ನು ಆಯ್ದು ತನ್ನದೇ ಆದ ಶೈಲಿಯಲ್ಲಿ ಸ್ವತಂತ್ರ ಕಾವ್ಯವೆಂಬತೆ ರಚಿಸಿದ್ದಾನೆ. ಈ ಕಾವ್ಯವನ್ನು ಕೆಲವರು ಭಕ್ತಿಯಿಂದ ವಾಚನ ಮಾಡಿದರೆ ಹಲವರು ಸಾಹಿತ್ಯಾಸಕ್ತಿಯಿಂದ ಅಧ್ಯಯನ ನಡೆಸುತ್ತಿದ್ದಾರೆ.

ಕುಮಾರವ್ಯಾಸ ಭಾರತ, ಗದುಗಿನ ಭಾರತ, ಕನ್ನಡಭಾರತ, ಎಂದೆಲ್ಲಾ ಪ್ರಖ್ಯಾತವಾದ ಈ ಕರ್ಣಾಟ ಭಾರತ ಕಥಾಮಂಜರಿಯು ಅಪಾರ ಜನ ಮೆಚ್ಚುಗೆಯನ್ನು ಪಡೆದು ಮನೆ ಮನೆಗಳಲ್ಲಿ ಸಾರ್ವಜನಿಕ ಸಭೆಗಳಲ್ಲಿ ದೇವಾಲಯಗಳಲ್ಲಿ ವಾಚನ ಮಾಡುವ ಪದ್ಧತಿ ಕರ್ನಾಟಕದಾದ್ಯಂತ ಕಂಡುಬರುತ್ತದೆ, ಇಂದಿಗೂ ಈ ಕಾವ್ಯದ ವಾಚನ ವ್ಯಾಖ್ಯಾನಗಳನ್ನು ನಡೆಸಿಕೊಂಡು ಬರುತ್ತಿರುವ ಗಮಕಿಗಳನ್ನೂ ಕೇಳುವ ಪ್ರೋತ್ಸಾಹಿಸುವ ಜನವರ್ಗವನ್ನೂ ಕಾಣಬಹುದು. ಕುಮಾರವ್ಯಾಸನ ಕಾವ್ಯವನ್ನು ಕೇವಲ ಓದಿ, ಕೇಳುವುದಲ್ಲದೆ ಅಭ್ಯಸಿಸಿ ಚರ್ಚಿಸಿದ್ದಾರೆ, ಅವನ ವ್ಯಕ್ತಿತ್ವದ ಶೋಧನೆ ನಡೆಸುತ್ತಾ ಕೃತಿ ತನ್ನೊಳಗೆ ಹುದುಗಿಸಿಕೊಂಡ ಅರ್ಥ ಮೌಲ್ಯವನ್ನು ವಿವೇಚಿಸಿದ್ದಾರೆ. ಕುಮಾರವ್ಯಾಸನ ಈ ಭಾರತವನ್ನು 'ಅರಸುಗಳಿಗೆವೀರ ದ್ವಿಜರಿಗೆ ಪರಮವೇದದಸಾರ ಯೋಗೀಶ್ವರರ ತತ್ತ್ವವಿಚಾರ ಮಂತ್ರಿಜನಕೆ ಬುದ್ಧಿಗುಣ ವಿರಹಿಗಳ ಶೃಂಗಾರ ವಿದ್ಯಾಪರಿಣತರ ಅಲಂಕಾರ" ಎಂಬ ವಿವಿಧ ಆಶಯ ಪ್ರಯೋಜನಗಳ ಸಮೀಕ್ಷೆಮಾಡಿ ರಸಾನುಭವದ ಪರಿಗಳನ್ನು ವಿವರಿಸುತ್ತಾ ಕಾವ್ಯಪ್ರಚಾರ ಮಾಡಿದ್ದಾರೆ.

ಮಹಾಭಾರತದ ನಾಲ್ಕನೆಯ ಪರ್ವವಾದ ವಿರಾಟಪರ್ವವು ಕಷ್ಟಕರವಾದ ಪಾಂಡವರ ಜೀವನದಲ್ಲಿ ಭವಿಷ್ಯದ ಭರವಸೆಯ ತಿರುವನ್ನುಹೊಂದಿದೆ, ಆಶಾದಾಯಕವಾದ ಈ ವಿರಾಟಪರ್ವದ ಭಾಗದಿಂದಲೇ ಮೂಲವನ್ನು ಓದಲು ಆರಂಭಿಸಿ ಅಲ್ಲಿಗೇ ಮುಗಿಸುವ ಪದ್ಧತಿಯೊಂದು ಅನಾದಿಕಾಲದಿಂದಲೂ ಬಂದಿದೆ. ಇಂದಿಗೂ ಗಮಕಿಗಳು ಸಮಗ್ರ ಕುಮಾರವ್ಯಾಸ ಭಾರತದ ಪಾರಾಯಣ ಕಥನ ಪ್ರವಚನ ಕಾರ್ಯಗಳನ್ನು ಈ ವಿರಾಟ ಪರ್ವದಿಂದಲೇ ತೊಡಗುವರು. ರಾಮಾಯಣದ ಸುಂದರಕಾಂಡವನ್ನು ಕಷ್ಟಕಾಲದಲ್ಲಿ

ಪಾರಾಯಣ ಮಾಡುವಂತೆ ಈ ಭಾರತದ ವಿರಾಟಪರ್ವವನ್ನೂ ಮಳೆಬಾರದ ಸಮಯದಲ್ಲಿ ಪಾರಾಯಣ ಮಾಡುತ್ತಾರೆ. [೧]'ಗ್ರಾಮೀಣ ಪ್ರದೇಶಗಳಲ್ಲಿ ಒಂದೆರಡು ದಿನಗಳ ಮಟ್ಟಿಗೆ ಭಾರತ ಕಥಾಮಂಜರಿಯನ್ನು ವಾಚಿಸುವುದು ಎಂದಾದರೆ ವಿರಾಟಪರ್ವದ ಭಾಗಗಳನ್ನೇ ಓದಿಸುತ್ತಾರೆ'[೨] ಗ್ರಾಮೀಣರನ್ನು ವಿರಾಟಪರ್ವ ಯಾವಕಾರಣದಿಂದ ಆಕರ್ಷಿಸಿದೆ ಎನ್ನುವುದನ್ನು ಗಮನಿಸುವ ಅಗತ್ಯವಿದೆ.

ವಿರಾಟಪರ್ವದ ಸೊಗಸು ಇದರ ಕಾವ್ಯಾಂಶಗಳ ಚೆಲುವು ನಾನಾರಸಗಳ ಸಮ್ಮಿಲನ ಇದನ್ನು ಪ್ರತ್ಯೇಕ ಕಾವ್ಯವೆಂಬ ಮಟ್ಟಿಗೆ ಓದಬಹುದಾದ ಸೌಲಭ್ಯ ಕಥೆಯಲ್ಲಿ ಅಡಗಿರುವ ಕುತೂಹಲ, ವೇಗ ಈ ಪರ್ವವನ್ನು ಜನಪ್ರಿಯಗೊಳಿಸಿವೆ. ಈ ಪರ್ವದತುಂಬಾ ಮೈನಿಮಿರಿಸುವಂತಹ ಘಟನೆಗಳು ತುಂಬಿದ್ದು ಯಾವ ಸಂಧಿಯೂ ಬೀಳಾಗಿ ತೋರುವುದಿಲ್ಲ, ಮಹಾಭಾರತದ ಪ್ರಧಾನರಸ ವೀರ, ಈ ರಸದ ಪ್ರತಿಪಾದನೆಗೆ ಇಲ್ಲಿ ಯಥೇಚ್ಛವಾಗಿ ಅವಕಾಶ ದೊರೆತಿದೆ

ಕುಮಾರವ್ಯಾಸನ ಕಾಲ ದೇಶ, ಮತ:

'ಕರ್ಣಾಟ ಭಾರತ ಕಥಾಮಂಜರಿ'ಯ ಕರ್ತೃ ನಾರಣಪ್ಪನ ಕಾಲ ಮತಗಳ ವಿಚಾರವಾಗಿ ಅನೇಕ ಅಭಿಪ್ರಾಯಗಳು ಮೂಡಿ ವಿಪುಲವಾದ ಚರ್ಚೆ ನಡೆದಿದೆ.

ಕವಿ ತನ್ನ ಆತ್ಮಚರಿತ್ರೆಗೆ ಸಂಬಂಧಿಸಿದ ಯಾವುದೇ ಸಂಗತಿಯನ್ನು ತನ್ನ ಕಾವ್ಯದಲ್ಲಿ ಪ್ರಸ್ತಾಪಿಸಿಲ್ಲ, ಕಡೆಗೆ ತನ್ನ ಹೆಸರನ್ನೂ ಹೇಳಿಕೊಂಡಿಲ್ಲ. ನಮಗೆ ದೊರೆತಿರುವ 'ಕುಮಾರವ್ಯಾಸ' ಎಂಬ ಹೆಸರು ಕಾವ್ಯನಾಮವೋ, ಬಿರುದೋ ಅಥವಾ ನಿಜನಾಮವೋ ಎಂಬುದು ಸ್ಪಷ್ಟವಾಗಿಲ್ಲ. 'ಶುಕರೂಪ' ಎಂಬುದು ಕವಿಯ ಹೆಸರೆಂದೂ ಹೇಳುವುದುಂಟು. ಆದರೆ 'ನಾರಣಪ್ಪ' ಎನ್ನುವುದು ಕವಿಯ ಹೆಸರೆಂದು ಜನರಲ್ಲಿ ವಾಡಿಕೆಯಾಗಿ ಬಂದಿದೆ.





ಗದುಗಿನ ವೀರನಾರಾಯಣ ದೇವಾಲಯದ

ದೇವಾಲಯ ಈ ಕಂಬದಕೆಳಗೆ ಕುಳಿತು ಭಾರತ

ರಚಿಸಲಾಯಿತು ಎಂಬುದು ಅಲ್ಲಿನ ಜನಜನಿತವಾದ ಹೇಳಿಕೆ

ಕುಮಾರವ್ಯಾಸ ಭಾರತವನ್ನು ರಚಿಸಿದ ವೀರನಾರಯಣ

ಕವಿಯ ಹುಟ್ಟೂರು ಗದುಗಿನ ಬಳಿಯ ಕೋಳಿವಾಡ ಎಂಬ ಚಿಕ್ಕಗ್ರಾಮ, ಇವರದು ಅಲ್ಲಿನ ಕರಣಿಕರ/ಗೌಡರ ವಂಶವೆಂದೂ, ಈ ಊರು ಅವರ ವಂಶದವರಿಗೆ ಉಂಬಳಿಯಾಗಿ ಬಂದಿತೆಂದೂ ಜನರಲ್ಲಿ ಪ್ರಚಲಿತವಾಗಿದೆ. ನಾರಣಪ್ಪನ ಮನೆತನಕ್ಕೆಸೇರಿದ ಕೆಲವು ಕಾಗದ ಪತ್ರಗಳೂ ದೊರೆತಿವೆ.

ಕುಮಾರವ್ಯಾಸನ ಕಾಲವನ್ನು ೧೨ನೇ ಶತಮಾನದಿಂದ ೧೫ನೇ ಶತಮಾನದವರೆಗೂ ಅನೇಕ ವಿದ್ವಾಂಸರು ತಮ್ಮದೇ ಆದ ಆಧಾರಗಳಿಂದ ಚರ್ಚಿಸಿದ್ದಾರೆ. ಈ ಕಾಲವನ್ನು ನಿರ್ಣಯಿಸುವಲ್ಲಿ ಗಮನಿಸುವ ಪ್ರಮುಖ ಅಂಶಗಳೆಂದರೆ :

- ಕುಮಾರವ್ಯಾಸ ಚಾಮರಸ, ರಾಘವಾಂಕ ಸಮಕಾಲೀನರೆನ್ನುವುದು
- ಕುಮಾರವ್ಯಾಸನ ವಂಶದ ಮೂಲಪುರುಷನೆನ್ನುವ ಚಿನ್ನದ ಕೈಯ ಮಾಧವರಸನ ವಂಶಾವಳಿ ಹಾಗೂ ಆಸ್ತಿಪತ್ರಗಳು
- ಶುಭಕೃತು ಸಂವತ್ಸರ ಪುಷ್ಯಶುದ್ಧ ತ್ರಯೋದಶಿಗೆ ಭಾರತ ಬರೆದು ಮುಗಿಸಲಾಯಿತು ಎಂಬರ್ಥದ ಭಾರತದೊಳಗಿನ ಪದ್ಯ (ಆದಿಪರ್ವ ೩-೩೮)
- ಶಾ.ಶ.೧೪೬೧ (ಕ್ರಿ.ಶ.೧೫೩೯) ರ ಅಚ್ಯುತರಾಯನ ಶಾಸನವೊಂದರಲ್ಲಿ 'ಕವಿ ಕುಮಾರವ್ಯಾಸನಿಗೆ ಪ್ರಸನ್ನನಾದ ಗದುಗಿನ ವೀರನಾರಾಯಣ ಸನ್ನಿಧಿಯಲ್ಲಿ' ಎಂಬ ಉಲ್ಲೇಖವಿರುವುದು.

- ಕೃಷ್ಣದೇವರಾಯನ ಅಪ್ಪಣೆಯ ಮೇರೆಗೆ ತಿಮ್ಮಣ್ಣನು ಕುಮಾರವ್ಯಾಸ ಬರೆಯದೇ ಬಿಟ್ಟಿರುವ ಉಳಿದ ಭಾರತವನ್ನು ರಚಿಸಿರುವುದು.

ಇದಲ್ಲದೆ ಇಂದು ನಮಗೆ ದೊರೆತಿರುವ ಪ್ರಾಚೀನ ಹಸ್ತಪ್ರತಿಯಾದ ಕೆ–೪೦೫ ಪ್ರತಿಯ ಕಾಲ ಕ್ರಿ.ಶ.೧೫೫೪. ಈ ಪ್ರತಿಯು ಕವಿಯಕಾಲದ ಕನಿಷ್ಠ ನೂರುವರ್ಷದ ನಂತರ ರಚಿತವಾಗಿರುವುದೆಂಬುದು ತಜ್ಞರ ಅಭಿಪ್ರಾಯ ಈ ಪ್ರಕಾರವಾಗಿ ದೊರೆತಿರುವ ಆಧಾರಗಳಿಂದ ಕವಿಯ ಜೀವಿತಾವಧಿಯ ಉತ್ತರ ಗಡಿಯು ೧೫ನೇ ಶತಮಾನವೆಂದು ತಿಳಿದು ಬರುತ್ತದೆಯಾದರೂ ನಿಶ್ಚಿತವಾದ ಕಾಲ ದೊರಕದು. ಶ್ರೀಮಾನ್ ಮಂಜೇಶ್ವರ ಗೋವಿಂದ ಪೈ ಅವರು ಕುಮಾರವ್ಯಾಸನ ಕಾಲವನ್ನು ಸುಮಾರು ಕ್ರಿ.ಶ.೧೪೩೦ ರಿಂದ ಕ್ರಿ.ಶ.೧೪೩೫ ಎಂದು ತಿಳಿಸಿದರೆ ಕವಿಚರಿತ್ರೆಕಾರರು ನಾರಣಪ್ಪನು ೧೫ನೇ ಶತಮಾನದ ಪೂರ್ವಾರ್ಧದಲ್ಲಿ ಜೀವಿಸಿದ್ದನೆಂದು ಹೇಳಿದ್ದಾರೆ. ಬಹುಮತದ ವಿದ್ವಾಂಸರ ಹೇಳಿಕೆ ಕವಿಚರಿತ್ರೆಕಾರರ ಈ ಕಾಲವನ್ನೇ ಅನುಮೋದಿಸುವುದರಿಂದ ಅವರು ಕೊಡುವ ಆಧಾರಗಳ ಪ್ರಕಾರ ಕುಮಾರವ್ಯಾಸನ ಕಾಲವನ್ನು ೧೫ನೇ ಶತಮಾನದ ಪೂರ್ವಾರ್ಧ ಎಂದಿಟ್ಟುಕೊಳ್ಳಬಹುದು.

ಇತ್ತೀಚೆಗೆ ಡಾ।ಶ್ರೀನಿವಾಸ ಹಾವನೂರರು "ಕುಮಾರವ್ಯಾಸನ ಕಾಲವನ್ನು ಕ್ರಿ.ಶ.೧೩೩೧–೧೩೮೩ ಎಂದು ತಿಳಿಸಿದ್ದಾರೆ. ಆರ್ಕಾಟು ಸೀಮೆಯ ವರಪ್ಪಾಡಿಕೊಂಡನ್ ಎಂಬ ರಾಜ ತನ್ನ ಆಶ್ರಯದಲ್ಲಿದ್ದ ಕವಿ ಎಲ್ಲಪುತ್ತೂರಾರ್ ಎಂಬುವವನಿಗೆ ತಮಿಳಿನಲ್ಲಿ ಮಹಾಭಾರತ ರಚಿಸುವಂತೆ ಪ್ರೇರೇಪಿಸಿದ್ದನ್ನು ಈ ಕವಿಯ ಮಗ ವರಂತಮ ತನ್ನ ಪದ್ಯವೊಂದರಲ್ಲಿ 'ಕರುನಾಟದ ಪ್ರಭಾವವು ನಮ್ಮ ರಾಜ್ಯದಲ್ಲಿ ಮಹಾಪ್ರವಾಹದಂತೆ ಮುಗಿಬಿದ್ದಿದೆ ಅದರಲ್ಲಿ ಮುಳುಗದಿರಲು ತಮಿಳಿನಲ್ಲಿಯೇ ಒಂದು ಉತ್ಕೃಷ್ಟವಾದ ಕಾವ್ಯರಚಿತವಾದದ್ದನ್ನು ನೋಡಬೇಕಲ್ಲವೇ ? ನೋಡಿಯೇವೇ ?' ಎಂದು ಹೇಳಿದ್ದಾನೆ. ಇಲ್ಲಿ ಹೇಳಿರುವಂತೆ ಕರ್ನಾಟಕದ ಮಹಾಭಾರತವೊಂದು ತಮಿಳಿನಲ್ಲಿ ಪ್ರಖ್ಯಾತವಾಗಿರಬೇಕಾದರೆ ಅದು ಕುಮಾರವ್ಯಾಸಭಾರತವೇ ಎಂಬುದರಲ್ಲಿ ಸಂಶಯವಿಲ್ಲ, ಮೇಲೆಹೇಳಿರುವ ಈ ರಾಜನ ಕಾಲಕ್ಕಿಂತ ಕನಿಷ್ಠ ೫೦ ವರ್ಷಕ್ಕೂ ಮೊದಲು

ಕುಮಾರವ್ಯಾಸ ಜೀವಿಸಿದ್ದನೆಂದರೂ ಅವನಕಾಲ ೧೩ ನೇ ಶತಮಾನ ಎಂದಾಗುತ್ತದೆ. ಎಂಬುದು ಶ್ರೀನಿವಾಸ ಹಾವನೂರರ ವಾದ, ಆದರೆ ತಮಿಳಿನಲ್ಲಿ ಕಾವ್ಯಬರೆಯಲು ಪ್ರೇರೇಪಿಸಿದ ರಾಜ ಕರ್ನಾಟಕದ ಯಾವ ಕವಿಯ ಕಾವ್ಯದ ಪ್ರಭಾವ ತಮಿಳಿನಲ್ಲಿ ಹೆಚ್ಚಾಗಿದೆ ಎಂದು ಸ್ಪಷ್ಟಪಡಿಸಿಲ್ಲವಾದ್ದರಿಂದ ಈ ಕುರಿತ ಹೆಚ್ಚಿನ ಅಧ್ಯಯನ ನಡೆಸಿ ಸಂಪೂರ್ಣಮಾಹಿತಿ ದೊರೆತ ನಂತರವಷ್ಟೆ ಈ ಕಾಲವನ್ನು ಗಣನೆಗೆ ತೆಗೆದುಕೊಳ್ಳಬಹುದು

ಧನಂಜಯ ಕುಂಬ್ಳೆಯವರು ತುಳುಭಾಷೆಯಲ್ಲಿ ಮಹಾಭಾರತ ಕಾವ್ಯರಚಿಸಿದ ಅರುಣಾಬ್ಜ ಕವಿಯಮೇಲೆ ಕುಮಾರವ್ಯಾಸನ ಪ್ರಭಾವ ಇರುವುದನ್ನು ಗುರುತಿಸಿದ್ದಾರೆ. "ಅರುಣಾಬ್ಜ ಕ್ರಿ.ಶ.೧೩೮೩ರ ಆಚೆ ಬದುಕಿದ್ದನೆಂದು ಅನೇಕ ಆಧಾರಗಳಿಂದ ತಿಳಿದು ಬರುವುದರಿಂದ ಕುಮಾರವ್ಯಾಸ ಅವನಿಗೂ ಪೂರ್ವದಲ್ಲಿ ಸುಮಾರು ೧೩ನೇ ಶತಮಾನದ ಉತ್ತರಾರ್ಧದಲ್ಲಿ ಬದುಕಿದ್ದಿರಬಹುದು[೫೫] ಎಂದು ಇವರು ತಿಳಿಸಿದ್ದಾರೆ. ಆದರೆ ಅರುಣಾಬ್ಜ ತನ್ನ ಕೃತಿಯಲ್ಲಿ ಎಲ್ಲೂ ಕುಮಾರವ್ಯಾಸನ ಹೆಸರನ್ನು ಹೇಳಿಲ್ಲ ಅಲ್ಲದೆ ಅರುಣಾಬ್ಜನ ಕಾಲವನ್ನೇ ನಿಶ್ಚಿತವಾಗಿ ಹೇಳಲಾಗದಿರುವುದರಿಂದ ಈ ಆಧಾರದ ಮೇಲೆ ಕುಮಾರವ್ಯಾಸನ ಕಾಲ ನಿರ್ಧರಿಸುವುದು ಉಚಿತವೆಂದು ತೋರುವುದಿಲ್ಲ.

ಕುಮಾರವ್ಯಾಸನ ಕಾಲನಿರ್ಣಯದಂತೆ ಮತದ ವಿಚಾರವಾಗಿಯೂ ಸಾಕಷ್ಟು ಚರ್ಚೆಗಳು ನಡೆದಿವೆ. ಈ ಕವಿ ರಚಿಸಿರುವ ಭಾರತವು ಜನಪ್ರಿಯ ಗ್ರಂಥವಾಗಿದ್ದರಿಂದ ನಾನಾ ಮತದವರು ಈ ಕವಿಯು ತಮ್ಮ ಪಂಗಡದವನೆಂದು ತೋರಿಸಲು ಪದ್ಯದಿಂದ ಅನೇಕ ಸಾಲುಗಳನ್ನು ಉದಾಹರಿಸುತ್ತಾ ಬಂದಿದ್ದಾರೆ.

ವೀರಶೈವರು ವೈಷ್ಣವ ಕಥೆಗಳನ್ನು ಬರೆಯುವುದಿಲ್ಲ ಹಾಗೂ ಕವಿಯು ಬ್ರಾಹ್ಮಣರ ಕರ್ಮದ ವಿಧಿಯನ್ನು ಅನೇಕ ಕಡೆಗಳಲ್ಲಿ ವಿವರಿಸಿರುವುದರಿಂದಲೂ ಇವನು ಬ್ರಾಹ್ಮಣಕವಿ ಎಂಬುದು ಬಹುಮತದ ಅಭಿಪ್ರಾಯ. ವೈಷ್ಣವಮತದ ಅನೇಕ ವಿಚಾರಗಳು ಗ್ರಂಥದಲ್ಲಿ ಇದ್ದರೂ, ಹರಿಸರ್ವೋತ್ತಮ ಮತಕ್ಕೆ ವಿರುದ್ದವಾದ

ಅಂಶಗಳೂ ಸಾಕಷ್ಟು ಇದ್ದು, ಹರಿಹರ ಸಮತ್ವವನ್ನೂ ಅಭೇದವನ್ನೂ ನಿರೂಪಿಸುವ ಮಾತುಗಳು ಹೇರಳವಾಗಿ ಸಿಗುತ್ತವೆಯಾದ್ದರಿಂದ ಈತ ಸ್ಮಾರ್ತ ಬ್ರಾಹ್ಮಣಕವಿ ಎಂದು ಬಹುವಿದ್ವಾಂಸರು ತೀರ್ಮಾನಿಸಿದ್ದಾರೆ. ಆದರೆ ಹರಿಹರಭೇದವೆಣಿಸದ ಭಾಗವತಸಂಪ್ರದಾಯದ ಕವಿ ಎಂದು ಅವನ ಕಾವ್ಯದ ಹಿನ್ನೆಲೆಯಲ್ಲಿ ಹೇಳುವುದು ಹೆಚ್ಚು ಸಮಂಜಸ ಎನಿಸುತ್ತದೆ.

ಕುಮಾರವ್ಯಾಸಭಾರತ ಯಾವುದೇ ಒಂದು ಪಂಥ ಅಥವಾ ವಾದದ ಪ್ರತಿಪಾದನೆಗೂ ಮುಖವಾಗದಂತೆ ಕೇವಲ ಭಗವದ್ಭಕ್ತಿಯ ಹಿರಿಮೆಯನ್ನು, ಹರಿಶಕ್ತಿಯ ಮಹಿಮೆಯನ್ನು ಕಾವ್ಯಧರ್ಮದ ಚೌಕಟ್ಟಿನಲ್ಲಿ ಹಿಡಿದಿಟ್ಟಿದೆ. "ಕುಮಾರವ್ಯಾಸ ತನ್ನಕಾಲದ ಯಾವುದೇ ಮತೀಯ ಸಂಘರ್ಷಕ್ಕೆ ಸಿಲುಕದೆ ತನ್ನನ್ನು ಮತಾತೀತನನ್ನಾಗಿ ಸಂರಕ್ಷಿಸಿಕೊಂಡು ಯೋಗೀಂದ್ರನ ಸಮನ್ವಯ ಬುದ್ಧಿಭಾವಗಳಿಂದ ಕೃತಿರಚಿಸಿದ್ದಾನೆ[6]. ಹೀಗಾಗಿ ಈ ಕವಿಯ ಕುಲಾವಲಂಬನೆ ಅಥವಾ ಮತಾವಲಂಬನೆಯ ಹಿನ್ನಲೆಯನ್ನು ಹುಡುಕಹೋದವರಿಗೆ ಯಾವೊಂದು ಸುಳುಹೂ ದೊರೆಯದು.

ಉದ್ದೇಶ, ಸ್ವರೂಪ, ವ್ಯಾಪ್ತಿ

ತಲೆಮಾರಿನಿಂದ ತಲೆಮಾರಿಗೆ ಸಾಗಿಬಂದ ಭೌತಿಕ ಹಾಗೂ ಸಾಂಸ್ಕೃತಿಕ ಜ್ಞಾನಸಂಪತ್ತು ಶ್ರುತಿ ಪಾತಳಿಯಿಂದ ಲಿಪಿ ಮಾಧ್ಯಮದ ಮೂಲಕ ಕೃತಿಪಾತಳಿಗೆ ಇಳಿದುಬಂತು. ಕವಿಯಮೂಲಕ ಕಾವ್ಯರೂಪತಾಳಿ ಲೋಕಾರ್ಪಿತವಾದ ಅಪಾರ ಸಂಖ್ಯಾ ಕೃತಿಗಳನ್ನು ಉಪಯೋಗಿಸಲು ಸಂರಕ್ಷಿಸಲು ಅನೇಕ ಲಿಪಿಕಾರರು ಶ್ರಮಿಸುತ್ತಾ ಬಂದಿದ್ದಾರೆ, ಇದರ ಫಲವಾಗಿ ನಮಗೆ ಇಂದು ಅನೇಕ ಕೃತಿಗಳು ಲಭ್ಯವಾಗಿವೆ.

ಆದರೆ ಎಲ್ಲ ಲಿಪಿಕಾರರೂ 'ಪುಸ್ತಕೇ ಯಾದೃಶ್ಯಂ ದೃಷ್ಟಂ ತಾದೃಶಂ ಲಿಖಿತಂ ಮಯಾ' ಎಂಬ ಆದರ್ಶವನ್ನು ಏಕ ರೀತೀಯವಾಗಿ ಪಾಲಿಸಲಿಲ್ಲ. ಪ್ರಕ್ಷೇಪಕಾರರ

ಹಾವಳಿಯಿಂದ ಕವಿಯ ಮೂಲಪಾಠ ಅರಿಯುವುದು ಕಷ್ಟಸಾಧ್ಯವಾಗಿದೆ. ಇದರೊಂದಿಗೆ ಲಿಪಿಕಾರರಿಂದಾದ ಕಣ್ತಪ್ಪು ಕೈತಪ್ಪು ಕಿವಿತಪ್ಪುಗಳೂ ಸೇರಿಕೊಂಡು ಇನ್ನಷ್ಟುಗೊಂದಲಗಳನ್ನುಂಟುಮಾಡಿವೆ.

ಮೂಲಮಹಾಭಾರತ ರಚಿತವಾದ ಕಾಲದಲ್ಲಿ ಸುಮಾರು ೨೪೦೦೦ ಶ್ಲೋಕಗಳನ್ನು ಹೊಂದಿದ್ದು ಪ್ರಕ್ಷೇಪಕಾರರಿಂದಾಗಿ ಉತ್ತರದ ಪಾಠ ೮೨೧೩೬ ಶ್ಲೋಕಗಳೂ ಹಾಗೂ ದಕ್ಷಿಣದ ಪಾಠ ೯೫೫೮೬ ಶ್ಲೋಕಗಳಾಗಿ ಬೆಳೆದು ಬಂದಿರುವುದು ಪ್ರಕ್ಷೇಪಗಳಿಂದ ಒಂದು ಜನಪ್ರಿಯ ಕೃತಿ ಯಾವ ಹಂತಕ್ಕೆ ಬೆಳೆಯುತ್ತದೆ ಎಂಬುದಕ್ಕೆ ಉದಾಹರಣೆಯಾಗಿದೆ.

ಕುಮಾರವ್ಯಾಸ ಭಾರತದಲ್ಲಿಯೂ ಈ ರೀತಿಯ ಪ್ರಕ್ಷೇಪಗಳನ್ನು ಸಾಕಷ್ಟುಸಂಖ್ಯೆಯಲ್ಲಿ ಕಾಣಬಹುದು ಉದಾಹರಣೆಗೆ ಇದರ ಒಂದು ಹಸ್ತಪ್ರತಿ ಕೆ೨೦೫ ರಲ್ಲಿ ೧೦ ಪ್ರಾರ್ಥನಾ ಪದ್ಯಗಳು ದೊರೆತರೆ ಇನ್ನೊಂದು ಪ್ರತಿ ಕೆ.೨೧೮ ರಲ್ಲಿ ೪೭ ಪ್ರಾರ್ಥನಾ ಪದ್ಯಗಳು ದೊರೆತಿವೆ.

ಪ್ರಭುಲಿಂಗಲೀಲೆಯ ಕರ್ತೃ ಚಾಮರಸ ತನ್ನ ಕಾವ್ಯದಲ್ಲಿ ೨೫ ಸಂಧಿ ೧೧೧೧ ಪದ್ಯಗಳಿವೆ ಎಂದು ತಿಳಿಸಿರುವಂತೆ ಕುಮಾರವ್ಯಾಸ ತನ್ನ ಕಾವ್ಯದಲ್ಲಿ ಎಷ್ಟು ಸಂಧಿ ಎಷ್ಟು ಪದ್ಯಗಳಿವೆ ಎಂದು ತಿಳಿಸಿದ್ದಿದ್ದರೆ ಪ್ರಕ್ಷೇಪಕಾರರ ಹಾವಳಿ ತಪ್ಪುತ್ತಿತ್ತು. ಹೀಗೆ ತಿಳಿಸದಿರುವ ಕಾರಣ ಕವಿಯ ಮೂಲಪಾಠವನ್ನು ಗುರುತಿಸುವುದು ಕಷ್ಟಸಾಧ್ಯವಾಗಿದೆ.

ಕವಿಯ ಸ್ವಹಸ್ತಾಕ್ಷರದ ಪ್ರತಿ ದೊರೆತಿದ್ದಲ್ಲಿ ಈ ಯಾವಸಮಸ್ಯೆಯಾಗಲೀ, ಪಾಠಪರಿಷ್ಕರಣದ ಅವಶ್ಯಕತೆಯಾಗಲೀ ಇರುತ್ತಿರಲಿಲ್ಲ, ಆದರೆ ಕುಮಾರವ್ಯಾಸಭಾರತದ ಕೃತಿಯ ಕವಿಯ ಸ್ವಹಸ್ತಾಕ್ಷರ ಪ್ರತಿಯಿರಲಿ ಕವಿಯ ಕಾಲದ ಬೇರೆ ಪ್ರತಿಯೂ ದೊರೆತಿಲ್ಲ. ದೊರೆತಿರುವ ಪ್ರತಿಗಳಲ್ಲಿ ಅತ್ಯಂತ ಪ್ರಾಚೀನ ಹಸ್ತಪ್ರತಿಯೆಂದರೆ ಕ್ರಿ.ಶ.೧೫೫೪ರದು, ದೊರೆತಿರುವ ಈ ೧೬ ೧೭ನೇ ಶತಮಾನದ

ಪ್ರತಿಗಳೂ ಬೆರಳೆಣಿಕೆಯಷ್ಟು ಜೊತೆಗೆ ಆ ಪ್ರತಿಗಳಲ್ಲಿ ತ್ರುಟಿತವಾದ ಭಾಗಗಳು, ಅಪೂರ್ಣ ಪದ್ಯಗಳೇ ಹೆಚ್ಚು. ಉಳಿದ ಪ್ರತಿಗಳೆಲ್ಲಾ ೧೮-೧೯ನೇ ಶತಮಾನಕ್ಕೆ ಸೇರಿದ ಪ್ರತಿಗಳು. ಕವಿಯಕಾಲದಿಂದ ಹೆಚ್ಚು ದೂರವಾದಷ್ಟೂ ಪ್ರತಿಗಳಲ್ಲಿ ಪ್ರಕ್ಷೇಪಗಳು ಹೆಚ್ಚಾಗಿ ಸೇರ್ಪಡೆಯಾಗಿರುತ್ತವೆ.

ದೊರೆತಿರುವ ಹಸ್ತಪ್ರತಿಗಳನ್ನು ಬಳಸಿಕೊಂಡು ಅವುಗಳ ಸಹಾಯದಿಂದ ಕವಿಯ ಮೂಲಪಾಠವನ್ನು ಪತ್ತೆಹಚ್ಚುವ ಪಾಠಪರಿಷ್ಕರಣಾ ಕಾರ್ಯವು ಗ್ರಂಥಸಂಪಾದನೆಯ ಮಹತ್ವದ ಕಾರ್ಯವಾಗಿದೆ.

ಕುಮಾರವ್ಯಾಸ ಭಾರತದ ಅನೇಕ ಆವೃತ್ತಿಗಳು ಕಳೆದ ಮೂರು ಶತಮಾನಗಳಿಂದಲೂ ಬಿಡಿಬಿಡಿಯಾಗಿ, ಇಡಿಯಾಗಿ ಸಂಪಾದಿತವಾಗಿ ಮುದ್ರಣಗೊಂಡಿವೆ. ಗ್ರಂಥಸಂಪಾದನಾ ಶಾಸ್ತ್ರವು ಸೈದ್ಧಾಂತಿಕವಾಗಿ ನೆಲೆಗೊಳ್ಳುವ ಮುನ್ನವೇ ಪ್ರಕಟವಾದ ಈ ಅನೇಕ ಆವೃತ್ತಿಗಳಲ್ಲಿ ಪ್ರಕ್ಷೇಪಗಳು ಮೂಲ ಪಾಠದೊಂದಿಗೆ ಸೇರಿಕೊಂಡು ಹಸ್ತಪ್ರತಿಯಲ್ಲಿ ಇರುವಂತೆಯೇ ಪ್ರಕಟವಾಗಿದೆ. ಈ ಕೆಲವೊಂದು ಪ್ರತಿಗಳ ಪುನರ್ ಮುದ್ರಣದ ಸಂದರ್ಭದಲ್ಲಿ ಪಾಠಪರಿಷ್ಕರಣಗಳೂ ನಡೆದರೂ ಪ್ರಕ್ಷೇಪಭಾಗಗಳು ಸಂಪೂರ್ಣವಾಗಿ ತೆಗೆದುಹಾಕಲು ಸಾಧ್ಯವಾಗಿಲ್ಲ. ಈ ಕಾರ್ಯವನ್ನು ಅನೇಕ ವಿದ್ವಾಂಸರು ಪ್ರತ್ಯೇಕ ಪರ್ವಗಳನ್ನು ಒಂದೊಂದಾಗಿ ಪರಿಷ್ಕರಿಸಿ ತಮಗೆ ತೋಚಿದ ಲಭ್ಯಮೂಲಗಳಿಂದ ಸಾಬೀತಾದ ವಿಚಾರಗಳನ್ನು ಮಂಥಿಸಿ ಹಲವಾರು ರೀತಿಯ ಪಾಠಗಳನ್ನು ನೀಡಿದ್ದಾರೆ. ಕೆಲವೊಮ್ಮೆ ಪಾಠಾಂತರಗಳು ಲಭ್ಯವಿದ್ದರೂ ಕ್ಲಿಷ್ಟಪಾಠಗಳನ್ನು ಬೇಧಿಸಲು ಅನ್ಯಮೂಲಗಳನ್ನು ಆಶ್ರಯಿಸಬೇಕಾಗುತ್ತದೆ. ಬಾಹ್ಯಸಾಕ್ಷಿಗಳಿಗೆ ಹೋಗುವ ಮೊದಲು ಸಿಕ್ಕಿರುವ ಪಾಠಾಂತರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಕವಿಪಾಠದ ಹೊಳಹುಗಳು ದೊರೆಯುವ ಸಾಧ್ಯತೆಗಳಿವೆ.

ಮಹೋನ್ನತ ಕೃತಿಯ ಮಹಾಕವಿ ಕುಮಾರವ್ಯಾಸನ ಬಗ್ಗೆ ಸಾಕಷ್ಟು ವಿಮರ್ಶಾಗ್ರಂಥಗಳು ಪ್ರಕಟವಾಗಿ ಅವನ ಕರ್ಣಾಟಕಭಾರತ ಕಥಾಮಂಜರಿಯ ಕಾವ್ಯದ

ವಿವಿಧ ಆವೃತ್ತಿಗಳು ಹಸ್ತಪ್ರತಿಗಳನ್ನು ಆಧರಿಸಿ ಪ್ರಕಟವಾಗಿವೆ (ವಿವರಣೆಗೆ ಅನುಬಂಧ-೧ ನೋಡಿ) ಕಾವ್ಯಭಾಗದ ವಿವಿಧ ಪರ್ವಗಳು ಪ್ರತ್ಯೇಕವಾಗಿ ಪ್ರಕಟವಾಗಿವೆ (ವಿವರಣೆಗೆ ಅನುಬಂಧ-೨ ನೋಡಿ). ಪರ್ವಗಳ ಸಂಗ್ರಹಗಳು ಪ್ರಕಟವಾಗಿವೆ (ವಿವರಣೆಗೆ ಅನುಬಂಧ-೩ ನೋಡಿ). ಇನ್ನು ಕುಮಾರವ್ಯಾಸನ ಕಾವ್ಯದ ಹಲವಾರು ಗದ್ಯಾನುವಾದಗಳು ಪ್ರಕಟವಾಗಿವೆ (ವಿವರಣೆಗೆ ಅನುಬಂಧ-೪ ನೋಡಿ). ೨೦೦ ಕ್ಕೂ ಹೆಚ್ಚಿನ ಪರಿಚಯಾತ್ಮಕ ಹಾಗೂ ವಿಮರ್ಶಾತ್ಮಕ ಲೇಖನಗಳು ಪ್ರಕಟವಾಗಿವೆ ವಿವರಣೆಗೆ ಅನುಬಂಧ-೫,೬,೭ ನೋಡಿ) ೧೬ಕ್ಕೂ ಹೆಚ್ಚು ಪಿ.ಎಚ್.ಡಿ ಹಾಗೂ ಎಂ.ಫಿಲ್ ನ ಮಹಾ ಪ್ರಬಂಧಗಳು ಪ್ರಕಟವಾಗಿವೆ (ವಿವರಗಳಿಗೆ ಅನುಬಂಧ-೮ ನೋಡಿ) ಇಷ್ಟೆಲ್ಲ ಗ್ರಂಥಲೇಖನಗಳು ಹೊರಬಿದ್ದಿದ್ದರೂ ಗ್ರಂಥಸಂಪಾದನೆಯ ದೃಷ್ಟಿಯಿಂದ ಮೂಲಕಾವ್ಯದ ಆವೃತ್ತಿಗಳು ಪ್ರಕಟವಾಗಿರುವುದು ಕೆಲವೇ ಕೆಲವು ಎಂದರೆ ತಪ್ಪಲ್ಲ. ಅದರಲ್ಲೂ ವಿಮರ್ಶಾತ್ಮಕವಾಗಿ ಗ್ರಂಥಸಂಪಾದನೆಯ ಹಿನ್ನೆಲೆಯಲ್ಲಿ ಆದಿಪರ್ವ, ಭೀಷ್ಮಪರ್ವ, ಉದ್ಯೋಗಪರ್ವದ ಬಗ್ಗೆ ಸಂಶೋಧನಾ ಪ್ರಬಂಧಗಳು ರಚಿತವಾಗಿದ್ದರೂ, ವಿರಾಟಪರ್ವದ ಬಗ್ಗೆ ಗ್ರಂಥ ಸಂಪಾದನೆ ದೃಷ್ಟಿಯಿಂದ ಪ್ರತ್ಯೇಕ ಸಂಪ್ರಬಂಧ ರಚನೆಯಾಗಿಲ್ಲ. ಅಲ್ಲಲ್ಲಿ ಪಾಠಾಂತರಗಳ ಬಗ್ಗೆ ಬಿಡಿಬಿಡಿಯಾಗಿ ಚರ್ಚೆ ಆಗಿದೆ. ಆದರೆ ಸಮಗ್ರವಾಗಿ ಆಗಿಲ್ಲ. ಈ ಕಾರಣದಿಂದ ಮೊದಲಬಾರಿಗೆ ವಿರಾಟಪರ್ವದ ಮುದ್ರಿತ ಆವೃತ್ತಿಗಳನ್ನು ಗ್ರಂಥಸಂಪಾದನಾ ದೃಷ್ಟಿಯಿಂದ ಈ ಸಂಪ್ರಬಂಧದಲ್ಲಿ ಸಮೀಕ್ಷಿಸಲು ಯತ್ನಿಸಲಾಗಿದೆ.

ಪ್ರಸ್ತುತ ಸಂಪ್ರಬಂಧದಲ್ಲಿ ವಿರಾಟಪರ್ವಸಂಪಾದನಾ ಕಾರ್ಯದಲ್ಲೇ ಅತೀಹೆಚ್ಚು ಹಸ್ತಪ್ರತಿಗಳನ್ನು (೨೦ ಪ್ರತಿಗಳು) ಬಳಸಿಕೊಂಡು ಶುದ್ಧ ಪರಿಷ್ಕರಣ ಕೊಡಲು ಯತ್ನಿಸಿರುವ ಎಸ್.ಎನ್.ಕೃಷ್ಣಜೋಯಿಸ್ ಅವರಿಂದ ಸಂಪಾದಿತವಾದ ಕುಮಾರವ್ಯಾಸ ಭಾರತದ ವಿರಾಟಪರ್ವ ಕೃತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ. ಈ ಕೃತಿಗೂ ಮೊದಲು ಹಾಗು ಇದರ ನಂತರವೂ ಕೆಲವು ವಿರಾಟಪರ್ವ ಸಂಪಾದನೆಗಳು ನಡೆದಿವೆಯಾದರೂ ಇದರಷ್ಟು ಪಾಂಡಿತ್ಯಪೂರ್ಣ ಸಮಗ್ರ ಗ್ರಂಥಸಂಪಾದನಾ ಕಾರ್ಯವು ವಿರಾಟಪರ್ವದ ಇತರ ಸಂಪಾದನೆಗಳಲ್ಲಿ ಕಾಣುವುದಿಲ್ಲ, ಆದಕಾರಣ

ತೌಲನಿಕ ಅಧ್ಯಯನಕ್ಕೆ ಇಲ್ಲಿ ಕೃಷ್ಣಜೋಯಿಸರ ಈ ಕೃತಿಯನ್ನೇ ಆಧಾರಪ್ರತಿಯನ್ನಾಗಿ ಇಟ್ಟುಕೊಳ್ಳಲಾಗಿದೆ ಹಾಗೂ ಇದರೊಂದಿಗೆ ಈ ಕೆಳಗೆ ನೀಡಿರುವಂತೆ ಇತರ ವಿವಿಧ ಆವೃತ್ತಿಗಳ ಸಮೀಕ್ಷೆಮಾಡಿ ಪಾಠಾಂತರಗಳ ಬಗ್ಗೆ ಚರ್ಚೆಮಾಡಿ ಪಾಠ ಪರಿಷ್ಕರಣೆಗೆ ವಿಶೇಷ ಗಮನ ನೀಡಲಾಗಿದೆ. ವಿರಾಟಪರ್ವದ ಹಸ್ತಪ್ರತಿಗಳಿಂದ ಅಚ್ಚುಪ್ರತಿ ರೂಪುಗೊಂಡಾಗ ಆದ ಬದಲಾವಣೆಗಳನ್ನು ಅಧ್ಯಯನ ಮಾಡಲಾಗಿದೆ. ವಿರಾಟಪರ್ವದ ವಿವಿಧ ಆವೃತ್ತಿಗಳ ತೌಲನಿಕ ಅಧ್ಯಯನವನ್ನು ಪಾಠ ಪರಿಷ್ಕರಣದ ಹಿನ್ನೆಲೆಯಲ್ಲಿ ಗಮನಿಸಿ ಕವಿಯ ಪಾಠ ಅಥವಾ ಕವಿಯ ಪಾಠಕ್ಕೆ ಸಮೀಪಪಾಠ ನಿರ್ಣಯಕ್ಕೆ ಯತ್ನಿಸಲಾಗಿದೆ, ಹಾಗೂ ಇದರೊಂದಿಗೆ ಮೂಲ ಸಂಸ್ಕೃತಭಾರತದ ವಿರಾಟಪರ್ವದ ನಿರೂಪಣೆಗೂ ಕುಮಾರವ್ಯಾಸಭಾರತದ ನಿರೂಪಣೆಗೂ ಇರುವ ಅಂತರವನ್ನೂ ಗಮನಿಸಲಾಗಿದೆ.

ಕೃಷ್ಣಜೋಯಿಸರ ಸಂಪಾದಿತ ಕೃತಿಯೊಂದಿಗೆ ಇಲ್ಲಿ ತೌಲನಿಕವಾಗಿ ಬಳಸಿಕೊಳ್ಳಲಾಗಿರುವ ಇತರ ಕೃತಿಗಳವಿವರ ಹೀಗಿವೆ.

ಕರ್ಣಾಟಕ ಮಹಾಭಾರತ: ವಿರಾಟಪರ್ವ (ಸಂ) ಆರ್.ಶ್ಯಾಮಶಾಸ್ತ್ರಿ

ಕರ್ಣಾಟ ಭಾರತ ಕಥಾಮಂಜರಿ (ಸಂ) ಕುವೆಂಪು & ಮಾಸ್ತಿವೆಂಕಟೇಶ ಅಯ್ಯಂಗಾರ್

ವಿರಾಟಪರ್ವ ಸಂಗ್ರಹ (ಸಂ) ತ.ಸು.ಶಾಮರಾವ್

ಕುಮಾರವ್ಯಾಸ ಭಾರತ ಸಂಗ್ರಹ (ಸಂ) ಎಂ.ವಿ.ಸೀತಾರಾಮಯ್ಯ

ವಿರಾಟಪರ್ವ ಸಂಗ್ರಹ (ಸಂ) ಕೆ.ಎಂ. ಕೃಷ್ಣರಾವ್

ಹಸ್ತಪ್ರತಿಗಳನ್ನು ನೇರವಾಗಿ ಪರಿಶೀಲಿಸಲು ಸಮಯದ ಅಭಾವದಿಂದ ಸಾಧ್ಯವಾಗದಿದ್ದರೂ ಹಸ್ತಪ್ರತಿಗಳಿಂದ ಸಂಪಾದಿತವಾದ ಅಚ್ಚಾದ ಕಾವ್ಯಭಾಗಗಳನ್ನು ಅಲ್ಲಿಕೊಟ್ಟಿರುವ ಇತರ ಹಸ್ತಪ್ರತಿಗಳ ಪಾಠಾಂತರಗಳನ್ನು ಗಮನಿಸಿ ಪಾಠನಿರ್ಣಯಗಳನ್ನು ಪರಿಶೀಲಿಸಲಾಗಿದೆ.

ಟಿಪ್ಪಣಿಗಳು

೧. ಎಸ್.ಆರ್. ರಾಮಸ್ವಾಮಿ, ಮಹಾಭಾರತದ ಬೆಳವಣಿಗೆ, ಕಾವ್ಯಾಲಯ, ಮೈಸೂರು ೧೯೭೨. ಪುಟ.೯.

೨. ಎಂ.ಎಂ.ಕಲಬುರ್ಗಿ, ಮಾರ್ಗ(ಸಂ.೧) ನರೇಶ & ಕಂ, ಬೆಂಗಳೂರು. ೧೯೮೮

೩. ಕೃಷ್ಣಮೂರ್ತಿ ಹನೂರು, ಕುಮಾರವ್ಯಾಸ ಭಾರತ:ಜನಪದ ಪರಂಪರೆಯೊಳಗೆ, ಕುಮಾರವ್ಯಾಸಭಾರತ ಸಾಂಸ್ಕೃತಿಕ ಮುಖಾಮುಖಿ, ಪುಟ ೯೧, ಹಂಪಿ

೪. ಡಾ||ಶ್ರೀನಿವಾಸ ಹಾವನೂರ, ಕುಮಾರವ್ಯಾಸನ ಕಾಲನಿರ್ಣಯ, ಪ್ರಜಾವಾಣಿ ಸಾಪ್ತಾಹಿಕ ಪುರವಣಿ ದಿನಾಂಕ.೩೦.೮.೨೦೦೯

೫. ಧನಂಜಯ ಕುಂಬ್ಳೆ, 'ಕುಮಾರವ್ಯಾಸನ ಕಾಲನಿರ್ಣಯ ; ತುಳುವಿನಲ್ಲಿಯೂ ಆಧಾರ', ಪ್ರಜಾವಾಣಿ ಸಾಪ್ತಾಹಿಕ ಪುರವಣಿ, ದಿನಾಂಕ.೧೩.೯.೦೯.

೬ ಶ್ಯಾಮಸುಂದರ ಬಿದರಕುಂದಿ, ಪ್ರಸ್ತಾವನೆ, ಕುಮಾರವ್ಯಾಸನ ಕನ್ನಡ ಭಾರತ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡಭವನ, ಜೆ.ಸಿ.ರಸ್ತೆ, ಬೆಂಗಳೂರು.

ಅಧ್ಯಾಯ - ೨

ಕುಮಾರವ್ಯಾಸಭಾರತದ ಹಸ್ತಪ್ರತಿಗಳು



ಹಸ್ತಪ್ರತಿಗಳು ನಮ್ಮನಾಡಿನ ಅಮೂಲ್ಯ ಸಂಪತ್ತು, ಇದು ನಮ್ಮ ಸಾಹಿತ್ಯ, ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಹಿಂದಿನವರ ಸಾಧನೆಗಳನ್ನು ಮುಂದಿನಪೀಳಿಗೆಗೆ ತಲುಪಿಸುವ ಸಾಧನವಾಗಿವೆ.

ಮುದ್ರಣ ಸೌಲಭ್ಯವಿಲ್ಲದಿದ್ದ ಕಾಲದಲ್ಲಿ ಓಲೆಗರಿಯ ಮೇಲೆ ಕಂಠದಿಂದ ಕೊರೆದು, ಅನನ್ಯ ಶ್ರದ್ಧೆಯಿಂದ ಆ ಸಾಹಿತ್ಯವನ್ನು ಅಭ್ಯಾಸಿಸಿ, ಅದನ್ನು ಕಾಯ್ದುಕೊಂಡುಬಂದ ಹಿರಿಯರಿಂದ ಅಂದಿನ ಅಪೂರ್ವ ಸಾಹಿತ್ಯ ನಮ್ಮ ಸಂಪತ್ತಾಗಿ ಉಳಿದಿದೆ. ಅಂದಿನವರಿಗೆ ಕಾವ್ಯಪಾರಾಯಣ ಸಾಂಸ್ಕೃತಿಕ ಜೀವನದ ಅಂಗವಾಗಿತ್ತು, ಇದರೊಂದಿಗೆ ಪುಣ್ಯಕಾರ್ಯವೆಂದು ಬಗೆದು ಹಸ್ತಪ್ರತಿಗಳ ಅನೇಕ ಪ್ರತಿಗಳನ್ನು ಸಿದ್ಧಪಡಿಸಿ ಹಂಚುತ್ತಿದ್ದ ಉದಾಹರಣೆಗಳೂ ಸಿಗುತ್ತವೆ. ಪ್ರತಿಲಿಪೀಕರಣ ಹಲವರಿಗೆ ಜೀವನೋಪಾಯದ ಸಾಧನವಾಗಿಯೂ ಇತ್ತು. ಹಾಗಾಗಿ ಕೆಲವು ಪ್ರಸಿದ್ಧಕಾವ್ಯಗಳ ಪ್ರತಿಗಳು ಬಹಳ ಸಂಖ್ಯೆಯಲ್ಲಿ ದೊರಕುತ್ತದೆ.

ಕುಮಾರವ್ಯಾಸಭಾರತ ಹೆಚ್ಚು ಪ್ರಸಿದ್ಧವಾದ ಕಾವ್ಯವಾದ್ದರಿಂದ ಕೇವಲ ಕರ್ನಾಟಕದ ಪ್ರಾಂತ್ಯಗಳಲ್ಲಷ್ಟೇಅಲ್ಲದೆ ಕರ್ನಾಟಕದ ಹೊರಗೂ ಇದರ ಹಸ್ತಪ್ರತಿಗಳು ದೊರಕುತ್ತವೆ. ಕನ್ನಡಭಾಷೆಯ ಈ ಗ್ರಂಥ ತೆಲುಗು, ತಮಿಳು, ಸಂಸ್ಕೃತ, ಮರಾಠಿ,

ತಿಗಳಾರಿ, ಮಲಯಾಳಂ ಮೊದಲಾದ ಲಿಪಿಗಳಲ್ಲಿ ದೊರೆಯುತ್ತವೆ. ಭಾಷಾಗಡಿಯನ್ನುದಾಟಿ ಕುಮಾರವ್ಯಾಸಭಾರತ ಹೊರನಾಡಿನಲ್ಲಿ ಪ್ರಸಿದ್ಧಿ ಪಡೆದ ಕಾವ್ಯವಾಗಿತ್ತೆಂದಮೇಲೆ ಕನ್ನಡನಾಡಿನಲ್ಲಿ ಈ ಕಾವ್ಯದ ಪ್ರಚಾರ ಪ್ರಭಾವೆಷ್ಟಿತ್ತೆಂದು ಊಹಿಸಲಸಾಧ್ಯವಾಗುತ್ತದೆ. ಅಲ್ಲದೆ ಭಾರತದ ಕಥೆ ಎಲ್ಲರಿಗಾಗಿ ಇದು 'ಪೃಥ್ವಿಯಮರರು ಕೇಳೆ ವೇದಪವಿತ್ರರಹರು, ಮಹಾವಿಭೂತಿಯ ಕ್ಷತ್ರಿಯರು ಕೇಳಿದರೆ ಶೌರ್ಯ ಸಮರ್ಥರೆನಿಸುವರು, ಅರ್ಥಪರಿಯೆನಿಸುವರು ವಿಶರು, ಚತುರ್ಥಕರು ಧನಧಾನ್ಯದಿಂದ ಸಮರ್ಥರೆನಿಸುಗುಂ ವೊಲಿದು ಭಾರತ ಕಥೆಯ ಕೇಳ್ದೆಡೆಗೆ' । ಹಾಗಾಗಿ ಚತುರ್ವರ್ಣದವರಿಗೂ ಇದು ಬೇಕು. 'ಕನ್ನಡ ಭಾರತದ ಕಾವ್ಯಶೈಲಿಯು ಇಂದು ಕವಿಗಳಿಗೆ ಸ್ಫೂರ್ತಿಯನ್ನು, ರಸಿಕರಿಗೆ ಆನಂದವನ್ನು ಸಂಶೋಧಕರಿಗೆ ವಿಸ್ತಾರ ಕ್ಷೇತ್ರವನ್ನೂ, ವಿದ್ಯಾರ್ಥಿಗಳಿಗೆ ವಿಪುಲ ಅನ್ನವನ್ನು ಕೊಟ್ಟು ಸಾಹಿತ್ಯಕ್ಷೇತ್ರದ ಚತುರ್ವರ್ಗಗಳನ್ನು ತಣಿಸುತ್ತಿದೆ' ಕುಮಾರವ್ಯಾಸ ಬರೆದಿರುವುದು ಇಂತಹ ಭಾರತದ ಕಥೆಯಾದ್ದರಿಂದ ಇವನ ಕಾವ್ಯದ ಮಹತ್ವಹೆಚ್ಚಾಗಿತ್ತೆಂದು ತಿಳಿಯಬಹುದು.

ಅಲ್ಲದೆ ಕುಮಾರವ್ಯಾಸನ ಈ ಭಾರತ ಅರಸುಗಳಿಗೆ ವೀರ, ದ್ವಿಜರಿಗೆ ಪರಮವೇದದಸಾರ, ಯೋಗೀಶ್ವರರ ತತ್ತ್ವವಿಚಾರ, ಮಂತ್ರಿಜನಕೆ ಬುದ್ಧಿಗುಣ, ವಿರಹಿಗಳ ಶೃಂಗಾರ, ವಿದ್ಯಾಪರಿಣತರಲಂಕಾರ, ಕೋವಿದರಿಗೆ ಮೆಚ್ಚು, ಜಾಣರ ಜೀವ, ಪರಿಣತರ ಹರಣ, ಮೂರ್ಖರಿಗೂ ಪಿಯೂಷಾವಗಾಹನ, ಸರಳರ ಕುತೂಹಳಿಕೆಯಾಗುವಂತೆ ರಚಿತವಾದ್ದರಿಂದ ಸಮಾಜದ ಸಕಲ ಜನವರ್ಗವೂ ಮೆಚ್ಚಿರುವ ಈ ಮೇರುಕೃತಿ ಅಪಾರಜನಮನ್ನಣೆಯಿಂದ ಅನೇಕ ಪ್ರತಿಗಳಾಗಿ ಈ ಹಿಂದೆ ಹೇಳಿದಂತೆ ಕರ್ನಾಟಕದಾದ್ಯಂತವಲ್ಲದೆ ಹೊರನಾಡಿನಲ್ಲೂ ಈ ಕಾವ್ಯದ ಹಸ್ತಪ್ರತಿಗಳು ದೊರಕುವಂತಾಗಿದೆ.

ಹಸ್ತಪ್ರತಿಗಳ ಅನಾದರಣೆ: ಹಸ್ತಪ್ರತಿಗಳು ವಿಪುಲವಾಗಿ ಬೆಳೆದು ಬಂದಿದ್ದರೂ ಕಾಲಕ್ರಮದಲ್ಲಿ ದೇಶಕಾಲ ಪರಿಸರಗಳ ಪ್ರಭಾವದಿಂದ ಅನೇಕವೇಳೆ ಜನತೆಯ ಅಜ್ಞಾನ, ಅಶ್ರದ್ಧೆ ಮತ್ತು ಔದಾಸೀನ್ಯಗಳ ಫಲವಾಗಿ ಅವು ಮೂಲೆಗುಂಪಾಗಿ,

ಕೀಟಗಳಿಗೆ ಆಹಾರವಾಗಿ ನಶಿಸಿಹೋಗಿವೆ. ಅವುಗಳನ್ನು ಸಂರಕ್ಷಿಸಲಾರದೆ ನದಿಯಪಾಲೋ, ಬೆಂಕಿಯಪಾಲೋ ಮಾಡಿರುವುದೂ ಉಂಟು ಇದರ ಫಲ ಇಂದು ನಮಗೆ ಅನೇಕ ಅಮೂಲ್ಯಕೃತಿಗಳು ಅಲಭ್ಯವಾಗಿವೆ. ಕುಮಾರವ್ಯಾಸಭಾರತ ಪ್ರತಿಗಳು ಹೇರಳವಾಗಿ ದೊರೆಯುವುದಾದರೂ ಸಂಪೂರ್ಣ ದಶಪರ್ವಗಳಿರುವ ಪ್ರತಿಗಳು ಅಪರೂಪ. ಅಲ್ಲದೆ ದೊರೆಯುವ ಪ್ರತಿಗಳೆಲ್ಲವೂ ೧೮ನೇ ಶತಮಾನದಿಂದೀಚಿನವು. ಕುಮಾರವ್ಯಾಸನ ಕಾಲದ ಹಸ್ತಪ್ರತಿಗಳು ಕಾರಣಾಂತರಗಳಿಂದಾಗಿ ದುರ್ಲಭವಾಗಿವೆ.

'ಈ ವರೆಗೆ ಸುಮಾರು ೧೨೦ ಕುಮಾರವ್ಯಾಸಭಾರತದ ಹಸ್ತಪ್ರತಿಗಳು ವಿವಿಧ ವಿಶ್ವವಿದ್ಯಾನಿಲಯ ಹಾಗೂ ಇತರ ಹಸ್ತಪ್ರತಿ ಭಂಡಾರಗಳಲ್ಲಿ ಸಿಗುತ್ತವೆ'[೨]. ಮದ್ರಾಸು ವಿಶ್ವವಿದ್ಯಾನಿಲಯದ ಹಸ್ತಪ್ರತಿ ಭಂಡಾರ,ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಭಂಡಾರ, ಬೆಂಗಳೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ, ಉಸ್ಮಾನಿಯ ವಿಶ್ವವಿದ್ಯಾನಿಲಯ, ಮಂಗಳೂರು ವಿಶ್ವವಿದ್ಯಾನಿಲಯ, ಮೈಸೂರು ಅರಮನೆಯ ಸರಸ್ವತೀಭಂಡಾರ, ಕನ್ನಡ ಸಾಹಿತ್ಯ ಪರಿಷತ್ತು, ಕೆಳದಿ ವಸ್ತುಸಂಗ್ರಹಾಲಯ ಮೊದಲಾದೆಡೆಗಳಲ್ಲಿ ಕುಮಾರವ್ಯಾಸಭಾರತದ ಹಸ್ತಪ್ರತಿಗಳು ದೊರೆಯುತ್ತವೆ.

ದೊರೆತಿರುವ ಹಸ್ತಪ್ರತಿಗಳಲ್ಲಿ ಕೇವಲ ಬೆರಳೆಣಿಕೆಯ ಪ್ರತಿಗಳನ್ನು ಹೊರತುಪಡಿಸಿ ಉಳಿದವೆಲ್ಲಾ ೧೮ನೇ ಶತಮಾನದ ಈಚೆಗೆ ಲಿಖಿತವಾದವು, ಅಲ್ಲದೆ ಈ ಎಲ್ಲಾ ಪ್ರತಿಗಳಲ್ಲೂ ಸಂಪೂರ್ಣ ದಶಪರ್ವಗಳು ಸಿಗುವುದಿಲ್ಲ. ಸುಮಾರು ೧೫ ಪ್ರತಿಗಳು ಮಾತ್ರ ಎಲ್ಲ ಪರ್ವಗಳನ್ನೂ ಒಳಗೊಂಡಿವೆ ಉಳಿದಪ್ರತಿಗಳು ಕೆಲವು ಬಿಡಿಪರ್ವ ಅಥವಾ ನೀತಿಸಂಗ್ರಹಗಳಾಗಿವೆ. ಶಕಟರೇಫ ಪ್ರಯೋಗಗಳಿರುವ ಹಸ್ತಪ್ರತಿಗಳು ಒಂದೆರಡುಮಾತ್ರ.

ದೊರೆತಿರುವ ಕೆಲವು ಹಸ್ತಪ್ರತಿಗಳವಿವರ ಹೀಗಿವೆ.

ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿರುವ ಪ್ರತಿಗಳ ವಿವರ.

೧) **‘ಕೆ ೨೦೫’:** ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರತಿಯನ್ನು ‘ಕ’ ಸಂಕೇತನೀಡಿ ಬಳಸಲಾಗುತ್ತಿದೆ. ಕಾಲದ ದೃಷ್ಟಿಯಿಂದ ಇದೇ ಪ್ರಾಚೀನವಾದ ಕುಮಾರವ್ಯಾಸಭಾರತದ ಹಸ್ತಪ್ರತಿ. ಈ ಪ್ರತಿಯಲ್ಲಿ ಕೆಲವೆಡೆ ಗ್ರಂಥಪಾತಗಳಿದ್ದರೂ ಇದು ಹೆಚ್ಚು ವಿಶ್ವಾಸಾರ್ಹವಾದ ಪ್ರತಿಯೆಂದು ತಿಳಿದು ಸಾಮಾನ್ಯವಾಗಿ ಎಲ್ಲ ಕುಮಾರವ್ಯಾಸ ಸಂಪಾದನಾಕಾರರೂ ಈ ಪ್ರತಿಯನ್ನು ಬಳಸಿಕೊಂಡಿದ್ದಾರೆ. ಈ ಪ್ರತಿಯ ಪಾಠಕ್ಕೂ ಉಳಿದ ಪ್ರತಿಗಳ ಪಾಠಕ್ಕೂ ಬಹಳವ್ಯತ್ಯಾಸವಿದೆ ಅಲ್ಲದೆ ಈ ಪ್ರತಿಯಲ್ಲಿ ಶಕಟರೇಫದ ಬಳಕೆಯಿದೆ. ಇದರ ಪ್ರತಿ ಓಲೆಯಲ್ಲೂ ೧೬ರಿಂದ ೧೯ರವರೆಗೆ ಪಂಕ್ತಿಗಳಿದ್ದು ಅಕ್ಷರಗಳು ಸ್ಫುಟವಾಗಿವೆ, ಪರ್ವಾರಂಭ ಮತ್ತು ಪರ್ವಾಂತ್ಯಗಳಲ್ಲಿ ಕೆಲವು ಚಿತ್ರಗಳನ್ನು ಬರೆದಿದೆ. ಕೊನೆಯಲ್ಲಿನ ಒಂದು ಶಿಥಿಲವಾದ ಓಲೆಯಲ್ಲಿ ಗ್ರಂಥವನ್ನು ಪ್ರತಿಮಾಡಿಮುಗಿಸಿದ ಕಾಲ ಪರ್ವಗಳ ಹೆಸರು, ಸಂಧಿ ಮತ್ತು ಪದ್ಯಗಳ ಸಂಖ್ಯಾವಿಚಾರಗಳಿವೆ. ಇದರಿಂದ ಈ ಪ್ರತಿಯು ಶಾ.ಶ.೧೪೭೬ (ಕ್ರಿ.ಶ.೧೫೫೪) ರರಲ್ಲಿ ಪ್ರತಿಯಾದುದೆಂದು ತಿಳಿದುಬರುತ್ತದೆ. ಈ ಓಲೆಗರಿಗಳು ಒಂದುಅಡಿಉದ್ದ ಹಾಗೂ ೨ ಅಂಗುಲ ಅಗಲವಾಗಿವೆ.

೨) **‘ಕೆ-೬೮’ :** ವಿರಾಟಪರ್ವದ ೧೧ನೇ ಸಂಧಿ ೧೦ ಪದ್ಯದವರೆಗಿನ ಪಾಠ ಲಭ್ಯವಿರುವ ಈ ಪ್ರತಿಯಲ್ಲಿ ಕಡೆಯ ಮೂರು ಪತ್ರಗಳು ಮುರಿದಿವೆ ಹಾಗೂ ಕೆಲವೆಡೆ ಹುಳುತಿಂದು ರಂಧ್ರಗಳಾಗಿವೆ. ಅಕ್ಷರಗಳು ಸ್ಫುಟವಾಗಿವೆ, ಕೆಲವೆಡೆಗಳಲ್ಲಿ ಮಾತ್ರ ಶಕಟರೇಫ ಬಳಕೆಯಾಗಿದೆ. ೧೨.೫ ಅಂಗುಲ ಉದ್ದ ಹಾಗೂ ೧.೩ ಅಂಗುಲ ಅಗಲವಾಗಿರುವ ಈ ಓಲೆಯ ಪ್ರತಿ ಗರಿಗಳಲ್ಲಿ ೬ಸಾಲು ೫೪ ಅಕ್ಷರಗಳನ್ನು ಕೊರೆಯಲಾಗಿದೆ.

೩) **'ಕೆ–೧೨೧೮'** 'ಕೆ–೨೬೬' ಪ್ರತಿಯನ್ನು ಕೆಬಹುತೇಕ ಹೋಲುವ ಇಲ್ಲಿನ ಪದ್ಯಗಳಲ್ಲಿ ಕೆಲವೊಂದು ಹೊಸಪಾಠಾಂತರಗಳೂ ಕಂಡುಬರುತ್ತವೆ. ಬರವಣಿಗೆಯ ಮಧ್ಯ ಕೆಲವು ಪದಗಳು ಬಿಟ್ಟುಹೋಗಿವೆ. ಶಕಟರೇಫದ ಪ್ರಯೋಗ ಇಲ್ಲಿ ಕಂಡುಬರುವುದಿಲ್ಲ. 'ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು ೧೭೨೫ನೇ ವರ್ತಮಾನಕ್ಕೆ ಸಲ್ಲುವ ದುರ್ಮತಿ ಸಂವತ್ಸರದ ಶ್ರಾವಣ ಸೋಮವಾರ ವಿರಾಟಪರ್ವ ಪ್ರಸಂಗ ಬರೆಯಲು ಪ್ರಾರಂಭ' ಎಂದು ಪ್ರತಿಮಾಡಿದಕಾಲ ತಿಳಿಸಿದೆ. ಇದರ ಕಾಲ ಕ್ರಿ.ಶ.೧೮೦೩ ಎಂದು ತಿಳಿದು ಬರುತ್ತದೆ. ವಿರಾಟಪರ್ವದ ೧೨ ಸಂಧಿ, ೭೬೬ ಪದ್ಯಗಳು ಇಲ್ಲಿವೆ. ಈ ತಾಳೆಗರಿಗಳ ಉದ್ದ ೨೦.೨ ಅಂಗುಲ ಹಾಗೂ ಅಗಲ ೨.೧ ಅಂಗುಲ.

೪) **'ಕೆ ೧೨೧೨':** ಈ ತಾಳೆಗರಿಯ ಪ್ರತಿಯು ವಿರಾಟಪರ್ವದ ೧೧ ಸಂಧಿ ೬೭೫ ಪದ್ಯಗಳನ್ನು ಹೊಂದಿದೆ. ಈ ಗರಿಗಳು ೧೯.೫ ಅಂಗುಲ ಉದ್ದ ಹಾಗೂ ೨.೨ ಅಂಗುಲ ಅಗಲವನ್ನು ಹೊಂದಿವೆ. ಪ್ರತಿ ಗರಿಗಳು ೧೧ ಸಾಲು ಹಾಗೂ ಪ್ರತಿ ಸಾಲಿನಲ್ಲಿ ೧೦೫ ಅಕ್ಷರಗಳಿವೆ. ವಿರಾಟಪರ್ವವು ೧೪೦ನೆಯ ಗರಿಯಿಂದ ಪ್ರಾರಂಭವಾಗಿ ೧೬೭ ಗರಿಯಲ್ಲಿ ಮುಗಿದಿದೆ. ೧೬೬ನೆಯ ಗರಿಮಾತ್ರ ಕಾಣೆಯಾಗಿದೆ. ೧೪೪ ಹಾಗೂ ೧೫೭ನೆಯ ಗರಿಗಳು ತುಂಡಾಗಿವೆ. ಈ ಪ್ರತಿಯ ಪದ್ಯಗಳು ಗ ಜ ಪ್ರತಿಯ ಪಾಠವನ್ನೇ ಹೋಲುತ್ತವೆ.

೫) **'ಕೆ ೯೪೮' :** ಇದು ಮದ್ರಾಸ್ ಪ್ರಾಚ್ಯಕೋಶಾಗಾರದ Do.Nos.44-51&60 ನೇ ಪ್ರತಿಯಾಗಿದ್ದು ಈಗ ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿದೆ. ಇದು ೧೮.೨ ಅಂಗುಲ ಉದ್ದ ಹಾಗೂ ೧.೩ ಅಂಗುಲ ಅಗಲವಾಗಿವೆ. ಪ್ರತಿಗರಿಯಲ್ಲಿ ೬ ಸಾಲುಗಳು ಪ್ರತಿಸಾಲಿನಲ್ಲಿ ೮೨ ಅಕ್ಷರಗಳು ಇವೆ. ಅಕ್ಷರಗಳು ಸ್ಫುಟವಾಗಿವೆ. ೩೩೧ನೆಯ ಗರಿಯಿಂದ ವಿರಾಟಪರ್ವವು ಆರಂಭವಾಗಿ ೩೯೯ನೆಯ ಗರಿಯಲ್ಲಿ ಮುಗಿದಿದೆ ಹಾಗೂ ಈ ಪರ್ವದಲ್ಲಿ ೧೧ ಸಂಧಿಗಳೂ ೭೦೯ ಪದ್ಯಗಳೂ ಇವೆ. ಅಂಗಡಿಯ ಸಾಮಾನ್ಯಮುದ್ರಣಕ್ಕಾಗಿ ಈ ಪ್ರತಿಯನ್ನು ಬಳಸಿಕೊಂಡಿರುವುದು ಕಂಡುಬರುತ್ತದೆ.

೬). <u>**‘ಕೆ ೧೩೪೪’:**</u> ಈ ಪ್ರತಿಯು ೧೯ ಅಂಗುಲ ಉದ್ದ ಹಾಗೂ ೧.೬ ಅಂಗುಲ ಅಗಲವಾಗಿದೆ. ಪ್ರತಿಸಾಲಿನಲ್ಲಿ ೧೦೮ ಅಕ್ಷರಗಳಿವೆ, ಅಕ್ಷರಗಳು ಸ್ಫುಟವಾಗಿ ಸುಂದರವಾಗಿವೆ. ಕಡೆಯ ೩ ಗರಿಗಳು ಮುರಿದಿರುವುದನ್ನು ಹೊರತುಪಡಿಸಿದರೆ ಪ್ರತಿಯ ಸ್ಥಿತಿಯು ಉತ್ತಮವಾಗಿದೆ. ೧ನೆಯ ಗರಿಯಿಂದಲೇ ವಿರಾಟಪರ್ವ ಆರಂಭವಾಗಿ ೪೪ನೆಯ ಗರಿಯಲ್ಲಿ ಮುಗಿದಿದೆ. ಈ ಪರ್ವದಲ್ಲಿ ೧೧ ಸಂಧಿಗಳೂ ೬೪೬ ಪದ್ಯಗಳೂ ಇವೆ. ಸಂಧಿ ಪ್ರಾರಂಭದ ಗರಿಯ ಪಾರ್ಶ್ವದಲ್ಲಿ ಆ ಸಂಧಿಯಲ್ಲಿ ಬರುವ ಕಥೆಯ ಸೂಚನೆ ಇದೆ.

೭). <u>**‘ಕೆ ೩೦೧’:**</u> ೧೮.೨ ಅಂಗುಲ ಉದ್ದ, ೧.೪ ಅಂಗುಲ ಅಗಲವಾಗಿದೆ. ಪ್ರತಿಗರಿಯಲ್ಲಿ ೫ ಸಾಲೂ ಪ್ರತಿಸಾಲಿನಲ್ಲಿ ೭೮ ಅಕ್ಷರಗಳಿವೆ. ಅಕ್ಷರಗಳು ಸ್ಪಷ್ಟವಾಗಿವೆ. ಈ ಪ್ರತಿಯಲ್ಲಿ ವಿರಾಟಪರ್ವದ ಸಮಗ್ರಪಾಠ ದೊರಕುತ್ತದೆ. ಈ ಪರ್ವದ ೧೧ ಸಂಧಿ ೬೯೯ ಪದ್ಯಗಳಿವೆ. ಕಡೆಯಲ್ಲಿ ಸನ್ ೧೮೭೦ನೆಯಿಸ್ವಿ ಮೇ ತಾರಿಖು ೧೨ಕ್ಕೆ ಸರಿಯಾದ ಪ್ರಮೋದೂತ ಸಂವತ್ಸರದ ವೈಶಾಖ ಶುದ್ಧ ೧೨ಲೂ ಸಂಪೂರ್ಣಂ ಎಂದಿದೆ.

೮). <u>**‘ಕೆ ೫೪೧’**</u> : ೧೮ ಅಂಗುಲ ಉದ್ದ ೨.೨ ಅಂಗುಲ ಅಗಲವಿರುವ ಈ ಪ್ರತಿಯ ಪ್ರತಿಗರಿಯಲ್ಲಿ ೧೨ ಸಾಲುಗಳು ಪ್ರತಿಸಾಲಿನಲ್ಲಿ ೧೦೦ ಅಕ್ಷರಗಳಿವೆ ೧೪೫ನೆಯ ಗರಿಯಲ್ಲಿ ವಿರಾಟಪರ್ವವು ಆರಂಭವಾಗಿ ೧೯೯ನೆಯ ಗರಿಯಲ್ಲಿ ಮುಗಿದಿದೆ. ಈ ಪರ್ವದ ೧೦ ಸಂಧಿ ೭೧೦ ಪದ್ಯಗಳಿವೆ. ಪ್ರತಿಯ ಪಾಠ ಶುದ್ಧವಾಗಿದ್ದು ಇದರ ಕಾಲ ಕ್ರಿ.ಶ.೧೮೧೦ ಎಂದೂ ಇದನ್ನು ಸೋಮನಪಲ್ಲಿ ನಾರಣಪ್ಪನು ಘೋರಬಲಿ ಕಾಳಯ್ಯನಾಯ್ಯರ್‌ಗೆ ಬರೆದು ಕೊಟ್ಟಿರುವುದಾಗಿ ಹೇಳಲಾಗಿದೆ.

೯) <u>**‘ಕೆ ೭೦’:**</u> ೨೬.೮ ಅಂಗುಲ ಉದ್ದ ೨.೨ ಅಂಗುಲ ಅಗಲವಿರುವ ಪ್ರತಿಗರಿಗಳಲ್ಲಿ ೧೧ ಸಾಲು ಪ್ರತಿಸಾಲಿನಲ್ಲಿ ೧೫೦ ಅಕ್ಷರಗಳಿವೆ. ಅಕ್ಷರಗಳು ವಿರಳವಾಗಿಯೂ,

ಸುಂದರವಾಗಿಯೂ ಇವೆ. ಶಾಲಿವಾಹನಶಕ ೧೭೬೩ನೇ ಶಾರ್ವರಿ ಸಂವತ್ಸರದ ಪುಷ್ಯ ಶುದ್ಧತೃತೀಯ ದಂದು ಆರಂಭಿಸಿ ಶುಭಕೃತ್ ಸಂವತ್ಸರದ ಕಾರ್ತಿಕಶುದ್ಧ ಪ್ರಥಮಾ ಶುಕ್ರವಾರ ಮುಗಿಸಿರುವುದಾಗಿ ತಿಳಿಸಿರುವುದರಿಂದ ಇದರ ಕಾಲ ಕ್ರಿ.ಶ.೧೮೪೧ ಎಂದಾಗುತ್ತದೆ. ಪ್ರತಿಸಂಧಿಯಲ್ಲೂ ಸಂಧಿಪ್ರಾರಂಭವಾಗುವ ಸಾಲಿನ ಪಕ್ಕದಲ್ಲಿ ಆ ಸಂಧಿಯ ಕಥಾಸೂಚನೆಯಿದೆ. ಪ್ರತಿಗರಿಯಲ್ಲೂ ಪಂಕ್ತಿಗೆ ಕ್ರಮಾಂಕವನ್ನು ಹಾಕಿದೆ. ಈ ಕಟ್ಟಿನ ೧೬೩ನೆಯ ಗರಿಯಲ್ಲಿ ವಿರಾಟಪರ್ವದ ಕಥೆ ಪ್ರಾರಂಭವಾಗಿ ೧೮೦ನೆಯ ಗರಿಯಲ್ಲಿ ಮುಗಿದಿದೆ. ಈ ಪರ್ವದಲ್ಲಿ ೧೧ ಸಂಧಿ ೭೭೫ ಪದ್ಯಗಳಿವೆ

೧೦). **<u>'ಕೆ ೨೬೬' :</u>** ಈ ಪ್ರತಿಗೆ 'ಜ' ಎಂಬ ಸಂಕೇತ ನೀಡಲಾಗಿದೆ ಇದರ ಉದ್ದ ೨೫.೬ ಅಂಗುಲ ಹಾಗೂ ಅಗಲ ೨.೨ ಅಂಗುಲ. ಪ್ರತಿ ಗರಿಯಲ್ಲಿ ೧೦ ಸಾಲುಗೂ ಪ್ರತಿಸಾಲಿನಲ್ಲಿ ೧೬೦ ಅಕ್ಷರಗಳಿವೆ. ಅಕ್ಷರಗಳು ಸ್ಫುಟವಾಗಿವೆ. ಇಲ್ಲಿ ಒಟ್ಟು ೧೮೪ ಗರಿಗಳಿವೆ. ಇದು ಆದಿ ಪಂಚಕ ಪರ್ವಗಳನ್ನು ಒಳಗೊಂಡಿದೆಯಾದರು ಉದ್ಯೋಗಪರ್ವ ಕೇವಲ ೪ ಸಂಧಿಗಳು ಮಾತ್ರಇದೆ. ೧೧ಸಂಧಿ ೭೦೫ ಪದ್ಯಗಳಿರುವ ವಿರಾಟಪರ್ವ ೬೧ನೆಯ ಗರಿಯಲ್ಲಿ ಪ್ರಾರಂಭವಾಗಿ ೮೦ನೆಯ ಗರಿಯಲ್ಲಿ ಮುಗಿದಿದೆ. ಈ ಪ್ರತಿಯ ಕಾಲ ಕ್ರಿ.ಶ.೧೮೭೬ ಎಂದು ತಿಳಿದುಬರುತ್ತದೆ.

೧೧) **<u>'ಕೆ ೫೪೦':</u>** ಈ ಗರಿಗಳು ೧೯.೭ ಅಂಗುಲ ಉದ್ದ ೨.೫ ಅಂಗುಲ ಅಗಲವಿದೆ. ಪ್ರತಿಗರಿಯಲ್ಲಿ ೧೨ ಸಾಲುಗಳು ಪ್ರತಿಸಾಲಿನಲ್ಲಿ ೮೬ ಅಕ್ಷರಗಳಿವೆ. ಬರವಣಿಗೆ ಸ್ಫುಟವಾಗಿದೆ. ಇಲ್ಲಿ ಆದಿಪರ್ವದಿಂದ ಉದ್ಯೋಗಪರ್ವದವರೆಗಿನ ಕಾವ್ಯಭಾಗವಿದೆ. ಪ್ರತಿಕಾರ ಹುಲುಕೋಡ ಮಂಜಯ್ಯ ವಿಕ್ರಮ ಸಂವತ್ಸರದ ಕರ್ತಿಕಶುದ್ಧ ತೃತೀಯಾ ಬುಧವಾರದಂದು ಪ್ರತಿಮಾಡಲು ಆರಂಭಿಸಿ ವಿಷುಸಂವತ್ಸರದ ಆಷಾಢಶುದ್ಧದ್ವಾದಶೀ ಮುಗಿಸಿರುವುದಾಗಿ ತಿಳಿಸಿದ್ದಾನೆ ಹಾಗಾಗಿ ಇದರ ಕಾಲ ಸುಮಾರು ಕ್ರಿ.ಶ.೧೮೨೦ ಎಂದು ಅಂದಾಜುಮಾಡಲಾಗಿದೆ. ಪ್ರತಿಸಂಧಿಯಲ್ಲೂ ಸಂಧಿ ಪ್ರಾರಂಭವಾಗುವ ಗರಿಯ ಅಂಚಿನಲ್ಲಿ ಆ ಸಂಧಿಯ ವಿಷಯಸೂಚಿ ಇದೆ. ೧೪೧ನೆಯ ಗರಿಯಲ್ಲಿ ವಿರಾಟಪರ್ವ

ಪ್ರಾರಂಭವಾಗಿ ೧೫೭೭ನೆಯ ಗರಿಯಲ್ಲಿ ಮುಗಿದಿದೆ ಈ ಪರ್ವದಲ್ಲಿ ೧೦ ಸಂಧಿಗಳೂ ೬೬೦ ಪದ್ಯಗಳೂ ಇವೆ.

೧೨) **ಕೆ.೩೦೫:** ಈ ಪ್ರತಿಯ ಉದ್ದ ೧೯.೩ ಅಂಗುಲ ಹಾಗೂ ಅಗಲ ೨.೨ ಅಂಗುಲ. ಇದರ ಪ್ರತಿಗರಿಯಲ್ಲೂ ೧೦ ಸಾಲು ಹಾಗೂ ಪ್ರತಿಸಾಲಿನಲ್ಲೂ ೮೦ ಅಕ್ಷರಗಳು ಇವೆ. ಅಕ್ಷರಗಳು ಸ್ಫುಟವಾಗಿವೆ. ಆದಿಪರ್ವದಿಂದ ಉದ್ಯೋಗಪರ್ವದವರೆಗಿನ ಕಾವ್ಯವನ್ನು ಹೊಂದಿದೆ. ಇದನ್ನು ಕಮುರವಾಡಿ ದೇವನಪೈಯನ ಮಗ ಹೊನ್ನೈಯನು ಸರ್ವಜಿತ್ ಸಂವತ್ಸರದ ಚೈತ್ರಶುದ್ಧ ೧೪ ಚಂದ್ರವಾರ ಹಸ್ತನಕ್ಷತ್ರ ಕರ್ಕಾಟಕಲಗ್ನದಲ್ಲಿ ಪ್ರತಿಮಾಡಿಮುಗಿಸಿ ಕುಮಾರ್ರು ದೇವೈಯ್ಯನವರಿಗೆ ಕೊಟ್ಟಿರುತ್ತಾನೆ. ೧೫೫ನೆಯ ಗರಿಯಲ್ಲಿ ವಿರಾಟಪರ್ವ ಪ್ರಾರಂಭವಾಗಿ ೧೮೧ನೆಯ ಗರಿಯಲ್ಲಿ ಮುಗಿದಿದೆ. ಈ ಪರ್ವದಲ್ಲಿ ಒಟ್ಟು ೧೧ ಸಂಧಿಗಳೂ ೬೭೫ ಪದ್ಯಗಳೂ ಇವೆ. ಇದರಕಾಲ ಕ್ರಿ.ಶ.೧೭೬೭.

೧೩) **'ಕೆ.ಎ.೫೮೭':** ಇದು ಕಾಗದದ ಪ್ರತಿ. ಇದರ ಉದ್ದ ೧೩.೫ ಅಂಗುಲ ಹಾಗೂ ಅಗಲ ೮.೩ ಅಂಗುಲ. ಪ್ರತಿಹಾಳೆಯಲ್ಲಿ ೨೪ ಸಾಲು ಪ್ರತಿಸಾಲಿನಲ್ಲಿ ೪೬ ಅಕ್ಷರಗಳಿವೆ. ಈ ಕಟ್ಟಿನಲ್ಲಿ ಸಮಗ್ರಭಾರತ ಇದೆ. ಹಾಳೆಗಳು ಬಿಡಿಬಿಡಿಯಾಗಿವೆ. ಅಕ್ಷರಗಳು ಸ್ಫುಟವಾಗಿದ್ದರೂ ಓದುವುದು ಕಷ್ಟವೆನಿಸುತ್ತದೆ. ಪ್ರತಿಪರ್ವಕ್ಕೂ ಬೇರೆಬೇರೆ ಪತ್ರಸಂಖ್ಯೆಯಿದೆ. ೧ ರಿಂದ ೨೯ ಪುಟಗಳಲ್ಲಿ ವಿರಾಟಪರ್ವದ ಕಾವ್ಯವಿದೆ. ಈ ಪರ್ವದಲ್ಲಿ ೧೧ ಸಂಧಿ ೭೧೪ ಪದ್ಯಗಳಿವೆ. ಪರ್ವದ ಕೊನೆಯಲ್ಲಿ ಶಕ ೧೮೩೬ ಆನಂದ ಸಂವತ್ಸರ ಕರ್ತಿಕಶುದ್ಧ ೧೩ ಸ್ಥಿರವಾರ ಮುರ್ಡಿಮುತಾಲಿಕ ವೆಂಕಪಾ ಸ್ವಹಸ್ತಾಕ್ಷರದಿಂದ ವಿರಾಟಪರ್ವವನ್ನು ಬರೆದುದು ಎಂದಿದೆ.

೧೪) **'ಕೆ ೧೬೩':** ಈ ಓಲೆಪ್ರತಿಯ ಉದ್ದ ೧೪.೯ ಅಂಗುಲ ಅಗಲ ೧.೯ ಅಂಗುಲ. ಪ್ರತಿ ಗರಿಯಲ್ಲಿ ೧೧ ಸಾಲುಗಳು, ಪ್ರತಿಸಾಲಿನಲ್ಲಿ ೮೫ ಅಕ್ಷರಗಳು ಇವೆ. ವಿರಾಟಪರ್ವದಿಂದ ಪ್ರಾರಂಭವಾಗಿ ಗದಾಪರ್ವದ ಅಂತ್ಯದವರೆಗಿನ ಕಥೆ ಇಲ್ಲಿದೆ. ೩೨೪ನೆಯ ಕ್ರಮಾಂಕದಿಂದ ಪ್ರಾರಂಭವಾಗಿ ೩೭೪ನೆಯ ವರೆಗಿನ ಗರಿಗಳಲ್ಲಿ

ವಿರಾಟಪರ್ವದ ಕಾವ್ಯಭಾಗವಿದೆ. ಈ ಪರ್ವದಲ್ಲಿ ಒಟ್ಟು ೧೧ ಸಂಧಿ ೬೩೪ ಪದ್ಯಗಳಿವೆ. ಅಕ್ಷರಗಳು ಸಣ್ಣವಾದರೂ ಸ್ಫುಟವಾಗಿವೆ.

೧೫) <u>'ಕೆ ೨':</u> ಉದ್ದ ೨೪.೬ ಅಂಗುಲ ಅಗಲ ೨ ಅಂಗುಲವಿರುವ ಈ ತಾಳೆಪ್ರತಿಯ ಪ್ರತಿಗರಿಗಳಲ್ಲಿ ೧೧ ಸಾಲುಗಳು ಪ್ರತಿಸಾಲಿನಲ್ಲಿ ೧೩೦ ಅಕ್ಷರಗಳು ಇವೆ. ಈ ಕಟ್ಟಿನಲ್ಲಿ ೧ನೆಯ ಗರಿ ಇರುವುದಿಲ್ಲ. ೨ರಿಂದ ೩೦೧ ಕ್ರಮಾಂಕ ಪೂರ್ತಿಗರಿಗಳಿವೆ. ಆದಿಪರ್ವದಿಂದ ಗದಾಪರ್ವ ೯ನೆಯ ಸಂಧಿ ೪೧ ಪದ್ಯದವರೆಗಿನ ಗ್ರಂಥಭಾಗವಿದೆ. ಕೆಲವುಗರಿಗಳು ತ್ರುಟಿತವಾಗಿವೆ, ಶಕಟರೇಫವಿದೆ, ಆದರೆ ಪ್ರಯೋಗ ತಪ್ಪಾಗಿದೆ. ೧೫೫ನೆಯ ಗರಿಯಲ್ಲಿ ವಿರಾಟಪರ್ವ ಪ್ರಾರಂಭವಾಗಿ ೧೬೨ನೆಯ ಗರಿಯಲ್ಲಿ ಮುಗಿದಿದೆ. ಈ ಪರ್ವದಲ್ಲಿ ಒಟ್ಟು ೧೦ ಸಂಧಿಗಳೂ ೬೦೭ ಪದ್ಯಗಳೂ ಇವೆ. ಗರಿಗಳು ಪ್ರಾಚೀನವಾಗಿ ಕಂಡುಬರುತ್ತವೆ. ಆದಿಪರ್ವದ ಪ್ರತಿಸಂಧಿಯ ಪ್ರಾರಂಭದಲ್ಲಿ ಪದ್ಯಗಳನ್ನು ಹಾಡಲು ಅನುಕೂಲವಾಗುವಂತೆ ರಾಗಗಳನ್ನು ಬರೆದಿರುವುದು ಈ ಪ್ರತಿಯ ವೈಶಿಷ್ಟ್ಯ. ಪ್ರತಿಮಾಡಿದ ಕಾಲವಾಗಲೀ, ಪ್ರತಿಕಾರನವಿಚಾರವಾಗಲೀ ತಿಳಿದುಬರುವುದಿಲ್ಲ. ಪರ್ವಾರಂಭದಲ್ಲಿ 'ಶ್ರೀಮತೇ ರಾಮಾನುಜಾಯ ನಮಃ' ಎಂದು ಬರೆದಿರುವುದರಿಂದ ಈ ಪ್ರತಿಕಾರನು ಶ್ರೀವೈಷ್ಣವಮತಕ್ಕೆ ಸೇರಿದವನಾಗಿರಬಹುದು.

೧೬) <u>'ಕೆ ೨೫೦':</u> ಊದ್ದ ೧೮.೫ ಅಂಗುಲ, ಅಗಲ ೨ ಅಂಗುಲ ವಿರುವ ಈ ತಾಳೆಗರಿಯ ಪ್ರತಿಗರಿಯಲ್ಲಿ ೧೦ ಸಾಲುಗಳು ಪ್ರತಿಸಾಲಿನಲ್ಲಿ ೯೦ ಅಕ್ಷರಗಳು ಇವೆ. ೧ನೆಯ ಗರಿಯಲ್ಲಿ ಆದಿಪರ್ವ ಪ್ರಾರಂಭವಾಗಿ ೧೯೮ನೆಯ ಗರಿಯಲ್ಲಿ ವಿರಾಟಪರ್ವ ಮುಗಿದಿದೆ. ವಿರಾಟಪರ್ವದಲ್ಲಿ ಒಟ್ಟು ೧೧ ಸಂಧಿಗಳೂ ೬೮೩ ಪದ್ಯಗಳೂ ಇವೆ. ಅಕ್ಷರಗಳು ಸ್ಫುಟವಾಗಿವೆ. ಈ ಪ್ರತಿಗಳು 'ಕೆ೨' ಹಾಗೂ 'ಸ.ಭಂ೧೬೯೦' ಪ್ರತಿಯನ್ನು ಅಧಿಕವಾಗಿ ಹೋಲುತ್ತದೆ. ಕೆಲವೆಡೆಗಳಲ್ಲಿ ಮಾತ್ರ 'ಕೆ ೭೦'ನ್ನು ಅನುಸರಿಸಿದೆ. ಪ್ರತಿಯಕಾಲ ತಿಳಿದುಬಂದಿಲ್ಲ.

೧೭) <u>**‘ಸ.ಭಂ.೧೨೮೭’:**</u> ಉದ್ದ ೧೫.೫ ಅಂಗುಲ ಅಗಲ ೨.೨ ಅಂಗುಲ ಇದರ ಪ್ರತಿಗರಿಯಲ್ಲಿ ೯ ಸಾಲುಗಳು ಹಾಗೂ ಪ್ರತಿಸಾಲಿನಲ್ಲಿ ೮೨ ಅಕ್ಷರಗಳು ಇವೆ. ಈ ಕಟ್ಟಿನ ಆರಂಭದಲ್ಲಿ ಎರಡುಗರಿಗಳಿಲ್ಲ. ಆದಿಪರ್ವದಿಂದ ದ್ರೋಣಪರ್ವದ ೨೪ನೆಯ ಸಂಧಿಯವರೆಗಿನ ಪದ್ಯ ಇದರಲ್ಲಿದೆ. ಅಕ್ಷರಗಳು ಸ್ಫುಟವಾಗಿದ್ದು ಓದಲು ಅನುಕೂಲವಾಗಿದೆ. ಪ್ರತಿಯು ಪ್ರಾಚೀನವಾಗಿರುವಂತೆ ಕಾಣುತ್ತದೆ, ಇದರಲ್ಲಿ ಶಕಟರೇಫದ ಬಳಕೆಯಿದೆ. ಪ್ರತಿಯಕಾಲವಿಚಾರ ತಿಳಿಸಿಲ್ಲ. ವಿರಾಟಪರ್ವದ ೧೧ ಸಂಧಿಗಳು ೫೯೬ಪದ್ಯಗಳೂ ಇವೆ.

೧೮) <u>**‘ಸ.ಭಂ.೪೭೭’:**</u> ಈ ಪ್ರತಿಯ ಉದ್ದ ೧೨.೫ ಅಂಗುಲ ಹಾಗೂ ಅಗಲ ೨ ಅಂಗುಲ. ಪ್ರತಿಗರಿಯಲ್ಲಿ ೧೩ ಸಾಲುಗಳು, ಪ್ರತಿಸಾಲಿನಲ್ಲಿ ೭೫ ಅಕ್ಷರಗಳು ಇವೆ. ಈ ಕಟ್ಟಿನಲ್ಲಿ ಆದಿಪರ್ವದಿಂದ ಕರ್ಣಪರ್ವದಲ್ಲಿ೨೪ ಸಂಧಿವರೆಗಿನ ಕಾವ್ಯವಿದೆ. ಈ ಗ್ರಂಥವನ್ನು ರೌದ್ರಿನಾಮಸಂವತ್ಸರದ ಆಷಾಢಬಹುಳ ೪ ಗುರುವಾರದಂದು ನಾಗಮಂಗಲದ ಅಗ್ರಹಾರದ ತಿಮ್ಮಪ್ಪಣ್ಣನವರ ಪೌತ್ರರಾದ ವೆಂಗಟಾಚಾರ್ಯರ ಪುತ್ರ ದೀಕ್ಷಿತ ತಿರುವಲೆಂಗಾರರು ಪ್ರತಿಮಾಡಿರುವುದಾಗಿ ತಿಳಿಸಿದ್ದಾರೆ. ಅಕ್ಷರ ಸ್ಫುಟವಾಗಿದ್ದರೂ ಸಣ್ಣದಾಗಿರುವುದರಿಂದ ಓದುವುದು ಕಷ್ಟವಾಗಿದೆ. ಇದು ‘ಕ’ಪ್ರತಿಯನ್ನು ಅಕ್ಷರಶಃ ಹೋಲುತ್ತದೆ, ಆದರೆ ಶಕಟರೇಫದ ಪ್ರಯೋಗವಿಲ್ಲ. ವಿರಾಟಪರ್ವವು ೧೭೨ನೆಯ ಗರಿಯಲ್ಲಿ ಪ್ರಾರಂಭವಾಗಿ ೧೯೧ನೆಯ ಗರಿಯಲ್ಲಿ ಮುಗಿದಿದೆ. ಈ ಪರ್ವದಲ್ಲಿ ಒಟ್ಟು ೧೧ ಸಂಧಿಗಳೂ ೭೪೮ ಪದ್ಯಗಳೂ ಇವೆ. ಪ್ರತಿಯಕಾಲ ಕ್ರಿ.ಶ.೧೮೦೦.

೧೯) <u>**‘ಸ.ಭಂ.೧೭೮೯’:**</u> ಈ ಪ್ರತಿಯ ಉದ್ದ ೨೫.೫ ಅಂಗುಲ ಅಗಲ ೨.೨ ಅಂಗುಲ. ಪ್ರತಿಗರಿಯಲ್ಲಿ ೧೩ ಸಾಲುಗಳು ಪ್ರತಿಸಾಲಿನಲ್ಲಿ ೧೨೦ ಅಕ್ಷರಗೂ ಇವೆ. ಕೃತಿಯು ಸಮಗ್ರವಾಗಿದೆ. ವಿರಾಟಪರ್ವವು ೧೩೩ನೆಯ ಗರಿಯಲ್ಲಿ ಪ್ರಾರಂಭವಾಗಿದೆ. ಅಕ್ಷರಗಳು ಸ್ಫುಟವಾಗಿವೆ. ಈ ಪರ್ವದಲ್ಲಿ ಒಟ್ಟು ೧೧ ಸಂಧಿಗಳೂ ೬೫೪ ಪದ್ಯಗಳೂ ಇವೆ.

ವಿಕೃತಿನಾಮ ಸಂವತ್ಸರದ ಭಾದ್ರಪದ ಶುದ್ಧ ೨ ಶುಕ್ರವಾರ ಈ ಪ್ರತಿಯನ್ನು ಬರೆದು ಮುಗಿಸಿರುವುದಾಗಿ ತಿಳಿಸಿರುವುದರಿಂದ ಪ್ರತಿಯ ಕಾಲ ಕ್ರಿ.ಶ.೧೮೧೬–೧೮೨೦

೨೦) **<u>‘ಸ.ಭಂ.೧೬೯೦’ :</u>** ಉದ್ದ ೨೫ ಅಂಗುಲ ಅಗಲ ೨ ಅಂಗುಲವಿರುವ ಈ ಪ್ರತಿಯಲ್ಲಿನ ಎಲ್ಲಾಗರಿಗಳಲ್ಲು ೧೨ ಸಾಲುಗಳು ಹಾಗೂ ಪ್ರತಿಸಾಲಿನಲ್ಲಿ ೧೩೦ ಅಕ್ಷರಗಳು ಇವೆ. ಅಕ್ಷರಗಳು ಸ್ಫುಟವಾಗಿವೆ. ಶಕಟರೇಫಬಳಸಲಾಗಿದೆ. ಇದನ್ನು ಹಿರಿಸಾವೆಸ್ಥಳದ ಭೈರಾಪುರದ ಲಕ್ಷ್ಮಮ್ಮೈನವರ ಕುಮಾರ ವೆಂಕಣ್ಣನವರ ಮಗ ಲಕ್ಷೀರಮಣಯ್ಯ ಕೀಲಕ ಸಂವತ್ಸರದ ನಿಜವೈಶಾಖಶುದ್ಧ ೬ ಭಾನುವಾರ ಪ್ರತಿಮಾಡಿ ಮುಗಿಸಿ ತಿಮ್ಮಪ್ಪನಾಯಕನ ಕುಮಾರ ತಿರುಮಲನಾಯಕನಿಗೆ ಕೊಟ್ಟಿರುತ್ತಾನೆ. ಇದರಲ್ಲಿ ದಶಪರ್ವಗಳೂ ಸಂಪೂರ್ಣವಾಗಿದೆ. ವಿರಾಟಪರ್ವವು ೧೩೩ನೆಯ ಗರಿಯಲ್ಲಿ ಪ್ರಾರಂಭವಾಗಿದೆ, ಈ ಪರ್ವದಲ್ಲಿ ೧೦ ಸಂಧಿಗಳೂ ೬೫೦ ಪದ್ಯಗಳೂ ಇವೆ.

೨೧) **ಕೆ.<u>ಎ–೫೬:</u>** ಇದು ಹಸ್ತಪ್ರತಿಯಾಗಿರದೆ ೧೮೫೧ರಲ್ಲಿ ಮಂಗಳೂರಿನಲ್ಲಿ ಮುದ್ರಿತವಾದ ಕಲ್ಲಚ್ಚಿನ ಪ್ರತಿಯಾಗಿದೆ. ಇದು ಕೆ ೨೦೫ ಪ್ರತಿಯನ್ನೇ ಬಹುಮಟ್ಟಿಗೆ ಅನುಸರಿಸಿದೆಯಾದ್ದರಿಂದ ‘ಕೆ ೨೦೫’ರಲ್ಲಿನ ತ್ರುಟಿತವಾದ ಭಾಗಗಳ ಪಾಠವನ್ನು ಈ ಪ್ರತಿಯ ಮೂಲಕ ಕಾಣಬಹುದು. ಆದರೆ ಇದು ಮೊದಲ ನಾಲ್ಕುಪರ್ವಗಳನ್ನು ಮಾತ್ರ ಹೊಂದಿದೆ.

<u>ಉಸ್ಮಾನಿಯಾ ವಿಶ್ವವಿದ್ಯಾಲಯದ ಪ್ರತಿಗಳು</u>

ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕುಮಾರವ್ಯಾಸ ವಿರಚಿತ ವಿರಾಟಪರ್ವದ ಎರಡು ಹಸ್ತಪ್ರತಿಗಳು ದೊರೆಯುತ್ತವೆ[೩] ಅವುಗಳ ವಿವರ ಹೀಗಿದೆ.

೧) **<u>ಎಮ್.ಎಸ್.ನಂ.೧೧೦೦:</u>** ಈ ಪ್ರತಿಯು ೬ ೧/೨ ಅಂಗುಲ ಉದ್ದ ಹಾಗೂ ೨ ಅಂಗುಲ ಅಗಲವಾಗಿದೆ. ಪ್ರತಿ ಓಲೆಯು ೧೧ ಸಾಲುಗಳನ್ನೂ ಹಾಗೂ ಪ್ರತಿ ಸಾಲು ೪೦ ಅಕ್ಷರಗಳನ್ನು ಒಳಕೊಂಡಿದೆ. ಈ ಪ್ರತಿಯು ಉತ್ತಮ ಸ್ಥಿತಿಯಲ್ಲಿದೆ. ವಿರಾಟಪರ್ವದ

ಹನ್ನೊಂದು ಸಂಧಿಗಳು ಸಮಗ್ರವಾಗಿದ್ದು ಹನ್ನೆರಡನೆಯ ಸಂಧಿಯಲ್ಲಿ ಕೇವಲ ಒಂಬತ್ತು ಪದ್ಯಗಳು ಮಾತ್ರ ಇದ್ದು ಅಪೂರ್ಣ ಪ್ರತಿ ಎನಿಸಿಕೊಂಡಿದೆ.

೨) <u>**ಎಮ್.ಎಸ್.ನಂ.೧೫೪/೨**</u> ಈ ಪ್ರತಿಯು ೮ ೧/೨ ಅಂಗುಲ ಉದ್ದ, ೪ ೧/೨ ಅಂಗುಲ ಅಗಲವಾಗಿದೆ. ಪ್ರತಿಯೊಂದು ಗರಿಯಲ್ಲಿ ೨೨ ಸಾಲುಗಳಿದ್ದು ಪ್ರತಿಸಾಲಿನಲ್ಲಿ ೧೩ ಅಕ್ಷರಗಳನ್ನು ಹೊಂದಿದೆ. ಈ ಪ್ರತಿಯು ಉತ್ತಮಸ್ಥಿತಿಯಲ್ಲಿಲ್ಲ ಅಲ್ಲದೆ ಇಲ್ಲಿ ವಿರಾಟಪರ್ವದ ಉತ್ತರಾರ್ಧಭಾಗವನ್ನುಮಾತ್ರ ಲಿಖಿತವಾಗಿದೆ. ಎಂಟನೆಯ ಸಂಧಿಯ ೨೬ನೆಯ ಪದ್ಯದಿಂದ ಆರಂಭವಾಗಿ ೧೧ನೆಯ ಸಂಧಿಯ ೩ನೆಯ ಪದ್ಯಕ್ಕೆ ಅಂತ್ಯವಾಗಿದೆ.

<u>**ಬೆಂಗಳೂರು ವಿಶ್ವವಿದ್ಯಾಲಯದ ಪ್ರತಿಗಳು**</u>

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಇರುವ ಕೆಲವು ಕುಮಾರವ್ಯಾಸ ವಿರಚಿತ ವಿರಾಟಪರ್ವದ ಹಸ್ತಪ್ರತಿಗಳ ಉಲ್ಲೇಖ ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ಸೂಚಿಯಲ್ಲಿ ದೊರೆಯುವುದಾದರೂ ವಿವರಣೆ ದೀರ್ಘವಾಗಿಲ್ಲ.

ಹಸ್ತಪ್ರತಿಸೂಚಿಯ ಪ್ರಕಾರ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ೧೪ ಹಸ್ತಪ್ರತಿಗಳು ಲಭ್ಯ, ಅವುಗಳ ಸಂಖ್ಯೆ ಕ್ರಮವಾಗಿ. ಕೆ-೧೧೩/೧, ಕೆ-೨೦೨/೪, ಕೆ-೨೪೦/೭, ಕೆ-೨೭೧/೪, ಕೆ-೪೩೧/೨, ಕೆ-೪೩೨/೧, ಕೆ-೫೩೪/೧, ಕೆ-೫೫೧/೪, ಕೆ-೬೧೧/೪, ಕೆ-೮೫೨/೫, ಕೆ-೧೬೦೯/೪, ಕೆ-೧೬೧೦/೪, ಕೆ-೧೭೦೫/೫೧, ಬಿ-೫೧೨/೪. ಈ ಪ್ರತಿಗಳಲ್ಲಿ ೫ ಪ್ರತಿಗಳು ವಿರಾಟಪರ್ವವನ್ನು ಮಾತ್ರ ಹೊಂದಿದ್ದು ಅಪೂರ್ಣವಾಗಿವೆ. ಉಳಿದವು ವಿರಾಟಪರ್ವದ ಸಂಪೂರ್ಣ ಕಾವ್ಯಭಾಗವನ್ನು ಹೊಂದಿವೆ.

ಸೂಚಿಯಲ್ಲಿ ಲಿಪಿಕಾರರ ಹೆಸರನ್ನಾಗಲೀ ಕಾಲವನ್ನಾಗಲೀ ತಿಳಿಸಿಲ್ಲದಿರುವುದರಿಂದ ಈ ಪ್ರತಿಗಳ ಪ್ರಾಚೀನತೆ ತಿಳಿದುಬರುವುದಿಲ್ಲ. ಪ್ರತಿಗಳ ಕಾಲದ ಕಾಲಂನಲ್ಲಿ ಕ್ರಿ.ಶ.೧೪೩೦ ಎಂಬುದಾಗಿ ಕವಿಯಕಾಲವನ್ನು ಕೊಡಲಾಗಿದೆ.

ಹಸ್ತಪ್ರತಿಗಳಲ್ಲಿ ಪ್ರಕ್ಷಿಪ್ತ ಪದ್ಯಗಳು

ಹಸ್ತಪ್ರತಿಗಳು ಕಾಲದೇಶ ಮತ್ತು ಪರಿಸರಗಳ ಪ್ರಭಾವಕ್ಕೆ ಒಳಗಾಗಿರುತ್ತವೆ. ಸಾಹಿತ್ಯಾಭ್ಯಾಸಿಗಳು ಹಸ್ತಪ್ರತಿಗಳಮೇಲೆ ಟಿಪ್ಪಣಿಗಳನ್ನು, ತಮ್ಮ ಅನಿಸಿಕೆಗಳನ್ನು ಬರೆದಿರುವ ಬರಹಗಳು ಕಾಲಕ್ರಮದಲ್ಲಿ ಮೂಲದ ಅಂಗವೇ ಎಂಬಂತೆ ಮುಂದಿನ ಪ್ರತಿಕಾರರಿಂದ ಗ್ರಂಥದೊಡನೆ ಸೇರ್ಪಡೆಯಾಗಿವೆ ಇದರೊಂದಿಗೆ ಪ್ರತಿಭಾವಂತರೂ ವ್ಯುತ್ಪನ್ನಮತಿಗಳೂ ಕಾವ್ಯರಚನಾಸಮರ್ಥರೂ ಮೂಲವನ್ನು ಕೆಲವು ವೇಳೆ ಉತ್ತಮಪಡಿಸಿ, ಕೆಲವುವೇಳೆ ಕೆಡಿಸಿ, ಅರ್ಥಸೌಲಭ್ಯಕ್ಕಾಗಿ ಪಾಠಾಂತರಗಳನ್ನು ಕಲ್ಪಿಸಿ ಅಲ್ಲಲ್ಲಿ ತಮ್ಮ ಸ್ವಂತ ರಚನೆಗಳನ್ನು ಪ್ರಕ್ಷೇಪಿಸಿರುವುದೂ ಉಂಟು. ಇಂತಹ ಅನೇಕ ಕಾರಣಗಳಿಂದಾಗಿ ಒಂದೇ ಕೃತಿಯ ಹಲವು ಪ್ರತಿಗಳಲ್ಲಿ ಪಾಠವ್ಯತ್ಯಾಸಗಳು ಕಂಡುಬರುತ್ತವೆ.

ಕುಮಾರವ್ಯಾಸಭಾರತದಲ್ಲಿ ಇಂತಹ ಪ್ರಕ್ಷೇಪಗಳು ಪ್ರತಿಯೊಂದು ಸಂಧಿಯಲ್ಲೂ ಹಾಸುಹೊಕ್ಕಾಗಿ ಸೇರ್ಪಡೆಯಾಗಿದೆ. ಹಾಗಾಗಿರುವುದರಿಂದಲೇ ಈ ಮೇಲೆ ತಿಳಿಸಿರುವ ಹಸ್ತಪ್ರತಿಗಳಲ್ಲಿ ಒಂದೊಂದು ಪ್ರತಿಯಲ್ಲೂ ಒಂದೊಂದು ಸಂಖ್ಯೆಯಲ್ಲಿ ಸಂಧಿಗಳು ಪದ್ಯಗಳು ಸಿಗುತ್ತವೆ.

“ದೊರೆತಿರುವ ಹಸ್ತಪ್ರತಿಗಳಲ್ಲೇ ಪ್ರಾಚೀನಪ್ರತಿ ಎನಿಸಿಕೊಂಡಿರುವ ಹಾಗೂ ಸಾಧಾರಣವಾಗಿ ಎಲ್ಲ ಸಂಪಾದಕರಿಂದ ಬಳಸಲ್ಪಟ್ಟಿರುವ (ಕೆ–೨೦೫) ಪ್ರತಿಯೂ

ಪ್ರಕ್ಷೇಪಕಾರರ ಹಾವಳಿಯಿಂದ ಮುಕ್ತವಾಗಿಲ್ಲ”[೫]ವೆನ್ನುವುದನ್ನು ಕುರಿತು ಡಿ.ಎಲ್.ಎನ್. ಶೋಧಿಸಿ ತಿಳಿಸಿಕೊಟ್ಟಿದ್ದಾರೆ. ಇವರು ತೋರಿಸಿರುವ ಪ್ರಸಂಗ ವಿರಾಟಪರ್ವದ ಕಥಾವಸ್ತುವಿಗೆ ಸಂಬಂಧಿಸಿಲ್ಲವಾದರೂ ಇದೇ ಪ್ರತಿಯನ್ನು ಮುಖ್ಯಪ್ರತಿಯನ್ನಾಗಿರಿಸಿಕೊಂಡು ವಿರಾಟಪರ್ವವನ್ನು ಸಂಪಾದಿಸಿರುವುದರಿಂದ ಈ ಹೇಳಿಕೆಗೆ ಗಮನಕೊಡುವುದು ಸೂಕ್ತವೆನಿಸುತ್ತದೆ.

ಅಭಿಮನ್ಯುವಿನ ಮರಣವಾದಮೇಲೆ ಪಾಂಡವರು ದುಃಖ ಪಡುವುದನ್ನು ವರ್ಣಿಸುವ ಒಂದು ರಗಳೆ ದ್ರೋಣಪರ್ವದ ೧೭ನೆಯ ಸಂಧಿಯ ಅನಂತರ ಕ ಗ ಪ ಬ ಪ್ರತಿಗಳಲ್ಲಿ ದೊರಕುತ್ತದೆ. ಇಲ್ಲಿ ಸುಮಾರು ೧೦೦ ಸಾಲುಗಳಿವೆ. ಇದನ್ನು ಶೋಕರಗಳೆ ಎಂದು ಹೆಸರಿಸಿದೆ. ರಾಘವಾಂಕನ ‘ಹರಿಶ್ಚಂದ್ರ ಕಾವ್ಯ’ದಲ್ಲಿ ಲೋಹಿತಾಶ್ವನು ಸರ್ಪದಷ್ಟನಾಗಿ ಮಡಿದಮೇಲೆ ಅವನ ತಾಯಿ ಚಂದ್ರಮತಿ ದುಃಖದಿಂದ ಪ್ರಲಾಪಿಸುವವ ವರ್ಣನೆ “ಏನನೇವೆನೆಲೆ ಮಗನೆ_.” ಎಂದು ಆರಂಭವಾಗುವ ರಗಳೆಯಿದೆ. ಇದು ರಾಘವಾಂಕನ ಸ್ವಕೀಯ ರಚನೆ ಎಂದೇ ತಿಳಿದುಬಂದಿದೆ, ಈ ರಗಳೆಯ ಮಾದರಿಯನ್ನನುಸರಿಸಿ ಚಂದ್ರಮತಿ ಪ್ರಲಾಪಕ್ಕೆ ಸದೃಶ್ಯವಾದ ಸುಭದ್ರೆಯ ವಿಲಾಪ ಸಂದರ್ಭದಲ್ಲಿ ಯಾರೋ ಶೋಕರಗಳೆಯನ್ನು ಸೇರಿಸಿದ್ದಾರೆ. ಮೂರನೆ ಮಂಗರಸನ (ಕ್ರಿ.ಶ.೧೫೦೮) ‘ನೇಮಿಜಿನೇಶನ ಸಂಗತಿ’ಯಲ್ಲೂ ಇಂಥ ಒಂದು ರಗಳೆಯಿದೆ. ಹೀಗೆ ಪ್ರಕ್ಷೇಪವಾಗಿ ‘ಕೆ ೨೦೫’ ಪ್ರತಿಯಲ್ಲಿ ಸೇರ್ಪಡೆಯಾಗಿ ಬಂದಿರುವ ಈ ರಗಳೆ ಅದೇ ಪರಂಪರೆಯ ಪ್ರತಿಗಳಾದ ಗ ಪ ಬ ಪ್ರತಿಗಳಲ್ಲೂ ಸೇರಿವೆ. ಅತ್ಯಂತ ವಿಶ್ವಾಸಾರ್ಹ ಪ್ರತಿಯೆಂದು ಆರಿಸಿರುವ ಪ್ರತಿಯಲ್ಲಿಯೂ ಪ್ರಕ್ಷೇಪಗಳಿವೆ ಎಂದು ತೋರಿಸಿರುವ ಡಿ.ಎಲ್.ಎನ್ ಅವರು ಗ್ರಂಥಸಂಪಾದನಾ ಕಾರ್ಯದಲ್ಲಿ ‘ಕೆ ೨೦೫’ ಪ್ರತಿಯನ್ನು ಅಂಧಾನುಕರಣೆ ಮಾಡಲಾಗದೆಂಬ ಎಚ್ಚರಿಕೆ ನೀಡಿದ್ದಾರೆ.

ಹಸ್ತಪ್ರತಿಗಳಲ್ಲಿರುವ ಪದ್ಯಸಂಖ್ಯಾ ವಿಚಾರ:

ಈ ಮೇಲೆ ತಿಳಿಸಿರುವ ಪ್ರತಿಗಳಲ್ಲಿ 'ಕೆ-೯೮' 'ಕೆ-೫೪೧' 'ಕೆ-೫೪೦' 'ಸ.ಭಂ-೧೬೯೦' ಪ್ರತಿಗಳಲ್ಲಿ ೧೦ ಸಂಧಿಗಳೂ 'ಕೆ-೧೨೧೮' ಪ್ರತಿಯಲ್ಲಿ ೧೨ ಸಂಧಿಗಳೂ, ಉಳಿದ ೧೫ ಪ್ರತಿಗಳಲ್ಲಿ ೧೧ ಸಂಧಿಗಳ ವಿರಾಟಪರ್ವ ದೊರಕುತ್ತದೆ. ಕೆಲವು ಪ್ರತಿಗಳಲ್ಲಿ ಮಲ್ಲಕಾಳಗದ ಕಥೆಯು ಪ್ರತ್ಯೇಕ ಸಂಧಿ ಇದ್ದರೂ ಮುಂದೆ ಎರಡು ಸಂಧಿಗಳನ್ನು ಒಂದೇ ಸಂಧಿಯನ್ನಾಗಿ ಪರಿಗಣಿಸುವುದರ ಮೂಲಕ ಸಂಧಿಸಂಖ್ಯೆ ೧೧ ಆಗಿದೆ. ಎರಡು ಸಂಧಿಗಳ ಸೇರ್ಪಡೆ ಮತ್ತು ಪ್ರತ್ಯೇಕ ಸಂಧಿಯ ಜೋಡಣೆಯಿಂದ ಸಂಧಿ ಸಂಖ್ಯೆ ವ್ಯತ್ಯಾಸವಾಗಲು ಕಾರಣವಾಗಿದೆ. 'ಕೆ-೯೮' 'ಕೆ-೧೩೪೪' 'ಕೆ-೩೦೧' ಪ್ರತಿಗಳಲ್ಲಿ ಭೀಮಮಲ್ಲರ ಯುದ್ಧವನ್ನು ವರ್ಣಿಸುವ ೬೯ ಪದ್ಯಗಳಿಗುವ ಒಂದು ಸಂಧಿ ಹೆಚ್ಚಾಗಿದೆ. 'ಈ' ಪ್ರತಿಯಲ್ಲಿ ಇದೇ ಕಥೆ ೪೦ ಪದ್ಯಗಳಲ್ಲಿದೆ. 'ಕೆ-೭೦' ಪ್ರತಿಯಲ್ಲಿ ೮೫ ಪದ್ಯಗಳಲ್ಲಿ ಇದೇ ಕಥೆ ವರ್ಣಿತವಾಗಿದೆ. 'ಕೆ-೯೮' 'ಕೆ-೨೬೬' 'ಕೆ-೨೫೦' ಸ.ಭಂ-೧೬೮೯' 'ಸ.ಭಂ-೧೬೯೦' ಪ್ರತಿಗಳಲ್ಲಿ ನಾಲ್ಕನೆಯ ಸಂಧಿಗೆ ಮೊದಲು ಈ ಕಥೆಯನ್ನೇ ನಿರೂಪಿಸುವ ಒಂದು ಅಧಿಕ ಸಂಧಿ ಇದೆ. 'ಕೆ-೩೦೧', `ಕೆ-೧೨೧೨', 'ಕೆ-೫೪೧' 'ಕೆ-೨' 'ಸ.ಭಂ-೧೨೮೬' ಪ್ರತಿಗಳಲ್ಲಿ ಇತರ ಬಹುಸಂಖ್ಯಾ ಪ್ರತಿಗಳಲ್ಲಿರುವ ಐದನೆ ಸಂಧಿಯ ಸೂಚನೆಯ ಪದ್ಯವಿದ್ದು ನಾಲ್ಕು ಮತ್ತು ಐದನೆಯ ಸಂಧಿಗಳೆರಡರ ಪದ್ಯಗಳು ಒಟ್ಟಿಗೆ ಸೇರಿ ಒಂದೇ ಸಂಧಿಯಾಗಿದೆ. 'ಕೆ-೯೮' 'ಕೆ-೧೩೪೪' 'ಕೆ-೭೦' 'ಕೆ-೨೬೬' ಕೆ-೨೫೦' 'ಸ.ಭಂ-೧೬೮೯' 'ಸ.ಭಂ-೧೬೯೦' ಪ್ರತಿಗಳಲ್ಲೂ ಮಲ್ಲಕಾಳಗದ ಅಧಿಕ ಸಂಧಿ ಆದಮೇಲೆ ನಾಲ್ಕು ಮತ್ತು ಐದನೆಯ ಸಂಧಿಗಳೆರಡೂ ಸೇರಿ ಒಂದೇ ಆಗಿ ಮುಂದುವರಿದಿದೆ. 'ಸ.ಭಂ-೧೨೮೬' ಪ್ರತಿಯಲ್ಲಿ ಸಾಮಾನ್ಯವಾಗಿ ಇತರ ಬಹುಸಂಖ್ಯಾ ಪ್ರತಿಗಳಲ್ಲಿ ದೊರಕುವ ೭ನೇ ಸಂಧಿಯ ಸುಮಾರು ೨೭ ಪದ್ಯಗಳವರೆಗೆ ಒಂದು ಸಂಧಿಯಾಗಿದ್ದು ಮುಂದಿನ ಪದ್ಯಗಳು ಪ್ರತ್ಯೇಕ ಸಂಧಿಯಾಗಿದೆ. ಹೀಗೆ ತಮತಮಗೆ ತೋರಿದಂತೆ ಪ್ರತಿಕಾರರ ಮಾರ್ಪಾಡು ಮತ್ತು ಸೇರ್ಪಡೆಯಿಂದಾಗಿ ಸಂಧಿ ಸಂಖ್ಯೆ ವ್ಯತ್ಯಾಸವಾಗಲು ಕಾರಣವಾಗಿದೆ.

ಹಸ್ತಪ್ರತಿಗಳ ಬಳಕೆ : ಹಸ್ತಪ್ರತಿಯನ್ನು ಬಳಸಿಕೊಂಡು ಗ್ರಂಥಸಂಪಾದನೆ ಮಾಡುವುದು ಬಹಳ ತೊಡಕಿನಕಾರ್ಯ, ಇದಕ್ಕೆ ಸಾಕಷ್ಟು ಸಮಯ ಹಾಗೂ ಶ್ರಮದ ಅಗತ್ಯವಿರುವುದನ್ನು ಎಂ.ಎಂ.ಕಲುಬುರ್ಗಿಯವರು ಎ.ವಿ.ಪ್ರಸನ್ನರ 'ಕನ್ನಡಭಾರತ'ದ ಮುನ್ನುಡಿಯಲ್ಲಿ ವಿವರಿಸಿದ್ದಾರೆ. ಹಾಗಿದ್ದಲ್ಲಿ ದೊರೆತಿರುವ ಎಲ್ಲಾ ಹಸ್ತಪ್ರತಿಗಳನ್ನು ಸಂಪಾದನಾಕಾರ್ಯಕ್ಕೆ ಬಳಸಿಕೊಳ್ಳುವುದು ಅಸಾಧ್ಯವಾದ ಕಾರ್ಯ. ವಿರಾಟಪರ್ವ ಸಂಪಾದನಾ ಕಾರ್ಯದಲ್ಲಿ ಅತ್ಯಂತ ಹೆಚ್ಚಿನ ಪ್ರತಿಯನ್ನು ಬಳಸಿಕೊಂಡಿರುವ ಅಗ್ಗಳಿಕೆ ಕೃಷ್ಣಜೋಯಿಸರದು.

"ಹೆಚ್ಚು ಪ್ರತಿಗಳನ್ನು ನೋಡಿದಷ್ಟೂ ಹೆಚ್ಚುಪಾಠಾಂತರಗಳು ಮತ್ತು ಹೆಚ್ಚು ಪದ್ಯಗಳು ಕಂಡುಬರುವುದೇ ಈ ಭಾರತದ ವೈಶಿಷ್ಟ್ಯ"[೬]. ಹೆಚ್ಚು ಪಾಠಾಂತರಗಳೂ ಹೆಚ್ಚು ಪದ್ಯಗಳು ದೊರೆತಷ್ಟೂ ಸಂಪಾದನಾಕಾರನಿಗೆ ಮೂಲಪಾಠವನ್ನು ಗುರುತಿಸುವುದು ಕಷ್ಟವಾಗುತ್ತದೆ. ಮೊದಲು ಹಸ್ತಪ್ರತಿಗಳ ಪೀಳಿಗೆಯನ್ನು, ಅವುಗಳ ಮಾತೃಕೆಯನ್ನೂ ಗುರುತಿಸಿಕೊಂಡು ಶುದ್ಧವೂ ಪ್ರಾಚೀನವೂ ಆದ ಹಸ್ತಪ್ರತಿಯನ್ನು ಆಧಾರಪ್ರತಿಯನ್ನಾಗಿ ಸ್ವೀಕರಿಸಿ ಪಾಠಾಂತರವಿಚಾರದಲ್ಲಿ ಉಳಿದವುಗಳನ್ನು ಪರಿಶೀಲಿಸಿ ನಡೆಸಲಾಗುವ ಸಂಪಾದನಾಕಾರ್ಯವು ಬಹಳ ತೊಡಕಿನ ಹಾಗೂ ಶ್ರಮದಾಯಕ ಕಾರ್ಯೆ. ಮಿಶ್ರಪ್ರತಿಗಳು, ಪ್ರಕ್ಷಿಪ್ತ ಸಾಲುಗಳು ಉತ್ತಮ ಗುಣಮಟ್ಟವಿಲ್ಲದ ಹಸ್ತಪ್ರತಿಗಳಿಂದಾಗಿ ನಾನಾಕೊಟಲೆಗಳನ್ನು ಸಂಪಾದಕರು ಎದುರಿಸಿ ಕೈಕೊಳ್ಳುವ ಈ ಸಾಧನೆ ಅತ್ಯಂತ ಮಹತ್ವಪೂರ್ಣದ್ದಾಗಿರುತ್ತದೆ

ಟಿಪ್ಪಣಿಗಳು:-

೧. **ಸ.ಸ.ಮಾಳವಾಡ, ಕುಮಾರವ್ಯಾಸ, ಕುಮಾರವ್ಯಾಸನ ಕನ್ನಡ ಭಾರತ, ಪುಟ.೩೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡಭವನ, ಜೆ.ಸಿ.ರಸ್ತೆ, ಬೆಂಗಳೂರು-೨. ೨೦೦೪.**

೨. **ಟಿ.ವಿ.ವೆಂಕಟಾಚಲಶಾಸ್ತ್ರಿ, ಶಾಸ್ತ್ರೀಯ, ಸಂಪುಟ-೧, ಪುಟ.೧೫೫, ಸಪ್ನಬುಕ್ ಹೌಸ್, ಬೆಂಗಳೂರು ೧೯೯೯.**

೩. **The Kannada Manuscripts in the Osmania University Library,** ಪುಟ.೧೩೧ & ೨೯೪ ಉಸ್ಮಾನಿಯಾ ವಿಶ್ವವಿದ್ಯಾನಿಲಯ, ಹೈದರಾಬಾದ್. ೧೯೬೬

೪. ಎಸ್.ಶಿವಣ್ಣ, 'ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ಸೂಚಿ', ಪುಟ.೧೨೧, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೨೦೦೫

೫. ಡಿ.ಎಲ್.ಎನ್. ಕನ್ನಡ ಗ್ರಂಥಸಂಪಾದನೆ, ಪುಟ.೧೧೬, ಡಿ.ವಿ.ಕೆ ಮೂರ್ತಿ, ಮೈಸೂರು–೪ ೨೦೦೫ ನಾಲ್ಕನೆಯ ಮುದ್ರಣ.

೬. ಕೃಷ್ಣಜೋಯಿಸ್, ಉಪೋದ್ಘಾತ, ವಿರಾಟಪರ್ವ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. ೧೯೭೫

ಅಧ್ಯಾಯ - ೩

<u>ಕುಮಾರವ್ಯಾಸಭಾರತದಲ್ಲಿನ ವಿರಾಟಪರ್ವದ ಮುದ್ರಿತ ಗ್ರಂಥಗಳು</u>

ಯೂರೋಪಿನಲ್ಲಿ ಮುದ್ರಣಕಲೆಯು ಆರಂಭವಾಗಿ ಸುಮಾರು ನೂರುವರ್ಷಗಳ ನಂತರ ಭಾರತಕ್ಕೆ ಮುದ್ರಣಯಂತ್ರವು ೧೫೫೭ರಲ್ಲಿ ಬಂದಿತು. 'ಕನ್ನಡದ ಮೊದಲ ಪುಸ್ತಕ ೧೮೧೭ರಲ್ಲಿ ಬಂಗಾಳದ ಶ್ರೀರಾಂಪುರ ಪ್ರೆಸ್‌ನಲ್ಲಿ ಮುದ್ರಿತವಾಯಿತು. ಆನಂತರ ೧೮೨೦ರಲ್ಲಿ ಮದರಾಸ್ ಪೋರ್ಟ್‌ಸೇಂಟ್ ಚರ್ಚ್ ಪ್ರೆಸ್‌ನಿಂದ ಮತ್ತೊಂದು ಕನ್ನಡದ ಪುಸ್ತಕ ಹೊರಬಂದಿತು. ಈ ಎರಡೂ ಪುಸ್ತಕಗಳು ಕನ್ನಡದ ವ್ಯಾಕರಣ ಕುರಿತವುಗಳಾಗಿದ್ದವು. ಇದಾಗಿ ಕೆಲವು ವರ್ಷಗಳನಂತರ ಕರ್ನಾಟಕದ ಬೇರೆಬೇರೆ ಕೇಂದ್ರಗಳಲ್ಲಿ ಮುದ್ರಣಕಾರ್ಯ ಆರಂಭವಾದವು. ಬಳ್ಳಾರಿಯಲ್ಲಿ ಜಾನ್ ಹ್ಯಾಂಡ್ಸ್ ಎಂಬ ಮಿಷನರಿ ಆರಂಭಿಸಿದ ಮುದ್ರಣಾಲಯ, ಬೆಂಗಳೂರಿನಲ್ಲಿ ವೆಸ್ಲಿಯನ್ನರ ಪ್ರೆಸ್, ಮಂಗಳೂರಿನಲ್ಲಿ ಬಾಸಲ್ ಮಿಷನ್‌ನ ಪ್ರೆಸ್ ಇವುಗಳೊಂದಿಗೆ ಮುಂಬೈ ಹಾಗೂ ಮದ್ರಾಸ್ ವಿಶ್ವವಿದ್ಯಾನಿಲಯಗಳೂ ಕನ್ನಡದ ಪುಸ್ತಕಗಳನ್ನು ಮುದ್ರಣಮಾಡಲು ಆರಂಭಿಸಿದವು"[೧]. ಈ ಪ್ರಕಾರವಾಗಿ ಕನ್ನಡ ಸಾಹಿತ್ಯಕೃತಿಗಳು ೧೯ನೇ ಶತಮಾನದಿಂದ ಮುದ್ರಣಗೊಳ್ಳಲು ಶುರುವಾದವು.

<u>ಕುಮಾರವ್ಯಾಸಭಾರತದ ವಿರಾಟಪರ್ವದ ಮುದ್ರಿತ ಕೃತಿಗಳು</u>

ಮೊಟ್ಟಮೊದಲು ೧೮೫೧ರಲ್ಲಿ ಮಂಗಳೂರಿನ ಜರ್ಮನ್‌ಮಿಷನ್‌ಪ್ರಸ್ ಕುಮಾರವ್ಯಾಸಭಾರತದ ಮೊದಲ ನಾಲ್ಕು ಪರ್ವಗಳನ್ನು ಕಲ್ಲಚ್ಚುಮುದ್ರಣಮಾಡಿಸಿ ಹೊರತಂದಿತು. ೧೯೬೮ ರಲ್ಲಿ ಜಿ.ವರ್ತ್ ಎಂಬುವರು ಕುಮಾರವ್ಯಾಸಭಾರತದ ಕೆಲವು ಆಯ್ದಭಾಗಗಳನ್ನು 'ಪ್ರಾಕ್ಕಾವ್ಯಮಾಲಿಕೆ' ಎಂಬ ಸಂಕಲಿತ ಕೃತಿಯಲ್ಲಿ ಪ್ರಕಟಿಸಿದರು.

ಆನಂತರ ಬೆಂಗಳೂರಿನ ಹೊಳಕಲ್ಲು ನರಸಿಂಹಯ್ಯನವರ ವಿಚಾರದರ್ಪಣ ಮುದ್ರಾಕ್ಷರಶಾಲೆಯಲ್ಲಿ ಮೊದಲ ಐದುಪರ್ವಗಳು 'ಕನ್ನಡಭಾರತದೊಳ್ ಆದಿಪಂಚಕವು' ಎಂಬ ಹೆಸರಿನಿಂದ ೧೮೬೫ರಲಲ್ಲಿ ಹೊರಬಂದಿತು. ಇದಾದನಂತರ ಮದ್ರಾಸಿನ ಸರಸ್ವತಿನಿಲಯ ಮುದ್ರಾಕ್ಷರಶಾಲೆಯಿಂದ 'ಕನ್ನಡಭಾರತ' ದ ಹತ್ತುಪರ್ವಗಳೂ ಹಾಗೂ 'ಕರ್ನಾಟಕ ಭಾರತ ಕಥಾಮಂಜರಿ' ಎಂಬ ಹೆಸರಿನಲ್ಲಿ ಸಚಿತ್ರ ಪರಿಷ್ಕರಣವೂ ಹೊರಬಂದವು.

ಬೆಂಗಳೂರಿನ ವಾಗೀಶ್ವರೀ ಮುದ್ರಾಕ್ಷರಶಾಲೆಯ 'ಕನ್ನಡ ಮಹಾಭಾರತದಲ್ಲಿ ಪ್ರಥಮಾದಿ ದಶಪರ್ವಗಳು', ೧೮೭೭ರಲ್ಲಿ ಸಿದ್ಧಾಂತಿ ಸುಬ್ರಹ್ಮಣ್ಯಶಾಸ್ತ್ರಿಗಳಿಂದ ಸಂಪಾದಿತವಾದ 'ವಿರಾಟಪರ್ವ ಉದ್ಯೋಗಪರ್ವಗಳು' ಮದ್ರಾಸಿನ ಸರಸ್ವತೀವಿಲಾಸದಿಂದ ಹಾಗೂ ೧೮೮೪ ರಲ್ಲಿ 'ವಿರಾಟಪರ್ವವು' ಬಳ್ಳಾರಿಯ ಚಿ.ಅಪ್ಪುಸ್ವಾಮಿ ಮುದಲಿಯಾರ್ ಅವರಿಂದಲೂ ಪ್ರಕಟಗೊಂಡಿತು. ೧೮೮೭ರಲ್ಲಿ ಇದೇಪರ್ವ ಮದ್ರಾಸಿನ ಶಿವಲಿಂಗಂಶೆಟ್ಟಿಯವರ ಮೂಲಕ ಹೊರಬಂದಿತು. ೧೯೦೯ ರಲ್ಲಿ ನಂಜನಗೂಡಿನ ಶ್ರೀಕಂಠಶಾಸ್ತ್ರಿಗಳ ಸಂಪಾದಿತ 'ಕನ್ನಡ ಮಹಾಭಾರತ' ದಶಪರ್ವ, ೧೯೧೬ರಲ್ಲಿ ಬೆಂಗಳೂರಿನ ವಾಜಪೇಯಂ ಗೋವಿಂದಯ್ಯನವರ 'ಕನ್ನಡ ಮಹಾಭಾರತ ದಶಪರ್ವವು', ೧೯೨೫ರಲ್ಲಿ ಟಿ.ಎನ್.ಕೃಷ್ಣಯ್ಯಶೆಟ್ಟರ ಬುಕ್‌ಡಿಪೋವಿನಿಂದ ತಿಮ್ಮಣ್ಣಭಾರತವೂ ಸೇರಿದಂತೆ ಅಷ್ಟಾದಶಪರ್ವ, ೧೯೨೮ರಲ್ಲಿ ಭಾರತೀಸಂಪಂಗಿರಾಮ ಅವರು ಸಂಪಾದಿಸಿದ 'ಶ್ರೀಮನ್ಮಹಾಭಾರತ ದಶಪರ್ವವು' ಬೆಂಗಳೂರಿನ ಸರಸ್ವತೀರತ್ನಾಕರ ಬುಕ್‌ಡಿಪೋವಿನಿಂದಲೂ, ೧೯೩೬ರಲ್ಲಿ ಬೆಂಗಳೂರಿನ ಚಿಕ್ಕಪೇಟೆ ಬುಕ್‌ಡಿಪೋದಿಂದ 'ಶ್ರೀಮನ್ಮಹಾಭಾರತ ದಶಪರ್ವ' ಗಳೂ ಪ್ರಕಟವಾಯಿತು. ಇವು ೧೯-೨೦ನೇ ಶತಮಾನಗಳಲ್ಲಿ ಪ್ರಕಟವಾದ ಸಮಗ್ರ ಹಾಗೂ ವಿರಾಟಪರ್ವದ ಗ್ರಂಥಗಳು.

ಈ ಪ್ರಕಾರವಾಗಿ ೧೯-೨೦ನೇ ಶತಮಾನಗಳಲ್ಲಿ ಮುದ್ರಣಗೊಂಡ ಕುಮಾರವ್ಯಾಸಭಾರತವು ಯಾವುದೇ ಪರಿಷ್ಕರಣಗಳಿಗೊಳಗಾಗದೆ ದೊರೆತ

ತಾಳೆಗರಿಗಳಿಂದ ನೇರವಾಗಿ ಅಚ್ಚಿಗೆ ಸಿದ್ಧಪಡಿಸುತ್ತಿದ್ದುವಾದ್ದರಿಂದ ಪಾಠಗಳು ಸಾಕಷ್ಟುಗೊಂದಲಕ್ಕೊಳಗಾಗಿದ್ದವು, 'ಈ ಮುದ್ರಿತಪ್ರತಿಗಳನ್ನು ಹೋಲಿಸಿ ನೋಡಿದರೆ ಪರಸ್ಪರ ವ್ಯತ್ಯಾಸಗಳು ಕಂಡುಬರುತ್ತಿತ್ತು, ಸಂಧಿಸಂಖ್ಯೆ ಪದ್ಯಸಂಖ್ಯೆ ಪಾಠಗಳು ಪರಸ್ಪರ ಭಿನ್ನವಾಗಿ, ಕೆಲವುಕಡೆ ಅರ್ಥವಾಗದೆ ಸಂಪಾದಕರೇ ಸ್ವಕಲ್ಪಿತ ಪಾಠಗಳನ್ನು ಸೇರಿಸಿರುವುದೂ ಉಂಟು'.[೨] ಈ ಮುದ್ರಣಗಳಲ್ಲಿ ಕಥೆಯ ಸಮಗ್ರತೆಗೆ ಮಹತ್ವನೀಡಲಾಗುತ್ತಿತ್ತಲ್ಲದೆ ಕವಿಯ ಮೂಲ ಪಾಠವನ್ನು ಯಾವುದೇ ಚ್ಯುತಿಬಾರದಂತೆ ಪ್ರಕಟಿಸಬೇಕೆಂಬ ಆಶಯ ಕಂಡುಬರುತ್ತಿರಲಿಲ್ಲ.

ಕವಿಯ ಮೂಲಪಾಠವನ್ನು ಸಂಶೋಧಿಸಿ ಪ್ರಕಟಿಸುವ ಪ್ರಯತ್ನ ಮೊದಲಬಾರಿಗೆ ಆಗಿನ ಮೈಸೂರು ಸರ್ಕಾರದ ಪ್ರಾಚ್ಯ ಕೋಶಾಗಾರದಿಂದ ನಡೆಯಿತು ಆನಂತರ ಅನೇಕ ವಿದ್ವಾಂಸರು ಈ ಕಾರ್ಯಕ್ಕೆ ತಮ್ಮ ಅಮೂಲ್ಯಕೊಡುಗೆ ನೀಡುತ್ತಾ ಬಂದಿದ್ದಾರೆ. ಈ ಪ್ರಕಾರವಾಗಿ ಪರಿಷ್ಕರಿಸಲ್ಪಟ್ಟು ಸಂಪಾದಿತವಾದ ವಿರಾಟಪರ್ವವನ್ನು ನಾಲ್ಕು ಭಾಗಗಳಲ್ಲಿ ಗಮನಿಸಬಹುದು. 'ಕುಮಾರವ್ಯಾಸನ ವಿರಾಟಪರ್ವದ ಆವೃತ್ತಿಗಳು': ಸಂಪೂರ್ಣ ವಿರಾಟಪರ್ವದ ಕಾವ್ಯಭಾಗವನ್ನು ಒಳಕೊಂಡಿರುವ ಕೃತಿಗಳು. 'ಕುಮಾರವ್ಯಾಸ ಭಾರತದ ಸಮಗ್ರ ಸಂಪುಟ': ಇದು ವಿರಾಟಪರ್ವವೂ ಸೇರಿದಂತೆ ಸಮಗ್ರವೂ ಸಂಪೂರ್ಣವೂ ಆದ ಕುಮಾರವ್ಯಾಸ ಭಾರತವನ್ನು ಒಳಕೊಂಡಿರುವ ಕೃತಿಗಳು. 'ಕುಮಾರವ್ಯಾಸಭಾರತ ಸಂಗ್ರಹ': ಇದು ಸಮಗ್ರ ಕುಮಾರವ್ಯಾಸಭಾರತದಲ್ಲಿ ಎಲ್ಲಾ ಪರ್ವಗಳಿಂದಲೂ ಆಯ್ದಕೆಲವು ಭಾಗಗಳನ್ನು ಒಳಕೊಂಡಿರುತ್ತದೆ. 'ಕುಮಾರವ್ಯಾಸನ ವಿರಾಟಪರ್ವ ಸಂಗ್ರಹ': ಇದು ಕುಮಾರವ್ಯಾಸನ ಕೇವಲ ವಿರಾಟಪರ್ವದಲ್ಲಿನ ಆಯ್ದುಪದ್ಯಗಳನ್ನು ಒಳಕೊಂಡಿರುತ್ತದೆ.

ಕುಮಾರವ್ಯಾಸನ ವಿರಾಟಪರ್ವದ ಆವೃತ್ತಿಗಳು:–

ಬಿಡಿ ಶಾಮಾಶಾಸ್ತ್ರಿಗಳಿಂದ ಸಂಪಾದಿತವಾದ 'ವಿರಾಟಪರ್ವ

ಎಸ್.ಎನ್.ಕೃಷ್ಣಜೋಯಿಸರಿಂದ ಸಂಪಾದಿತವಾದ 'ವಿರಾಟಪರ್ವ'

ಕುಮಾರವ್ಯಾಸಭಾರತದ ಸಮಗ್ರ ಸಂಪುಟಗಳು:-	ಕುವೆಂಪು ಮತ್ತು ಮಾಸ್ತಿವೆಂಕಟೇಶ ಅಯ್ಯಂಗಾರ್ ರವರಿಂದ ಸಂಪಾದಿತವಾದ ‘ಕರ್ಣಾಟಭಾರತ ಕಥಾಮಂಜರಿ’
	ಎ.ವಿ.ಪ್ರಸನ್ನ ರವರಿಂದ ಸಂಪಾದಿತವಾದ ‘ಕನ್ನ ಭಾರತ’ [ಕುಮಾರವ್ಯಾಸ + ತಿಮ್ಮಣ್ಣ]
ಕುಮಾರವ್ಯಾಸಭಾರತ ಸಂಗ್ರಹ:-	ಎಂ.ವಿ.ಸೀತಾರಾಮಯ್ಯನವರ ‘ಕುಮಾರವ್ಯಾಸಭಾರತ ಸಂಗ್ರಹ’
ಕುಮಾರವ್ಯಾಸನ ವಿರಾಟಪರ್ವ ಸಂಗ್ರಹಗಳು:-	ತ.ಸು.ಶಾಮರಾಯರಿಂದ ಸಂಪಾದಿತವಾದ ‘ವಿರಾಟಪರ್ವ ಸಂಗ್ರಹ’
	ಕೆ.ಎಂ.ಕೃಷ್ಣರಾವ್ ರವರ ಸಂಪಾದಿತ ‘ವಿರಾಟಪರ್ವ ಸಂಗ್ರಹ’

ಶಾಮಶಾಸ್ತ್ರಿಗಳಿಂದ ಸಂಪಾದಿತವಾದ ‘ವಿರಾಟಪರ್ವ□

ಓದುಗಬ್ಬ ಹಾಡುಗಬ್ಬವಾಗಿದ್ದ ‘ಕನ್ನಡ ಭಾರತ’ವನ್ನು ತಾಳೆಗರಿಗಳ ಕಟ್ಟಿನಿಂದ ಬಿಡುಗಡೆಮಾಡಿ ಮುದ್ರಿತ ಗ್ರಂಥರೂಪಕ್ಕೆ ತಂದವರಲ್ಲಿ ಪೇಟೆಮುದ್ರಣದವರು ಮೊದಲಿಗರಾದರೂ ಕವಿಯ ಮೂಲಪಾಠವನ್ನು ಸಂಶೋಧಿಸಿ ಪ್ರಕಟಿಸುವ ಪ್ರಯತ್ನ ಮೊದಲಬಾರಿಗೆ ಆಗಿನ ಮೈಸೂರು ಸರ್ಕಾರದ ಪ್ರಾಚ್ಯ ಕೋಶಾಗಾರದಿಂದ ನಡೆಯಿತು ಇದರ ಫಲವಾಗಿ ೧೯೧೨ ರಿಂದ ೧೯೨೨ ರ ಅವಧಿಯಲ್ಲಿ ಕುಮಾರವ್ಯಾಸಭಾರತದ

'ಆದಿಪಂಚಕವು' ಪ್ರಕಟವಾಯಿತು. ಈ ಆದಿಪಂಚಕದ ಸಂಪಾದಕರುಗಳು ವಿ.ಶಾಮಾಚಾರ್ಯರು ಹಾಗೂ ಆರ್.ಶಾಮಶಾಸ್ತ್ರಿಗಳು. ಈ ಪ್ರಕಟಣಾಯೋಜನೆ ೧೯೪೩ರ ವರೆಗೂ ನಡೆದು ಹತ್ತುಪರ್ವದ ಗ್ರಂಥ ಬಿಡಿಬಿಡಿ ಸಂಪುಟರೂಪದಲ್ಲಿ ಹೊರಬಂದು ಮರುಮುದ್ರಣಗಳನ್ನೂ ಹೊಂದಿತು.





ಆರ್.ಶಾಮಾಶಾಸ್ತ್ರಿಗಳು

ಪ್ರಾಚ್ಯ ವಿದ್ಯಾಸಂಶೋಧನಾಲಯ ಮೈಸೂರು

ಈ ಪ್ರಾಚ್ಯವಿದ್ಯಾ ಸಂಶೋಧನಾಲಯದ ಕನ್ನಡ ಕಾವ್ಯಮಾಲೆ ೮ ನೆಯ ಗ್ರಂಥವಾಗಿ ಕ್ರಿ.ಶ.೧೯೨೦ ರಲ್ಲಿ ವಿರಾಟಪರ್ವ ಪ್ರಕಟಣೆಗೊಂಡಿದೆ. ಈ ಪರ್ವವನ್ನು ಸಂಪಾದಿಸಿರುವ ಶಾಮಶಾಸ್ತ್ರಿಗಳು ತಮ್ಮ ಸಂಪಾದನಾ ಕಾರ್ಯದಲ್ಲಿ ಕ, ಖ, ಚ, ಜ, ಝ, ಟ ಎಂಬ ೬ ಹಸ್ತಪ್ರತಿಗಳ ಸಹಾಯ ಪಡೆದಿರುವುದಾಗಿ ತಿಳಿಸಿದ್ದಾರೆ. ಇವರು ಬಹುಪುಸ್ತಕಾನುಸಾರಿಯಾಗಿಯೂ, ಶುದ್ಧವಾಗಿಯೂ, ಸರಸವಾಗಿಯೂ, ಕಂಡುಬಂದ ಪಾಠಗಳನ್ನು ಬಳಸಿಕೊಂಡು[೩] ಪಾಠಾಂತರಗಳನ್ನು ಅಡಿಭಾಗದಲ್ಲಿ ನೀಡಿದ್ದಾರೆ. ಅವುಗಳೊಂದಿಗೆ ಎಲ್ಲ ಪ್ರತಿಗಳಲ್ಲೂ ಸಿಗದೆ ಕೇವಲ ಒಂದೆರಡು ಪ್ರತಿಗಳಲ್ಲಿ ಮಾತ್ರ

ಸಿಗುವ ಪದ್ಯ, ಅನಾವಶ್ಯಕವೆಂದು ತೋರಿದ ಪದ್ಯಗಳನ್ನು ನಕ್ಷತ್ರ ಚಿನ್ಹೆಯೊಂದಿಗೆ ಕೆಳಭಾಗದಲ್ಲಿ ನಮೂದಿಸಿದ್ದಾರೆ. ಈ ಆವೃತ್ತಿಯಲ್ಲಿ ೪೩ ಪುಟಗಳಲ್ಲಿ ವಿಸ್ತಾರವಾದ ವಿಷಯಸೂಚಿಯನ್ನು ನೀಡಿದ್ದಾರೆ. ಇಷ್ಟುವಿಸ್ತಾರವಾದ ವಿಷಯಸೂಚಿಯನ್ನು ಯಾವ ಪರ್ವಕ್ಕೂ ಯಾವ ಸಂಪಾದಕನೂ ಬರೆದಿಲ್ಲ.

ಕೋಶಾಗಾರದ ಕೆ-೨೫೧, ಕೆ-೫೭, ಕೆ-೨೦೫, ಇವು ಮುದ್ರಿತ ಪ್ರತಿಗಳಿಗೆ ಹತ್ತಿರವಾದವೆಂದೂ ಅವುಗಳಿಂದ ಬೇರೆಯಾದ ೭ ಹಸ್ತಪ್ರತಿಗಳು ತಾವು ಪ್ರಚುರಪಡಿಸುತ್ತಿರುವ ಪರಿಷ್ಕರಣಕ್ಕೆ ಆಧಾರವಾಗಿದೆಯೆಂದೂ ಇವರು ತಿಳಿಸಿದ್ದಾರೆ. ಇವುಗಳಲ್ಲಿಯ ಪಾಠಭೇದಗಳು ಅವರ ದೃಷ್ಟಿಯಲ್ಲಿ ಗೌಣವಾದವು.

'ಕೆ-೨೦೫' ಹಸ್ತಪ್ರತಿಯು ಉಪಲಬ್ಧ ಪ್ರತಿಗಳಲೆಲ್ಲ ಪ್ರಾಚೀನವಾದುದಾಗಿದ್ದರೂ ಅದಕ್ಕೆ ಪ್ರಾಶಸ್ತ್ಯ ಕೊಡದೆ ೧೯ನೇ ಶತಮಾನದಲ್ಲಿ ಲಿಖಿತವಾದ ಹಸ್ತಪ್ರತಿಗಳನ್ನೇ ಹೆಚ್ಚಾಗಿ ಬಳಸಿರುವುದು, ಕಾಲಕಾಲಕ್ಕೆ ಗ್ರಂಥ ಶರೀರವನ್ನು ಹೊಕ್ಕ ಪ್ರಕ್ಷೇಪಗಳೆಲ್ಲ ಕವಿಪಾಠವೆಂಬ ಹೆಸರಿನಲ್ಲಿ ಬರುವಂತಾಯಿತು' ಎಂಬುದು ಇವರ ಸಂಪಾದನಾ ಬಗೆಗಿನ ವಿಶ್ಲೇಷಣೆಯಾಗಿದೆ.

ಇವರು ವಿರಾಟಪರ್ವದ ಸಂಪಾದನೆಗೆ ಕೆ-೭೦ (ಕ್ರಿ.ಶ.೧೮೪೧) ಪ್ರತಿಯನ್ನು ಮುಖ್ಯವಾಗಿ ಅನುಸರಿಸಿದ್ದಾರೆಂಬುದನ್ನು ಈ ಪರ್ವವನ್ನು ಪುನಃ ಸಂಪಾದನೆ ಮಾಡಿರುವ ಎಸ್.ಎನ್.ಕೃಷ್ಣಜೋಯಿಸರು ಹೇಳಿದ್ದಾರೆ.

ಎಸ್.ಎನ್.ಜೋಯಿಸರು ಸಂಪಾದಿಸಿರುವ 'ಕುಮಾರವ್ಯಾಸ ವಿರಚಿತ ವಿರಾಟಪರ್ವ'



ಎಸ್.ಎನ್.ಕೃಷ್ಣಜೋಯಿಸರು

ಎಸ್.ಎನ್.ಜೋಯಿಸರು ಸಂಪಾದಿಸಿರುವ 'ಕುಮಾರವ್ಯಾಸ ವಿರಚಿತ ವಿರಾಟಪರ್ವ'ವು ೧೯೭೫ ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ವತಿಯಿಂದ ಪ್ರಾಚ್ಯಕಾವ್ಯಮಾಲೆಯ ೪೫ನೆಯ ಗ್ರಂಥವಾಗಿ ಹೊರಬಂದಿತು. ಈ ಹಿಂದೆ ೧೯೧೯ರಿಂದ ೧೯೨೨ ರ ಕಾಲಘಟ್ಟದಲ್ಲಿ ಪ್ರಕಟಿತವಾದ ಆದಿಪಂಚಕವು ಅತೃಪ್ತಿಕರವೆಂಬ ವಿಶ್ಲೇಷಣೆಗೆ ಕಾರಣವಾಗಿದ್ದರಿಂದ ಈ ಪರ್ವಗಳು ಪುನಸ್ಸಂಪಾದನೆಗೊಳಗಾದವು. ಈ ಪ್ರಕಾರವಾದ ಪುನಸ್ಸಂಪಾದಿತ ಕಾರ್ಯದಲ್ಲಿ ಕೆ.ಆರ್.ಶೇಷಗಿರಿಯವರು ಆದಿಪರ್ವವನ್ನೂ, ಬಸಪ್ಪನವರು ಸಭಾಪರ್ವವನ್ನೂ, ಸಿ.ಪಿ.ಕೃಷ್ಣಕುಮಾರ್ ಅವರು ಅರಣ್ಯಪರ್ವವನ್ನೂ, ಎಸ್.ಎನ್.ಕೃಷ್ಣಜೋಯಿಸರು ವಿರಾಟಪರ್ವ ಹಾಗೂ ಉದ್ಯೋಗಪರ್ವಗಳನ್ನೂ ಸಂಪಾದಿಸಿದರು. ಉದ್ಯೋಗಪರ್ವ ಹೊರತಾಗಿ ಉಳಿದುವೆಲ್ಲಾ ಕನ್ನಡ ಅಧ್ಯಯನ ಸಂಸ್ಥೆಯ ಮೂಲಕ ವ್ಯವಸ್ಥಿತವಾಗಿ ಹೊರಬಂದವು. ಈ ಮಾಲಿಕೆಯಲ್ಲಿ ಜೋಯಿಸರು ಸಂಪಾದಿಸಿರುವ ವಿರಾಟಪರ್ವ ೧೯೭೫ರಲ್ಲಿ ಪ್ರಕಟಣೆಗೊಂಡಿತು.

ಜೋಯಿಸರು ತಮ್ಮ ಈ ವಿರಾಟಪರ್ವದ ಪರಿಷ್ಕರಣಾಕಾರ್ಯಕ್ಕಾಗಿ ೨೦ ಹಸ್ತಪ್ರತಿಗಳನ್ನು ಬಳಸಿಕೊಂಡಿದ್ದಾರೆ. ಹೆಚ್ಚು ಪ್ರತಿಗಳನ್ನೂ ನೋಡಿದಷ್ಟೂ ಹೆಚ್ಚು ಪಾಠಾಂತರಗಳು ಹೆಚ್ಚುಪದ್ಯಗಳು ಕಂಡುಬರುವುದು ಕುಮಾರವ್ಯಾಸಭಾರತದ ವಿಶಿಷ್ಟತೆ, ಈ ಎಲ್ಲ ಪ್ರತಿಗಳ ಪಾಠಾಂತರಗಳನ್ನು ವಿವೇಚಿಸಿ, ವಿಶ್ಲೇಷಿಸಿ ಸೂಕ್ತಪಾಠನೀಡಿರುವ ಜೋಯಿಸರ ಪಾಂಡಿತ್ಯ ಶ್ಲಾಘನೀಯ. ತಮ್ಮ ಈ ಸಂಪಾದನಾ ಕಾರ್ಯದಲ್ಲಿ 'ಕ' ಎಂಬ ಸಂಕೇತ ನೀಡಿರುವ ಅತ್ಯಂತ ಪ್ರಾಚೀನವಾದ ಪ್ರತಿಯೆನಿಸಿದ ಕೆ ೨೦೫ (ಕ್ರಿ.ಶ.೧೫೫೪) ನ್ನು ಆಧಾರಪ್ರತಿಯನ್ನಾಗಿ ಸ್ವೀಕರಿಸಿ ಉಳಿದ ಪ್ರತಿಗಳನ್ನು ಪರಿಶೀಲಿಸಿದ್ದಾರೆ. 'ಕ' ಪ್ರತಿಯ ಪಾಠಕ್ಕೂ ಉಳಿದ ಪ್ರತಿಗಳ ಪಾಠಕ್ಕೂ ಅನೇಕ

ವ್ಯತ್ಯಾಸಗಳನ್ನು ಗಮನಿಸಿರುವ ಜೋಯಿಸರು ಉಳಿದ ಪ್ರತಿಗಳ ಪಾಠಕ್ಕಿಂತ ಇಲ್ಲಿನ ಪ್ರಯೋಗಗಳು ಸರಿಯಾಗಿರುವುದನ್ನು ಸಕಾರಣವಾಗಿ ಗುರುತಿಸಿ ಸ್ವೀಕರಿಸಿದ್ದಾರೆ. ಉಳಿದ ಪ್ರತಿಗಳಲ್ಲಿನ ಪ್ರಕ್ಷಿಪ್ತಪದ್ಯಗಳನ್ನು ಪರಿಶಿಷ್ಟ ೧ ರಲ್ಲಿ ಪ್ರತ್ಯೇಕವಾಗಿ ನೀಡಿದ್ದಾರೆ, ಅಲ್ಲದೆ ವಿವಿಧ ಪ್ರತಿಗಳಲ್ಲಿ ಕಂಡುಬಂದಿರುವ ಭಿನ್ನಪಾಠಗಳನ್ನು ಆಯಾ ಪದ್ಯವಿರುವ ಪುಟಗಳಲ್ಲೇ ಅಡಿಭಾಗದಲ್ಲಿ ಪ್ರತಿಗಳ ಸಂಕೇತದೊಂದಿಗೆ ನೀಡಿದ್ದಾರೆ.

ಹೆಚ್ಚಿನ ಪದ್ಯಗಳನ್ನು ಒಂದನೇ ಪರಿಶಿಷ್ಟದಲ್ಲೂ, ಕುಮಾರವ್ಯಾಸನು ಭಾವಾನುವಾದ ಮಾಡಿರಬಹುದಾದ ಶ್ಲೋಕ ಮತ್ತು ವಿಸಂವಾದಿ ಪದ್ಯಗಳನ್ನು ಎರಡನೆಯ ಪರಿಶಿಷ್ಟದಲ್ಲೂ, ಕೆಲವು ಕ್ಲಿಷ್ಟಪದಗಳ ಅರ್ಥವನ್ನು ಮೂರನೆಯ ಪರಿಶಿಷ್ಟದಲ್ಲೂ ಕೊಟ್ಟಿದ್ದಾರೆ. ಕೊನೆಯಲ್ಲಿ ಮುದ್ರಣಾನಂತರ ಕಂಡುಬಂದ ಕೆಲವು ಅಚ್ಚಿನ ತಪ್ಪುಗಳನ್ನು ಪಟ್ಟಿಮಾಡಿ ಕೊಡಲಾಗಿದೆ.

ಕೃಷ್ಣಜೋಯಿಸರು ಬಳಸಿಕೊಂಡಿರುವ ಹಸ್ತಪ್ರತಿಗಳಿಗಳು ಹಾಗು ಅವುಗಳ ಸಂಕೇತ ಈ ಕೆಳಗಿನಂತಿದೆ.

ಕ = 'ಕೆ-೨೦೫'	ಅ = 'ಕೆ-೬೮'	ಆ= 'ಕೆ-೧೨೧೮'	ಇ = 'ಕೆ-೧೨೧೨'
ಈ = 'ಕೆ-೯೪೮'	ಉ = 'ಕೆ-೧೩೪೪'	ಎ = 'ಕೆ-೩೦೧'	ಖ = 'ಕೆ-೫೪೧'
ಗ = 'ಕೆ ೭೦'	ಡ = 'ಕೆ-೫೪೦'	ಣ = 'ಕೆ.೩೦೫'	ತ = 'ಕೆ.ಎ.೫೮೭'
ದ = 'ಕೆ-೧೬೩'	ನ = 'ಕೆ-೨'	ಪ = 'ಕೆ-೨೫೦'	ಜ = 'ಕೆ-೨೬೬'
ಮ = 'ಸ.ಭಂ.೪೬೬'	ಯ = 'ಸ.ಭಂ.೧೬೮೯'	ರ = 'ಸ.ಭಂ.೧೬೯೦'	ಬ= 'ಸ.ಭಂ.೧೨೮೬'

(ವಿವರಗಳಿಗೆ ಜೋಯಿಸರು ಸಂಪಾದಿಸಿರುವ ಓರಿಯಂಟಲ್ ಮುದ್ರಣದ ವಿರಾಟಪರ್ವ ಪುಟ.೯೨ ನೋಡಿ)

<u>ಕುವೆಂಪು & ಮಾಸ್ತಿವೆಂಕಟೇಶ ಅಯ್ಯಂಗಾರ್ ಸಂಪಾದಿತ'ಕರ್ಣಾಟಭಾರತ ಕಥಾಮಂಜರಿ'</u>

೧೯೭೪ ಹಾಗೂ ೧೯೮೮ ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದಿಂದ ಪ್ರಕಟವಾಗಿರುವ ಈ ಕೃತಿಯನ್ನು ಮೊಟ್ಟಮೊದಲು ಮೈಸೂರು ಸರ್ಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯು ೧೯೫೮ರಲ್ಲಿ ಪ್ರಕಟಪಡಿಸಿತು. ಕುವೆಂಪು ಮತ್ತು ಮಾಸ್ತಿವೆಂಕಟೇಶ ಅಯ್ಯಂಗಾರ್‌ರವರು ಈ ಪರಿಷ್ಕರಣದ ಸಂಪಾದಕರು. 'ಅತಿಸುಲಭ ಬೆಲೆಯಲ್ಲಿ ಕನ್ನಡಿಗರೆಲ್ಲರೂ ಓದಿ ಆನಂದಿಸಲಿ ಎಂಬ ಸದುದ್ದೇಶದಿಂದ ಈ ಕೃತಿಯನ್ನು ಹೊರತರಲಾಯಿತು'[೪] ಎಂದು ಅಂದಿನ ಸಾಹಿತ್ಯ & ಸಂಸ್ಕೃತಿ ಅಭಿವೃದ್ಧಿ ಇಲಾಖೆಯ ಡೈರೆಕ್ಟರ್ ಆಗಿದ್ದ ಎ.ಎನ್.ಮೂರ್ತಿರಾವ್ ಈ ಕೃತಿಯ ಮೊದಲ ಮಾತಿನಲ್ಲಿ ಹೇಳಿದ್ದಾರೆ.

ಸಂಪೂರ್ಣ ದಶಪರ್ವಗಳ ಕುಮಾರವ್ಯಾಸಭಾರತವನ್ನು ಒಂದು ಸಂಪುಟವಾಗಿ 'ಕರ್ಣಾಟಭಾರತ ಕಥಾಮಂಜರಿ' ಎಂಬ ನಿಜನಾಮದೊಂದಿಗೆ ಹೊರತಂದಿರುವುದು ಇದರ ವಿಶೇಷ. ಕಡಿಮೆಬೆಲೆಯಲ್ಲಿ ಹೆಚ್ಚು ಮುದ್ರಣಗಳನ್ನು ತಂದು ಈ ಗ್ರಂಥದ ಪ್ರಚಾರವೂ, ವ್ಯಾಸಂಗವೂ ಹೆಚ್ಚುವಂತೆಮಾಡಿದ ಈ ಪ್ರಕಟಣೆಯನ್ನು ಒಂದು ಮುಖ್ಯವಾದ ಘಟ್ಟವೆಂದು ಹೇಳಬಹುದು.

ಇದರ ತೋರಣನಾಂದಿಯಲ್ಲಿ 'ನಾವು ಸಿದ್ಧಗೊಳಿಸಿರುವುದು ಜನಪ್ರಿಯ ಪ್ರತಿಮಾತ್ರ, ಸಂಶೋಧಿತ, ವಿಶುದ್ಧ ಪ್ರತಿ ಬರದತನಕ ಕುಮಾರವ್ಯಾಸನ ಪ್ರತಿಭೆಯ ನಿಜಸ್ವರೂಪ ಸಂಪೂರ್ಣ ದರ್ಶನವಾಗುವುದಿಲ್ಲ, ಹಾಗೆ ಮಾಡಲು ಅತ್ಯಂತ ಪ್ರಾಚೀನವಾದ ಹಾಗೂ ಗದುಗಿನ ಸುತ್ತಮುತ್ತಣ ಪ್ರದೇಶದಲ್ಲಿ ದೊರೆಯಬಹುದಾದ ಪ್ರತಿಗಳನ್ನೆಲ್ಲಾ ಸಂಗ್ರಹಿಸಬೇಕು. ೧೪-೧೫ನೇ ಶತಮಾನದ ಶಾಸನಗಳನ್ನೆಲ್ಲಾ ಸಂಗ್ರಹಿಸಿ ಅಭ್ಯಸಿಸಬೇಕು'[೫] ಎಂದು ಕುವೆಂಪು ಹೇಳಿದ್ದಾರೆ. ಇವರ ಈ ಹೇಳಿಕೆ ಇವರ ಕೃತಿ ಅಂತಿಮವಾಗಿ ಪರಿಷ್ಕರಣೆ ಗೊಂಡದ್ದಲ್ಲವೆಂದು ಹೇಳಿರುವಂತಿದೆ. "ಆದರೆ ಸಂಶೋಧನೆಗೆ ಗಮನ ಇತ್ತಿಲ್ಲವೆಂದಲ್ಲ ಎಲ್ಲೆಲ್ಲಿ ಸಾಧ್ಯವೋ, ಎಲ್ಲೆಲ್ಲಿ ಅನಿವಾರ್ಯವೋ ಅಲ್ಲಿ ನಾವು ನಾಲ್ಕಾರು ಓಲೆಪ್ರತಿಗಳನ್ನು ನೋಡಿದ್ದೇವೆ"[೬] ಎಂದು

ಹೇಳಿ ತಮ್ಮಕಾರ್ಯದಲ್ಲಿ ಬಳಸಿಕೊಳ್ಳಲಾಗಿರುವ ಪ್ರತಿಗಳನ್ನು ಈ ಪ್ರಕಾರವಾಗಿ ತಿಳಿಸಿದ್ದಾರೆ.

- ಅತ್ಯಂತ ಪ್ರಾಚೀನ ಪ್ರತಿಯೆನಿಸಿದ ಕೆ೨೦೫ ಹಸ್ತಪ್ರತಿ (ಕ).
- ಮೊದಲ ೪ ಪರ್ವಗಳು ಮಾತ್ರ ಇರುವ ಎ.೫೭ ಸಂಖ್ಯೆಯ ಕಲ್ಲಚ್ಚಿನ ಪ್ರತಿ (ಇದು ೧೮೫೧ರಲ್ಲಿ ಮಂಗಳೂರಿನಲ್ಲಿ ಅಚ್ಚಾದದ್ದು) ಆದರೆ ಇದರಲ್ಲಿ ಮೊದಲ ನಾಲ್ಕು ಪರ್ವಗಳು ಮಾತ್ರಇವೆ.
- ತಿಮ್ಮಣ್ಣನ ಉತ್ತರ ಭಾರತವೂ ಸೇರಿರುವ ಟಿ.ಎನ್.ಕೃಷ್ಣಯ್ಯಶೆಟ್ಟರ ಮುದ್ರಿತ ಪ್ರತಿ.

ಇದರೊಂದಿಗೆ ಅಗತ್ಯವೆನಿಸಿದಕಡೆ ಓರಿಯೆಂಟಲ್ ಲೈಬ್ರರಿಯ ಸಂಶೋಧಿತ ಪ್ರತಿಗಳನ್ನು ಆಧಾರವಾಗಿಟ್ಟುಕೊಂಡು ಈ ಗ್ರಂಥದ ಸಂಪಾದನೆ ಮಾಡಿರುವುದಾಗಿ ಸಂಪಾದಕರು ತಿಳಿಸಿದ್ದಾರೆ. ಆದರೆ 'ಓರಿಯಂಟಲ್ ಮುದ್ರಣದ ಮೊದಲ ನಾಲ್ಕುಪರ್ವಗಳು ಏತಕ್ಕೂ ಪ್ರಯೋಜನವಾಗಲಿಲ್ಲ'[೭] ಎಂದು ಇವರೇ ತಿಳಿಸಿರುವುದರಿಂದ ನಾಲ್ಕನೆಯ ಪರ್ವವಾದ ವಿರಾಟಪರ್ವದ ಸಂಪಾದನೆಗಾಗಿ ಓರಿಯಂಟಲ್ ಲೈಬ್ರರಿಯ ಮುದ್ರಣದ ಪ್ರತಿಯನ್ನು ಗಮನಿಸಿದ್ದರೂ ಬಳಸಿಕೊಂಡಿಲ್ಲದಿರುವುದು ಸ್ಪಷ್ಟವಾಗಿದೆ. ಮೊದಲ ನಾಲ್ಕುಪರ್ವಗಳಿಗೆ ಈ ಮೇಲೆಹೇಳಿರುವ ಪ್ರತಿಗಳನ್ನು ಆಶ್ರಯಿಸಿ ಅಗತ್ಯವಿದ್ದೆಡೆ ಕ-೨೦೫ ಪ್ರತಿಯನ್ನು ಗಮನಿಸಿರುವುದಾಗಿ ತೋರಣನಾಂದಿಯಲ್ಲಿ ತಿಳಿಸಿದ್ದಾರೆ

ಈ ಆವೃತ್ತಿಯಲ್ಲಿ ಸಾಮಾನ್ಯ ಓದುಗರು ಹಾಗೂ ಗಮಕಿಗಳನ್ನು ಗಮನದಲ್ಲಿರಿಸಿಕೊಂಡು ಪಾಠಾಂತರಗಳನ್ನು ಕೊಟ್ಟಿಲ್ಲ.

ಎ.ವಿ.ಪ್ರಸನ್ನ ಸಂಪಾದಿತ 'ಕನ್ನಡ ಭಾರತ'

ಎ.ವಿ.ಪ್ರಸನ್ನ ಅವರು ಸಂಪಾದಿಸಿರುವ 'ಕನ್ನಡ ಭಾರತ' ವು ಕನ್ನಡ ವಿಶ್ವವಿದ್ಯಾಲಯ, ಹಂಪಿಯಿಂದ ೨೦೦೧ ರಲ್ಲಿ ಪ್ರಕಟವಾಗಿ ಹೊರಬಂದಿದೆ. 'ಸುಮಾರು ಎರಡು ವರ್ಷಗಳಕಾಲ ಈ ಪ್ರಕಟಣೆಯ ಕಾರ್ಯ ಕನಸಾಗೇ ಉಳಿದಿತ್ತು, ಆ ನಂತರ ಪ್ರಸನ್ನ ಅವರು ಸಂಪಾದನಾಕಾರ್ಯವನ್ನು ಕೈಗೊಂಡರೆಂದು' ಅಂದಿನ ಕುಲಪತಿಗಳಾಗಿದ್ದ ಎಂ.ಎಂ.ಕಲುಬುರ್ಗಿಯವರು ಮುನ್ನುಡಿಯಲ್ಲಿ ತಿಳಿಸಿದ್ದಾರೆ.

ಈ ಆವೃತ್ತಿಯ ವಿಶೇಷವೆಂದರೆ ಇಲ್ಲಿ ಕುಮಾರವ್ಯಾಸನ ಹತ್ತು ಪರ್ವಗಳೊಂದಿಗೆ ಉತ್ತರಾರ್ಧ ಭಾಗವನ್ನು ರಚಿಸಿರುವ ತಿಮ್ಮಣ್ಣಕವಿಯ ಎಂಟು ಪರ್ವಗಳನ್ನೂ ಸೇರಿಸಿ ಪ್ರಕಟಿಸಿದ್ದಾರೆ. ವಿಜಯನಗರ ದೊರೆ ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ತಿಮ್ಮಣ್ಣ ಕವಿಯು ಇಂದಿನ ಹಂಪಿಯಲ್ಲಿ ಜೀವಿಸಿದ್ದನು. ಈ ಸಂಪುಟವು ಹಂಪಿ ವಿಶ್ವವಿದ್ಯಾಲಯದ ವತಿಯಿಂದ ಪ್ರಕಟವಾಗಿರುವುದರಿಂದ ತಿಮ್ಮಣ್ಣನ ಭಾರತವನ್ನು ಕೈ ಬಿಟ್ಟು ಕೇವಲ ಕುಮಾರವ್ಯಾಸನ ಭಾರತವನ್ನು ಪ್ರಕಟಿಸುವುದು ಉಚಿತವಲ್ಲವೆಂದು ಈ ಎರಡೂ ಕೃತಿಗಳನ್ನು ಸೇರಿಸಿ ಸಂಪೂರ್ಣ ಭಾರತ ಕೃತಿಯನ್ನು ಪ್ರಕಟಿಸಲಾಗಿದೆ.

ಈ ಸಂಪುಟಕ್ಕಾಗಿ ಯಾವುದೇ ಹಸ್ತಪ್ರತಿಯನ್ನು ಬಳಸಿಕೊಳ್ಳದೆ ಮುದ್ರಿತ ಪ್ರತಿಗಳನ್ನು ಬಳಸಿಕೊಳ್ಳಲಾಗಿದೆ. ಶ್ರೀ ಭಾರತೀ ಸಂಪಂಗಿರಾಮ ಅವರು ಪರಿಶೋಧಿಸಿ, 'ಶ್ರೀ ಸರಸ್ವತೀ ರತ್ನಾಕರ ಬುಕ್ ಡಿಪೋ' ವಿನಿಂದ ೧೯೨೮ರಲ್ಲಿ ಪ್ರಕಟಿಸಲಾದ ಹದಿನೆಂಟು ಪರ್ವಗಳ ಮುದ್ರಿತಪ್ರತಿಯನ್ನು ಹಾಗೂ ೧೯೨೮ರಲ್ಲಿ ವಿವಿಧ ಪಂಡಿತರಿಂದ ಪರಿಶೋಧಿಸಲ್ಪಟ್ಟು 'ದೇಶಾಯಿ ಮುದ್ರಾಕ್ಷರ ಶಾಲೆ'ಯಲ್ಲಿ ಮುದ್ರಿಸಿ ಪ್ರಕಟಿಸಿದ ತಿಮ್ಮಣ್ಣವಿರಚಿತ ಭಾರತಗಳನ್ನು ಬಳಸಿಕೊಂಡಿದ್ದಾರೆ. ಇದರೊಂದಿಗೆ ಕೆಲವು ಮುದ್ರಿತ ಪ್ರತಿಗಳನ್ನು ಹೋಲಿಕೆಗಾಗಿ ಬಳಸಿಕೊಳ್ಳಲಾಗಿದೆ ಅವುಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್ ಮತ್ತು ಕನ್ನಡ ಅಧ್ಯಯನ ಸಂಸ್ಥೆಗಳು ಸಂಪಾದಿಸಿರುವ ಸಂಪುಟಗಳು, ಕುವೆಂಪು ಮತ್ತು ಮಾಸ್ತಿಯವರು ಸಂಪಾದಿಸಿರುವ ಆವೃತ್ತಿ ಹಾಗೂ ೧೮೮೭ರಲ್ಲಿ ಶ್ರೀ ವಿ.ಬಿ.ಸುಬ್ಬಯ್ಯ ಅಂಡ್ ಸನ್ಸ್‌ರವರು ಪ್ರಕಟಿಸಿರುವ ತಿಮ್ಮಣ್ಣ ಕವೀಂದ್ರ ವಿರಚಿತ 'ಕನ್ನಡ ಮಹಾಭಾರತವು' ಪ್ರಮುಖವಾದವು.

ಇಲ್ಲಿನ ಪಾಠಗಳು ಕುವೆಂಪು ಮತ್ತು ಮಾಸ್ತಿಯವರ ಆವೃತ್ತಿಯನ್ನೇ ಸಾಧಾರಣವಾಗಿ ಹೋಲುತ್ತದೆ. ಅರ್ಥಸ್ಪಷ್ಟತೆಗಾಗಿ ಕುವೆಂಪು ಮತ್ತು ಮಾಸ್ತಿಯವರ ಆವೃತ್ತಿಯನ್ನೆ ಬಳಸಿಕೊಂಡಿರುವುದಾಗಿ'[೮] ಇದನ್ನು ಸ್ಪಷ್ಟಪಡಿಸಿದ್ದಾರೆ. ಅಲ್ಲದೆ ಇದರೊಂದಿಗೆ ಆಧಾರ ಪ್ರತಿಯ ತಿಮ್ಮಣ್ಣ ಕವಿಯ ಭಾರತದಲ್ಲಿರುವ ದೋಷಗಳನ್ನು ವಿ.ಬಿ.ಸುಬ್ಬಯ್ಯ ಅಂಡ್ ಸನ್ಸ್‌ರವರಿಂದ ಪ್ರಕಟಿತವೆಂದು ಭಾವಿಸಲಾದ ಪ್ರತಿಯೊಂದರ ಸಹಾಯದಿಂದ ತಿದ್ದಲಾಗಿದೆ. ಎಂದು ತಿಳಿದುಬರುತ್ತದೆ "ಹಸ್ತಪ್ರತಿಗಳನ್ನು ಸಂಗ್ರಹಿಸಿ, ಮೂಲಪಾಠವನ್ನು ನಿರ್ಣಯಿಸುವ ಕೆಲಸ ಬಹುಶಃ ಇಂದಿನ ಸಂದರ್ಭದಲ್ಲಿ ಸಾಧ್ಯವಿಲ್ಲವೆಂದೇ ತೋರುತ್ತದೆ. ಆದರೆ ಕನ್ನಡಿಗರಿಗೆ ಮಹಾಭಾರತವನ್ನು ಸಮಗ್ರ ಸ್ವರೂಪದಲ್ಲಿ ಕೊಡಬೇಕೆಂಬ ಅದಮ್ಯ ಆಕಾಂಕ್ಷೆ ನಮ್ಮದಾಗಿದ್ದ ಕಾರಣ" ಹಸ್ತಪ್ರತಿಗಳನ್ನು ಈ ಸಂಪಾದನಾ ಕಾರ್ಯದಲ್ಲಿ ಬಳಸಿಕೊಂಡಿಲ್ಲವೆಂದು ಎಂ.ಎಂ.ಕಲುಬುರ್ಗಿ ಅವರು ಮುನ್ನುಡಿಯಲ್ಲಿ ಹೇಳಿದ್ದಾರೆ,

ಬೆಂಗಳೂರಿನ ಸರಸ್ವತೀ ರತ್ನಾಕರ ಬುಕ್ ಡಿಪೋದಿಂದ ಪ್ರಕಾಶಿತವಾದ, ಭಾರತೀ ಸಂಪಂಗಿರಾಮ ಅವರಿಂದ ಪರಿಶೋಧಿತವಾದ ೧೮ ಪರ್ವಗಳ ಮಹಾಭಾರತದ ದ್ವಿತೀಯ ಆವೃತ್ತಿ (೧೯೨೮)ಯನ್ನು ಆಧಾರವಾಗಿಟ್ಟುಕೊಂಡು, ಪ್ರಕಟಿತ ಇತರ ಆವೃತ್ತಿಗಳ ನೆರವನ್ನು ಪಡೆದು, ಒಂದು ಸಮಗ್ರ ಸಂಪುಟವನ್ನು ರೂಪಿಸುವುದೇ ಇಂದಿನ ಅನಿವಾರ್ಯತೆಯೆಂಬ ನಿರ್ಣಯಕ್ಕೆ ಬರಲಾಯಿತು". ಈ ರೀತಿಯಾಗಿ ಹಳೆಯ ಮುದ್ರಣದ ಪರಿಷ್ಕೃತ ಆವೃತ್ತಿ ಇದಾಗಿದೆಯಾದರೂ ಎಷ್ಟೋಕಡೆ ಪಾಠಗಳು ಕುವೆಂಪು ಮತ್ತು ಮಾಸ್ತಿ ಆವೃತ್ತಿಗಿಂತ ಉತ್ತಮ ವಾಗಿವೆ. ಆದರೂ ಇದು ಪೂರ್ಣ ಪ್ರಕ್ಷೇಪಗಳ ಹಾವಳಿಯಿಂದ ಮುಕ್ತವಾಗಿದೆ ಎನ್ನುವಂತಿಲ್ಲ. ಮುಖ್ಯವಾಗಿ ಸಂಧಿ ಸಂಖ್ಯೆ ಮತ್ತು ಪದ್ಯ ಸಂಖ್ಯೆ ಹಾಗೂ ಭಿನ್ನ ಪಾಠಗಳು ಈ ಆವೃತ್ತಿಯ ಪ್ರಮುಖ ವೈಶಿಷ್ಟ್ಯಗಳಾಗಿವೆ.

ಎಂ.ವಿ.ಸೀತಾರಾಮಯ್ಯನವರ – 'ಕುಮಾರವ್ಯಾಸಭಾರತ ಸಂಗ್ರಹ'

೧೯೯೦ ರಲ್ಲಿ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು ಇವರಿಂದ ಹೊರಬಂದ 'ಕುಮಾರವ್ಯಾಸಭಾರತ ಸಂಗ್ರಹ' ವನ್ನು ಎಂ.ವಿ.ಸೀತಾರಾಮಯ್ಯನವರು ಸಂಪಾದಿಸಿದ್ದಾರೆ. ಇದರೊಂದಿಗೆ ಟಿ.ವಿ.ವೆಂಕಟಾಚಲ ಶಾಸ್ತ್ರಿಯವರ ವಿಮರ್ಶಾ ಪೂರ್ವಕವಾದ 'ಉಪೋದ್ಘಾತ'ವಿದೆ. ಈ ಸಂಪಾದನಾ ಕಾರ್ಯದಲ್ಲಿ ಸಾಮಾನ್ಯ ಓದುಗನನ್ನು ಗಮನದಲ್ಲಿರಿಸಿಕೊಂಡು ಪದ್ಯ ಪ್ರಕಟಗೊಂಡಿರುವ ಪುಟದ ಅಡಿಭಾಗದಲ್ಲಿ ಮೊದಲು ಪಾಠಾಂತರ ಆನಂತರ ಕಠಿಣಪದಗಳಿಗೆ ಅರ್ಥಗಳನ್ನೂ ಕೊಡಲಾಗಿದೆ.

ಎಂ.ವಿ.ಸೀ ಅವರು ಇಲ್ಲಿ ಕುಮಾರವ್ಯಾಸಭಾರತದ ದಶಪರ್ವಗಳ ಸಂಗ್ರಹಕಾರ್ಯವನ್ನು ಮಾಡಿದ್ದಾರೆ. ಆದರೆ ಈ ಅಧ್ಯಯನದಲ್ಲಿ ಕೇವಲ ವಿರಾಟಪರ್ವದ ಸಂಗ್ರಹಭಾಗವನ್ನು ಮಾತ್ರ ಗಮನಿಸಲಾಗಿದೆ.

ಇವರ ಈ ಸಂಗ್ರಹದಲ್ಲಿ ಪದ್ಯಗಳು ತೀರಾ ಸಂಕ್ಷಿಪ್ತವೆನಿಸುತ್ತದೆ, ಕೆಲವೆಡೆಗಳಲ್ಲಿ ಇನ್ನೂ ಪದ್ಯಗಳು ಸೇರಿದ್ದರೆ ವಿಪುಲ ಚರ್ಚೆಗೆ ಅನುಕೂಲವಾಗುತ್ತಿತ್ತು.

ಎಂ.ವಿ.ಸೀ ಅವರು ತಮ್ಮ ಸಂಪಾದನಾಕಾರ್ಯದಲ್ಲಿ ಬಳಸಿಕೊಂಡಿರುವ ಪ್ರತಿಗಳು ಈ ಪ್ರಕಾರವಾಗಿವೆ:

ಬಿ.ಎಂ.ಶ್ರೀಕಂಠಯ್ಯ – ಟಿ.ಎಸ್.ವೆಂಕಣ್ಣಯ್ಯನವರು ಸಿದ್ಧಪಡಿಸಿದ ಕುಮಾರವ್ಯಾಸಭಾರತ ಸಂಗ್ರಹವನ್ನು ಆಧಾರಪ್ರತಿಯನ್ನಾಗಿಟ್ಟುಕೊಂಡಿದ್ದಾರೆ ಇದಕ್ಕೆ ಅವರು 'ಆ' ಸಂಕೇತವನ್ನು ನೀಡಿದ್ದಾರೆ.

ಕನ್ನಡ ಅಧ್ಯಯನ ಸಂಸ್ಥೆಯ ಬಿಡಿಪರ್ವಗಳಿಗೆ 'ಅ' ಸಂಕೇತ ನೀಡಿ ಬಳಸಿಕೊಂಡಿದ್ದಾರೆ.

ಓರಿಯಂಟಲ್ ಲೈಬ್ರರಿ ಪ್ರತಿಯನ್ನು 'ಓ' ಸಂಕೇತನೀಡಿ ಬಳಸಿಕೊಂಡಿರುವುದಾಗಿ ಹೇಳಿದ್ದಾರಾದರೂ ಇದು ಓಲೆಗರಿಯೇ ಅಥವಾ ಮುದ್ರಿತ ಪ್ರತಿಯೇ ಎನ್ನುವುದನ್ನು ಸ್ಪಷ್ಟಪಡಿಸಿಲ್ಲ. ಈ ಪ್ರತಿ ಆಧಾರಪ್ರತಿಯಾದ ಆ ಪ್ರತಿಯಲ್ಲಿ ಉಲ್ಲೇಖಿಸಲಾದ ಪ್ರತಿಯೇ ಆಗಿದೆ.

ಇವುಗಳೊಂದಿಗೆ ಕೆಲವು ಹಸ್ತಪ್ರತಿ, ಕುವೆಂಪು & ಮಾಸ್ತಿ ಸಂಪಾದಿತ ಪ್ರತಿ, ಪೇಟೆಮುದ್ರಣದ ಪ್ರತಿಗಳನ್ನು ಬಳಸಿಕೊಂಡಿದ್ದಾರೆ. ಹಾಗೇ ತ.ಸು.ಶಾಮರಾಯರ ಕೃತಿಯನ್ನೂ ಗಮನಿಸಿರುವುದಾಗಿ ತಿಳಿಸಿದ್ದಾರೆ.

ಇವರು ಪಾಠಾಂತರ ಗೊಂದಲವಿಲ್ಲದ ಕೆಲವೆಡೆಗಳಲ್ಲೂ ಊಹಾಪಾಠ ನೀಡಿರುವುದನ್ನು ಟಿ.ವಿ.ವೆಂಕಟಾಚಲಶಾಸ್ತ್ರಿಯವರು ಗಮನಿಸಿ ಅವುಗಳಲ್ಲಿ ಅನಗತ್ಯವೆನಿಸಿದ ಕೆಲವನ್ನು ಉಪೋದ್ಘಾತದಲ್ಲಿ ಚರ್ಚಿಸಿದ್ದಾರೆ.

ಇವರು ಪಾಠನಿಷ್ಕರ್ಷೆಯಲ್ಲಿನ ಗಮನಾರ್ಹವಾದ ವಿಶೇಷ ಸಂಗತಿಗಳನ್ನು, ಶಬ್ದಾರ್ಥ ವಿವರಣೆಗಳನ್ನು, ಪಾಠಾಂತರಗಳನ್ನೂ, ಕೆಲವೆಡೆ ತಾವು ಸ್ವೀಕರಿಸಿರುವ ಪಾಠಯಾವುದೆಂಬುದನ್ನೂ ಅಡಿ ಟಿಪ್ಪಣಿಯಲ್ಲಿ ತಿಳಿಸಿದ್ದಾರೆ. ಪ್ರತಿಯೊಂದು ಪಾಠಾಂತರಗಳನ್ನೂ ಸಾಕಷ್ಟು ವಿಶ್ಲೇಷಿಸಿ, ಚರ್ಚಿಸಿ, ವಿಮರ್ಶಿಸಿ ನಿರ್ಣಯಕ್ಕೆಬಂದಿರುವ ಇವರ ಕಾರ್ಯವೈಖರಿಯನ್ನು ಶಾಸ್ತ್ರಿಯವರು ಶ್ಲಾಘಿಸಿದ್ದಾರೆ.

ತ.ಸು.ಶಾಮರಾಯರ ಸಂಪಾದಿತ – 'ವಿರಾಟಪರ್ವ ಸಂಗ್ರಹ'

'ತಳುಕಿನ ವೆಂಕಣ್ಣಯ್ಯನವರ ಸ್ಮಾರಕ ಗ್ರಂಥಮಾಲೆ' ಯಡಿ ೧೯೫೧ ರಲ್ಲಿ ಅಚ್ಚಾದ ಈ ಸಂಗ್ರಹಕ್ಕಾಗಿ ತ.ಸು.ಶಾಮರಾಯರು ಮೈಸೂರಿನ ಪ್ರಾಚ್ಯಕೋಶಾಗಾರದ ಕೆ–೨೦೫ ಓಲೆಪ್ರತಿಯನ್ನು ಮೂಲಪಾಠವನ್ನಾಗಿ ಅಂಗೀಕರಿಸಿರುವುದಾಗಿ ತಿಳಿಸಿದ್ದಾರೆ. ಇದರೊಂದಿಗೆ ಈ ಹಿಂದೆ ತಾವು ಕುಮಾರವ್ಯಾಸಭಾರತದ ಮೊದಲ ಮೂರುಪರ್ವಗಳಿಗೆ

ಬಳಸಿಕೊಂಡಿದ್ದ ಇತರ ಪ್ರತಿಗಳನ್ನೂ, ಶಾಮಶಾಸ್ತ್ರಿಗಳಿಂದ ಸಂಪಾದಿತವಾದ ವಿರಾಟಪರ್ವದ ಪ್ರತಿಯನ್ನು ಬಳಸಿಕೊಂಡಿದ್ದಾರಾದರೂ ಈ ಪ್ರತಿಯನ್ನು ಕುರಿತು 'ಇದು ಆರು ಓಲೆಯ ಪ್ರತಿಗಳ ಸಹಾಯದಿಂದ ಪರಿಷ್ಕೃತವಾಗಿ ಮುದ್ರಿತವಾಗಿದ್ದರೂ ಗ್ರಂಥಪರಿಷ್ಕರಣ ಕ್ರಮವನ್ನು ಇಲ್ಲಿ ನಿರೂಪಿಸಿಲ್ಲ'[೧೦] ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಅಲ್ಲದೆ ಶಾಮಶಾಸ್ತ್ರಿಗಳಿಂದ ಸಂಪಾದಿತವಾದ ಪ್ರತಿಗೂ ತಮ್ಮ ಸಂಗ್ರಹದ ಪಾಠಗಳಿಗೂ ಅನೇಕ ವ್ಯತ್ಯಾಸಗಳಿರುವುದನ್ನು ತಿಳಿಸಿದ್ದಾರೆ

ಪಾಠಪರಿಷ್ಕರಣೆ ಇಲ್ಲಿ ಕ್ರಮಬದ್ಧವಾಗಿ ನಡೆದಿರುವುದಕ್ಕೆ ಅನೇಕ ಉತ್ತಮ ಉದಾಹರಣೆಗಳನ್ನು ಕೊಡಬಹುದು. ಆದರೆ ಇಲ್ಲಿ ಸಾಮಾನ್ಯವಾಗಿ ಗ್ರಂಥಸಂಪಾದನೆಯಲ್ಲಿ ಅಡಿಯಲ್ಲಿ ಕೊಡುವಂತಹ ಪಾಠಾಂತರ ಕೊಟ್ಟಿಲ್ಲ.

ಕೆ.ಎಂ.ಕೃಷ್ಣರಾವ್ ರವರ ವಿರಾಟಪರ್ವ ಸಂಗ್ರಹ

ಕೆ.ಎಂ.ಕೃಷ್ಣರಾವ್ ರವರು ೧೯೮೨ರಲ್ಲಿ 'ವಿರಾಟಪರ್ವ ಸಂಗ್ರಹ' ವನ್ನು ಸಂಪಾದಿಸಿ ಸಿಂಧುಶಯನ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಈ ಗ್ರಂಥದಲ್ಲೆಲ್ಲೂ ತಮ್ಮ ಸಂಪಾದನಾ ಕಾರ್ಯಕ್ಕಾಗಿ ಬಳಸಿಕೊಂಡಿರುವ ಪ್ರತಿಗಳಬಗ್ಗೆ ಉಲ್ಲೇಖಿಸಿಲ್ಲ. ಆದರೆ ಅವರು ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿದ್ದಾಗ ಅವರಿಗೆ ದೊರೆತ ಅಲ್ಲಿಯ ಹಸ್ತಪ್ರತಿಯನ್ನು ಬಳಸಿರುವುದಾಗಿ ಪ್ರೊ.ಜಿ.ಅಶ್ವತ್ಥನಾರಾಯಣ ಅವರನ್ನು ಭೇಟಿಮಾಡಿದಾಗ ತಿಳಿಸಿದ್ದಾರೆ. ಇವರು ತಮ್ಮ ಕೃತಿಯಲ್ಲಿ ಪಾಠಾಂತರಗಳನ್ನು ಕೊಟ್ಟಿಲ್ಲ.

ಜೋಯಿಸರು, ಕುವೆಂಪು ಮತ್ತು ಮಾಸ್ತಿ, ತ.ಸು.ಶಾಮರಾಯರು, ಎಂ.ವಿ.ಸೀ ಅವರ ಸಂಪಾದಿತ ಕೃತಿಗಳಲ್ಲಿಇಲ್ಲದಿರುವ 'ಮಲ್ಲಬಳಗವ ವಲಲ ಕೊಂದನು ಮತ್ಸ್ಯನಗರಿಯಲಿ' ಎಂಬ ಸಂಧಿಯ ಕಾವ್ಯಭಾಗ ಇವರ ಸಂಗ್ರಹದಲ್ಲಿ ಸಿಗುತ್ತದೆ.

ಒಟ್ಟು ಹನ್ನೊಂದು ಸಂಧಿಯಲ್ಲಿ ಮಂಗಳಾಚರಣೆಯ ೯ ಪದ್ಯಗಳ ಜೊತೆಗೆ ೩೩೫ ವಿರಾಟಪರ್ವದ ಪದ್ಯಗಳನ್ನು, ಸಂಧಿಯ ಆರಂಭದ ಸೂಚನಾಪದ್ಯಗಳೊಂದಿಗೆ ಇಲ್ಲಿ ಸಂಗ್ರಹಿಸಿದ್ದಾರೆ. ಇದನ್ನು ತಾವು ಮುಖ್ಯವಾಗಿ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಕಾವ್ಯದ ಸಾರವತ್ತಾದ ರಸವತ್ತಾದ ಭಾಗಗಳನ್ನು ಸಂಗ್ರಹಿಸಿ ಸಂಪಾದಿಸಿರುವುದಾಗಿ[೧೧] ಪೀಠಿಕಾಭಾಗದಲ್ಲಿ ಹೇಳಿದ್ದಾರೆ.

ಎಲ್.ಎಮ್.ಎಲ್.ಶಾಸ್ತ್ರಿಯವರ ವಿರಾಟಪರ್ವ ದೀಪಿಕೆ

ಎಲ್.ಎಮ್.ಎಲ್.ಶಾಸ್ತ್ರಿಯವರು 'ವಿರಾಟಪರ್ವ ದೀಪಿಕೆ' ಯನ್ನು ೨೦೦೭ರಲ್ಲಿ ರಿಯಾ ಏಜನ್ಸಿಸ್, ಮೈಸೂರು ಪ್ರಕಾಶನದಿಂದ ಹೊರತಂದಿದ್ದಾರೆ. ತಮ್ಮ ಈ ಕಾರ್ಯಕ್ಕಾಗಿ ಅನೇಕ ಓಲೆಪ್ರತಿಗಳನ್ನು ಅಧ್ಯಯನ ಮಾಡಿರುವುದಾಗಿ ತಿಳಿಸಿದ್ದಾರೆ ಆದರೆ ಹಸ್ತಪ್ರತಿಗಳ ವಿವರ ನೀಡಿಲ್ಲ. ಆದರೆ ಪ್ರಧಾನವಾಗಿ ಕನ್ನಡ ಸಂಸ್ಕೃತಿ ಇಲಾಖೆಯವರು ಪ್ರಕಟಿಸಿರುವ ಕುವೆಂಪು ಮತ್ತು ಮಾಸ್ತಿ ಅವರ ಸಂಪಾದಿತ ಕೃತಿಯನ್ನು ಪರಿಗಣಿಸಿರುವುದಾಗಿ[೧೨] ತಿಳಿಸಿದ್ದಾರೆ, ಇಲ್ಲಿ ಕೊಟ್ಟಿರುವ ಪದ್ಯ ಸಂಖ್ಯೆಗಳು ಕುವೆಂಪು ಮತ್ತು ಮಾಸ್ತಿ ಸಂಪಾದಿತ ಕೃತಿಯನ್ನು ಅನುಸರಿಸಿ ಆ ಪದ್ಯಗಳ ಭಾವಾನುವಾದವನ್ನೇ ಕ್ರಮಬದ್ಧವಾಗಿ ನೀಡಿದ್ದಾರೆಯಾದರೂ ಉಳಿದ ಪ್ರತಿಗಳ ಪಾಠಾಂತರಗಳನ್ನೂ ಗಮನಿಸಿ ಶುದ್ಧಪಾಠ ನಿರ್ಣಯಕ್ಕೆ ಪ್ರಯತ್ನಿಸಿರುವುದು ಕಂಡುಬರುತ್ತದೆ. ಇದರೊಂದಿಗೆ ಅಡಿಟಿಪ್ಪಣಿಯಲ್ಲಿ ಈ ಪಾಠಾಂತರದ ವಿಷಯ ಚರ್ಚಿಸುವುದರೊಂದಿಗೆ ಅಲಂಕಾರ, ರೂಪಕ, ರಸವಾಕ್ಯಗಳನ್ನು ಗುರುತಿಸಿದ್ದಾರೆ. ಮೂಲಭಾರತದೊಂದಿಗೆ ಅಲ್ಲಲ್ಲಿ ಹೋಲಿಸಿ, ಕಠಿಣಪದಗಳಿಗೆ ಅರ್ಥಗಳನ್ನೂ ನೀಡಿದ್ದಾರೆ. ಡಿ.ಎಲ್.ಎನ್. ಅವರ ಪಂಪಭಾರತದೀಪಿಕೆ ಮಾದರಿಯಲ್ಲಿ ಸಮಗ್ರ ಕುಮಾರವ್ಯಾಸಭಾರತದ ಗದ್ಯಾನುವಾದ ಟಿಪ್ಪಣಿ ಸಹಿತ ತರಲು ಉದ್ದೇಶಿಸಿ ಅದರ ಅಂಗವಾಗಿ ಈ ವಿರಾಟಪರ್ವವನ್ನು ಮೊದಲ ಪ್ರಕಟಣೆಯಾಗಿ ಹೊರತಂದಿದ್ದಾರೆ. ಇವರು ನೀಡಿರುವ ಪಾಠಗಳಲ್ಲಿ ಕೆಲವು ಗಮನಾರ್ಹವಾಗಿವೆ

ವಿವಿಧ ಆವೃತ್ತಿಗಳಲ್ಲಿರುವ ಪದ್ಯಸಂಖ್ಯಾವಿಚಾರ:

ಮೂಲಭಾರತದಲ್ಲಿ ಈ ವಿರಾಟಪರ್ವದ ಕಥಾಭಾಗವು ವೈರಾಟಪರ್ವ, ಕೀಚಕವಧಪರ್ವ, ಗೋಗ್ರಹಣಪರ್ವ, ವೈರಾಟೀವೈವಾಹಿಕಪರ್ವ ಎಂಬ ನಾಲ್ಕು ಭಾಗಗಳ್ಲಿ ಒಟ್ಟು ೬೭ ಅಧ್ಯಾಯ ೩೫೦೦೦ ಶ್ಲೋಕಗಳಿಂದ ಕೂಡಿದೆ.

ಈ ನಾಲ್ಕೂಪರ್ವದ ಕಥೆಯನ್ನು ಕುಮಾರವ್ಯಾಸ ಸುಮಾರು ೬೧೮ ಪದ್ಯ ೧೧ ಸಂಧಿಗಳಲ್ಲಿ ಸಂಗ್ರಹಿಸಿದ್ದಾನೆ ಈ ಸಂಧಿ ಹಾಗೂ ಪದ್ಯಗಳ ಸಂಖ್ಯೆಯು ಒಂದೊಂದು ಹಸ್ತಪ್ರತಿಯಲ್ಲಿ ಒಂದೊಂದು ತೆರನಾಗಿದ್ದುದನ್ನು ಹಿಂದಿನ ಅಧ್ಯಾಯದಲ್ಲಿ ಕಂಡಿರುವಂತೆಯೆ ಅದೇ ಹಸ್ತಪ್ರತಿಗಳನ್ನು ಆಧರಿಸಿ ಸಂಪಾದಿಸಲಾಗಿರುವ ಮುದ್ರಿತ ಆವೃತ್ತಿಗಳಲ್ಲೂ ಭಿನ್ನ ಸಂಖ್ಯೆಯಲ್ಲಿ ದೊರಕುತ್ತದೆ.

ಮೈಸೂರು ಸರ್ಕಾರದ ಪ್ರಾಚ್ಯ ಕೋಶಾಗಾರ ಹಾಗೂ ಮೈಸೂರು ಸಾಹಿತ್ಯ ಸಂಸ್ಕೃತಿ ಇಲಾಖೆ ಪ್ರಥಮ ಆವೃತ್ತಿಯನ್ನು ಸಂಪಾದಿಸಿರುವ ಶಾಮಶಾಸ್ತ್ರಿಗಳ ಪ್ರತಿಯಲ್ಲಿ ೧೦ ಸಂಧಿ ೭೭೩ ಪದ್ಯಗಳಿವೆ.

ಇದೇ ಇಲಾಖೆಯಿಂದ ಮುಂದೆ ೧೯೭೪ ರಲ್ಲಿ ಕೃಷ್ಣಜೋಯಿಸರು ಸಂಪಾದಿಸಿರುವ ಆವೃತ್ತಿಯಲ್ಲಿ ೧೧ ಸಂಧಿ ೬೧೮ ಪದ್ಯಗಳಿವೆ. ಈ ಆವೃತ್ತಿಯಲ್ಲಿ ಸುಮಾರು ೩೦೦ ಕ್ಕೂ ಅಧಿಕ ಸಂಖ್ಯೆಯ ಪದ್ಯಗಳನ್ನು ಹೆಚ್ಚಿನ ಪದ್ಯಗಳೆಂದು ಪರಿಶಿಷ್ಟ-೧ರಲ್ಲಿ ಕೊಟ್ಟಿದ್ದಾರೆ. ಶಾಮಶಾಸ್ತ್ರಿಗಳ ಆವೃತ್ತಿಯಲ್ಲಿರುವ ಮಲ್ಲಕಾಳಗದ ಪದ್ಯಗಳನ್ನೂ ಜೋಯಿಸರು ಪದ್ಯಗಳ ಸಾಲಿಗೆ ಸೇರಿಸದೆ ಅನುಬಂಧದಲ್ಲಿ ಕೊಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದಿಂದ ಹೊರತಂದಿರುವ ಕುವೆಂಪು ಮತ್ತು ಮಾಸ್ತಿವೆಂಕಟೇಶಅಯ್ಯಂಗಾರರು ಸಂಪಾದಿಸಿರುವ ಪ್ರತಿಯಲ್ಲಿನ ವಿರಾಟಪರ್ವದಲ್ಲಿ ೧೦

ಸಂಧಿ ೬೪೬ ಪದ್ಯಗಳಿವೆ. ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟವಾಗಿರುವ ಎ.ವಿ.ಪ್ರಸನ್ನ ಅವರ ಪರಿಷ್ಕರಣದಲ್ಲಿ ವಿರಾಟಪರ್ವವು ೧೧ ಸಂಧಿ ೬೧೫ ಪದ್ಯಗಳಿಂದ ಕೂಡಿದೆ.

ಈ ಅಧ್ಯಯನದಲ್ಲಿ ಬಳಸಿಕೊಂಡಿರುವ ಉಳಿದ ಪ್ರತಿಗಳು ಸಂಗ್ರಹಗಳಾಗಿರುವುದರಿಂದ ಅವುಗಳ ಸಂಧಿಸಂಖ್ಯೆಯಾಗಲೀ ಪದ್ಯಸಂಖ್ಯಾವಿಚಾರವಾಗಲೀ ಪ್ರಸ್ತುತವೆನಿಸುವುದಿಲ್ಲ.

<u>ಟಿಪ್ಪಣಿಗಳು:</u>

೧. ಶ್ರೀನಿವಾಸ ಹಾವನೂರ. 'ಹೊಸಗನ್ನಡದ ಅರುಣೋದಯ ಸಾಹಿತ್ಯ' ಮೈಸೂರು ವಿಶ್ವವಿದ್ಯಾನಿಲಯ, ೧೯೭೪. ಮುದ್ರಾಣಾಲಯಗಳು.

೨. ಟಿ.ವಿ.ವೆಂಕಟಾಚಲ ಶಾಸ್ತ್ರಿ, ಹಳೆಯಹೊನ್ನು, ಪುಟ , ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,ಬೆಂಗಳೂರು,೧೯೯೧

೩. ಟಿ.ಎನ್.ಸುಬ್ಬರಾಯಶಾಸ್ತ್ರಿ, ಅವತರಣಿಕೆ ಪುಟ-೨, ಕುಮಾರವ್ಯಾಸ ಮಹಾಕವಿ ವಿರಚಿತ ಕರ್ಣಾಟಕ ಮಹಾಭಾರತ: 'ವಿರಾಟಪರ್ವ', ಓರಿಯಂಟಲ್ ಲೈಬ್ರರಿ ಮುದ್ರಣ, ಮೈಸೂರು. ೧೯೨೦

೪. ಎ.ಎನ್.ಮೂರ್ತಿರಾವ್, ಮೊದಲಮುದ್ರಣದ ವಿನಂತಿ, ಕರ್ಣಾಟಭಾರತ ಕಥಾಮಂಜರಿ, ಸರಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ.

೫. ಕುವೆಂಪು, ತೋರಣನಾಂದಿ, ಪುಟ.೨೪, ಕರ್ಣಾಟಭಾರತ ಕಥಾಮಂಜರಿ, ಸರಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ.

೭. ಕುವೆಂಪು, ತೋರಣನಾಂದಿ, ಪುಟ.೨೪, ಕರ್ನಾಟಭಾರತ ಕಥಾಮಂಜರಿ, ಸರಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ.

೮. ಎ.ವಿ.ಪ್ರಸನ್ನ, 'ಕನ್ನಡಭಾರತ' ಸಂಪಾದಕರ ನುಡಿ, ಪುಟ೨೨, ಪ್ರಸಾರಾಂಗ, ಕನ್ನಡ ವಿಶ್ವರವಿದ್ಯಾನಿಲಯ, ಹಂಪಿ

೯. ಎ.ವಿ.ಪ್ರಸನ್ನ, 'ಕನ್ನಡಭಾರತ' ಸಂಪಾದಕರ ನುಡಿ, ಪುಟ೧೭, , ಕನ್ನಡ ವಿಶ್ವರವಿದ್ಯಾನಿಲಯ, ಹಂಪಿ

೧೦. ತ.ಸು.ಶಾಮರಾಯರು, ಮುನ್ನುಡಿ, ಪುಟ ೪, ವಿರಾಟಪರ್ವ ಸಂಗ್ರಹ, ತಳುಕಿನ ವೆಂಕಣ್ಣಯ್ಯನವರ ಸ್ಮಾರಕ ಗ್ರಂಥಮಾಲೆ, ಗೋಕುಲಂ ೩ನೇ ಹಂತ ಮೈಸೂರು.

೧೧. ಕೆ.ಎಂ.ಕೃಷ್ಣರಾವ್, ಪೀಠಿಕೆ, ಪುಟ.೧೯, ವಿರಾಟಪರ್ವ ಸಂಗ್ರಹ, ಸಿಂಧುಶಯನ ಪ್ರಕಾಶನ, ರಾಜಾಜಿನಗರ, ಬೆಂಗಳೂರು. ೧೯೮೨

೧೨. ಪ್ರೊ.ಎಲ್.ಎಮ್.ಎಲ್.ಶಾಸ್ತ್ರಿ, ಮುನ್ನುಡಿ, ಪುಟ.೭, ಕುಮಾರವ್ಯಾಸಭಾರತ: ವಿರಾಟಪರ್ವ ದೀಪಿಕೆ, ರಿಯಾ ಏಜೆನ್ಸೀಸ, ಕೂಗುಬಂಡೆ ರಸ್ತೆ, ಕುವೆಂಪುನಗರ, ಮೈಸೂರು – ೯. ೨೦೦೭

ಅಧ್ಯಾಯ ೪

ವಿರಾಟಪರ್ವದ ವಿಶೇಷ ಪ್ರಸಂಗಗಳು ಮತ್ತು ನಿರೂಪಣಾಶೈಲಿ

ವಿರಾಟಪರ್ವವು ಮಹಾಭಾರತದಲ್ಲಿನ ನಾಲ್ಕನೆಯಪರ್ವ. ವ್ಯಾಸರು ರಚಿಸಿರುವ ಮೂಲಭಾರತದಲ್ಲಿ ವೈರಾಟಪರ್ವ, ಕೀಚಕವಧ ಪರ್ವ, ಗೋಗ್ರಹಣಪರ್ವ, ವೈರಾಟೀ(ಉತ್ತರೆ) ವೈವಾಹಿಕಪರ್ವ ಎಂಬ ನಾಲ್ಕು ವಿಭಾಗಗಳಲ್ಲಿ ೬೭ ಅಧ್ಯಾಯ ಹಾಗೂ ೩೫೦೦ ಶ್ಲೋಕಗಳಿಂದ ಹೇಳಲಾದ ಈ ಕಥಾಭಾಗವನ್ನು ಕನ್ನಡದಲ್ಲಿ ಕುಮಾರವ್ಯಾಸ ಸುಮಾರು ೬೪೬ ಪದ್ಯ ೧೦ ಸಂಧಿಗಳಲ್ಲಿ ಹೇಳಿದ್ದಾನೆ (ಈ ಪದ್ಯಸಂಖ್ಯೆ ೬೦೦ ರಿಂದ ೭೫೦ ರ ವರೆಗೂ ಹಾಗೂ ೧೦ ರಿಂದ ೧೨ ಸಂಧಿಗಳವರೆಗೂ ಬೇರೆಬೇರೆ ಪ್ರತಿಗಳಲ್ಲಿ ಬೇರೆಬೇರೆ ರೀತಿಯಾಗಿ ಕಂಡುಬರುತ್ತವೆ.)

ರಾಮಾಯಣವನ್ನು ಸುಂದರ ಕಾಂಡದಿಂದಲೂ, ಭಾಗವತವನ್ನು ದಶಮಸ್ಕಂಧದಿಂದಲೂ ಓದಲು ಆರಂಭಿಸುವಂತೆ ಮಹಾಭಾರತವನ್ನು ವಿರಾಟಪರ್ವದಿಂದ ಓದಲು ಆರಂಭಿಸಿ ಅಲ್ಲಿಗೇ ಮುಗಿಸುವ ಪದ್ಧತಿಯಿದೆ. ಕೆಲವು ನಿರ್ದಿಷ್ಟ ಫಲಗಳಿಗೆಂದೇ ಪಠಣಮಾಡುವ ಶ್ಲೋಕ/ಪುರಾಣಗಳಲ್ಲಿ ವಿರಾಟಪರ್ವವೂ ಒಂದು.ಈ ವಿರಾಟ ಪರ್ವವನ್ನು ಮಳೆಬಾರದ ಸಂದರ್ಭದಲ್ಲಿ ಮಳೆಗಾಗಿ ಪಾರಾಯಣ ಮಾಡುತ್ತಾರೆ.

ಹರಿಕಥೆ, ನಾಟಕ, ಯಕ್ಷಗಾನದ ಪ್ರಸಂಗಗಳಲ್ಲಿ ಈ ವಿರಾಟಪರ್ವದ ಕಥಾಭಾಗವನ್ನು ಆರಿಸಿಕೊಳ್ಳುವುದು ಸಾಮಾನ್ಯದ ಸಂಗತಿ. 'ಹಾಸನದ ಸುತ್ತಮುತ್ತಲಿನ ಕೆಲ ಊರಿನಲ್ಲಿ ಮುಸ್ಲಿಂ ಜನಾಂಗದ ಮಹಿಳೆಯರು ವಿರಾಟಪರ್ವದ ಕೆಲವು ಭಾಗಗಳನ್ನು ಹೇಳಿ ದವಸಧಾನ್ಯ ಪಡೆದುಕೊಂಡು ಹೋಗುತ್ತಾರೆ'[೧]

ವಿರಾಟಪರ್ವವು ಕಷ್ಟಕರವಾದ ಪಾಂಡವರ ಜೀವನದಲ್ಲಿ ಭವಿಷ್ಯದ ಭರವಸೆಯ ತಿರುವನ್ನುಹೊಂದಿದೆ, ಇದು ಪಾಂಡವರ ಅಜ್ಞಾತವಾಸದ ಅಂತಿಮ ಅಂಕವಾಗಿದ್ದು ಮುಂದೆ ಕುರುಕ್ಷೇತ್ರ ಯುದ್ಧದ ಉದ್ಯೋಗಪರ್ವಕ್ಕೆ ಉಪೋದ್ಘಾತವಾಗುತ್ತದೆ. ಈ ಪರ್ವದ ಕೊನೆಯಲ್ಲಿ ಅಭಿಮನ್ಯುವಿನ ಮದುವೆ ಪಾಂಡವರ ಅಭ್ಯುದಯಕ್ಕೆ ಮುಂಗಾಣ್ಕೆಯಂತೆ ನಡೆಯುತ್ತದೆ.

ಕುಮಾರವ್ಯಾಸ ಸಂಸ್ಕೃತದ ಮೂಲಭಾರತವನ್ನು ಸಂಗ್ರಹವಾಗಿ ರಚಿಸಿದ್ದರೂ ಪ್ರತಿಯೊಂದು ಘಟನೆಯನ್ನೂ ರಸವತ್ತಾಗಿ ಚಿತ್ರಿಸಿದ್ದಾನೆ.

ಈ ಪರ್ವದ ಕಥಾಂಶವನ್ನು ಈ ಪ್ರಕಾರವಾಗಿ ಕಾಣಬಹುದು.

- ಪಾಂಡವರು ತಮ್ಮ ಅಜ್ಞಾತವಾಸದ ಅವಧಿಯಲ್ಲಿ ವಿರಾಟನ ಬಳಿ ಸೇವಾವೃತ್ತಿಗೆ ನಿಂತದ್ದು.
- ಕೀಚಕನು ದ್ರೌಪದಿಯನ್ನು ಕಾಮಿಸಿ ಭೀಮನಿಂದ ಹತನಾದದ್ದು.
- ಉತ್ತರ ಗೋಗ್ರಹಣ – ಭೀಮನಿಂದ ಸುಶರ್ಮನ ತೇಜೋವಧೆ.
- ದಕ್ಷಿಣ ಗೋಗ್ರಹಣ – ಉತ್ತರನ ಪೌರುಷ.
- ಉತ್ತರನಿಗೆ ಅರ್ಜುನ ಸಹಾಯಮಾಡಿ ಕೌರವರನ್ನು ಜಯಿಸಿದ್ದು.
- ಪಾಂಡವರ ಅಭ್ಯುದಯ – ಉತ್ತರೆ ಮದುವೆ.

ಇಲ್ಲಿ ಗಮನಿಸಬಹುದಾದ ಅನೇಕ ಕಾವ್ಯಾತ್ಮಕ, ಸಾಂಸ್ಕೃತಿಕ ಅಂಶಗಳೆಂದರೆ :

- ವಿರಾಟನಿಗಿದ್ದ ಕೀಚಕಭಯ ; ಅಸಹಾಯಕತೆ.
- ಧರ್ಮರಾಯನ ನಿಷ್ಕ್ರಿಯತೆ.
- ಭೀಮನ ಧರ್ಮರಕ್ಷಕ ವೀರಮುಖ – ಧರ್ಮಸೂಕ್ಷ್ಮತೆ.
- ಭೀಮನ ವ್ಯಕ್ತಿತ್ವ ಹಾಗೂ ವೀರರಸ ಪುಷ್ಟಿಗೂ ಮಿಗಿಲಾಗಿ ಕಾಣುವ ದ್ರೌಪದಿ ಪಾತ್ರ.
- ಅಭಿಮನ್ಯು ಉತ್ತರೆ ಮದುವೆ ಪ್ರಸಂಗದಲ್ಲಿನ ಕೃಷ್ಣ.

ಈ ಪರ್ವದಲ್ಲಿನ ಒಂದು ವರ್ಷದ ಅಜ್ಞಾತವಾಸದ ಅವಧಿಯ ಕಥೆಯನ್ನು ಕುಮಾರವ್ಯಾಸ ವಿವರಿಸಿರುವ ಪರಿ ಈ ಪ್ರಕಾರವಾಗಿದೆ. ೧೧ ತಿಂಗಳು ೧೭ ದಿವಸಗಳ ಅವಧಿಯ ಕಥೆಯನ್ನು ಕೇವಲ ೩ ಸಂಧಿಗಳಲ್ಲಿಯೂ, ಉಳಿದ ೧೩ ದಿನಗಳ ಅವಧಿಯ ಕಥೆಯನ್ನು ೮ ಸಂಧಿಗಳಷ್ಟು ದೀರ್ಘವಾಗಿಯೂ ವಿವರಿಸಿ ಹೇಳಿದ್ದಾನೆ.

ಅವಶ್ಯಕತೆ ಇಲ್ಲವೆಂದು ತೋರುವ ಕಡೆ ಸಂಗ್ರಹವಾಗಿಯೂ, ವರ್ಣನೆಗೆ ಅವಕಾಶವಿರುವೆಡೆ ವಿಸ್ತಾರವಾಗಿಯೂ ಕಾವ್ಯದ ಸೊಗಸು ಕೆಡದಂತೆ, ಮೂಲಭಾರತದ ಕಥೆಗೆ ಚ್ಯುತಿಬಾರದಂತೆ ವಿಶೇಷಗಮನಹರಿಸಿ ಕಥಾನಿರೂಪಣೆ ಮಾಡಿ 'ಕನ್ನಡನಾಡಿನಲ್ಲಿ ಕುಮಾರವ್ಯಾಸನೆಂಬ ಅನ್ವರ್ಥವಾದ ಬಿರುದನ್ನು ತಳೆದಿರುವ ಗದುಗಿನ ನಾರಣಪ್ಪನೆಂಬ ಕರ್ನಾಟಕದ ಕವಿಯ ಕನ್ನಡಭಾರತ ಮಂಜರಿಯಷ್ಟು ಸುಪ್ರಸಿದ್ಧವಾದ ಕಾವ್ಯವಿನ್ನೊಂದಿಲ್ಲ'[೨] ಎಂಬೆಲ್ಲಾ ಪ್ರಶಂಸೆಗೆ ಪಾತ್ರನಾಗಿದ್ದಾನೆ.

ಸಂಗ್ರಹಭಾರತ ಎಂಬ ಭಾರತ ಕಥಾಸಂಗ್ರಹದಲ್ಲಿ ವಿರಾಟಪರ್ವದ ಕಥೆ ಒಂದು ಷಟ್ಪದಿ ಪದ್ಯದಲ್ಲಿ ಈ ರೀತಿ ರಚಿತವಾಗಿದೆ.

ಬಂದು ರಾಯನ ಮನೆಗೆ ಪಾಂಡವ
ರಂದು ಇರುತಿರೆ ಕೀಚಕನು ಸೈ
ರಂಧ್ರಿಗಳುಪಿಯೆ ಮಡಿದ ಸುದ್ದಿಯ ಕೇಳಿ ಕೌರವನು
ಬಂದು ತರುಗಳ ಹಿಡಿಯೆ ಫಲುಗುಣ
ನಂದು ಕಾದಿಯೆ ಮರಳಿಸುತ್ತರೆ
ಗಂದು ನಡೆದುದು ಮದುವೆ ಬಳಿಕ ವಿರಾಟಪರ್ವದಲ್ಲಿ

(ಉಪೋದ್ಘಾತ–ಕೃಷ್ಣಜೋಯಿಸ್–xxiv)

ಈ ವಿರಾಟಪರ್ವದ ಸೊಗಸು, ಇದರ ಕಾವ್ಯಾಂಶಗಳ ಚೆಲುವು ನಾನಾರಸಗಳ ಸಮ್ಮಿಲನ, ಇದನ್ನು ಪ್ರತ್ಯೇಕ ಕಾವ್ಯವೆಂಬ ಮಟ್ಟಿಗೆ ಓದಬಹುದಾದ ಕಥಾಂಶ, ಕಥೆಯಲ್ಲಿ ಅಡಗಿರುವ ಕುತೂಹಲ, ಈ ಪರ್ವವನ್ನು ಜನಪ್ರಿಯಗೊಳಿಸಿದೆ. ಅಲ್ಲದೆ ಮಹಾಭಾರತದ ಪ್ರಧಾನರಸವೆನಿಸಿದ ವೀರರಸದ ಪ್ರತಿಪಾದನೆಗೆ ಈ ಪರ್ವದಲ್ಲಿ

ಯಥೇಚ್ಛವಾದ ಅವಕಾಶ ದೊರೆತಿದೆ. ಮಹಾಭಾರತದ ಯುದ್ಧದ ರೀತಿ ತಕ್ಕ ಪ್ರಮಾಣದಲ್ಲಿ ಇಲ್ಲಿಯೇ ಚಿತ್ರಿತವಾಗಿದೆ.

ಕುಮಾರವ್ಯಾಸನು ತನ್ನ ಕಾವ್ಯದ ಪ್ರತಿಯೊಂದು ಪರ್ವದಲ್ಲೂ ಕೃಷ್ಣನ ಘಟನಾವಳಿಗಳನ್ನು ಚಿತ್ರಿಸಿದ್ದಾನೆ. ಕೃಷ್ಣನ ಪಾತ್ರ ಪ್ರಸಂಗವೇ ಇಲ್ಲದ ಈ ವಿರಾಟಪರ್ವದಲ್ಲಿ ಆ ಕೊರತೆಯನ್ನು ನೀಗಿಸಲು ಧರ್ಮರಾಯನಿಂದ ಅಭಿಮನ್ಯು ಉತ್ತರೆಯರ ವಿವಾಹದ ಆಹ್ವಾನ ಮೂಲಕ ಭಕ್ತಿಪರಿಪೂರಿತವಾದ ಭಾಷೆ ಬಳಸಿ ಕೃಷ್ಣಭಕ್ತಿಯನ್ನು ಮೆರೆದಿರುವುದನ್ನು ಕಾಣಬಹುದು.

ವಿರಾಟಪರ್ವದಲ್ಲಿ ನಡೆಯುವ ಸಂಗತಿಗಳು ಮಹಾಭಾರತದ ಮುಖ್ಯ ಕಥೆಗೆ ನೇರವಾಗಿ ಸಂಬಂಧಿಸಿದವುಗಳಲ್ಲ. ಈ ಪರ್ವದಲ್ಲಿ ಪಾಂಡವರು ಅನುಭವಿಸುವ ನೋವು ಅವರ ಆತ್ಮ ಪರಿಪಾಕಕ್ಕೆ ಸಹಾಯಕವಾಗಿ ಬರುತ್ತದೆ.

ಈ ಪರ್ವದಲ್ಲಿ ಕುಮಾರವ್ಯಾಸನ ಕಥನಶೈಲಿ, ವೇಷಾಂತರದ ಮರೆಯಲ್ಲಿದ್ದ ಪಾಂಡವರ ಅಂತರಂಗದ ತುಮುಲವನ್ನು ಧ್ವನಿಪೂರ್ಣವಾಗಿ ನಿರೂಪಿಸುತ್ತದೆ. "ಹಗೆಗಳನ್ನು ಹಿಂಡಿದನು ಮನದೊಳಗೆ" ಎಂಬ ಸಾಲು ಭೀಮನ ಅಸಹಾಯಕತೆಯನ್ನು ತೋರಿಸುತ್ತದೆ. ಮನುಷ್ಯ ಎಷ್ಟೇಪರಾಕ್ರಮಿಯಾದರೂ ಆತ ಅಸಹಾಯಕನೇ ಎಂಬುದನ್ನು ವಿರಾಟಪರ್ವ ತೋರಿಸುತ್ತದೆ.

ಭೀಮನ ರೋಷ, ಅರ್ಜುನನ ಶೌರ್ಯ, ದ್ರೌಪದಿಯ ಸೌಂದರ್ಯ ಅದಮನೀಯವಾದುದರಿಂದಲೇ ಕೀಚಕವಧೆ, ಗೋಗ್ರಹಣಯುದ್ದ ಪ್ರಸಂಗಗಳು ನಡೆದಿವೆ. ಪೌರುಷಕ್ಕೆ ಇಲ್ಲಿ ಅವಕಾಶ ದೊರೆತರೂ ಗುಪ್ತವಾಗಿ, ಕತ್ತಲಲ್ಲಿ ನಡೆಯುತ್ತದೆ. ದುಶ್ಯಾಸನನ ವಧೆ ಪ್ರಕಟವಾಗಿ ಕುರುಭೂಮಿಯಲ್ಲಿ ನಡೆಯುವಂತೆ ಕೀಚಕನ ಸಂಹಾರ ನಡೆಯುವುದಿಲ್ಲ.

ಭೀಮನ ಹೆಂಗರುಳು, ಅರ್ಜುನನ ನಪುಂಸಕತ್ವ, ಉತ್ತರನ ಪೌರುಷ, ಕೀಚಕನ ಕಾಮುಕತೆ, ವಿರಾಟನ ಅಸಹಾಯಕತೆ, ಯುಧಿಷ್ಠಿರನ ದ್ಯೂತವ್ಯಸನ, ಇವು ತೋರಿಕೆಯ ಮೂಲಕ ನಿಜವನ್ನು ಅರುಹುವ ಸಾಧನಗಳಾಗಿವೆ

ಇಡೀಮಹಾಭಾರತದ ಪ್ರಸಂಗಗಳಲ್ಲಿ ಗ್ರಾಮೀಣರು ವಿರಾಟಪರ್ವದ ಕಥಾಭಾಗಕ್ಕೆ ಪ್ರಾಮುಖ್ಯತೆ ನೀಡುತ್ತಾರೆ, ಇದಕ್ಕೆ ಇಲ್ಲಿನ ಈ ಕೆಲ ಘಟನೆಗಳು ಮುಖ್ಯ ಕಾರಣ. ಯಾವತ್ತೂ ಗ್ರಾಮೀಣರ ಕೃಷಿಕಾಯಕದಲ್ಲಿ ಬೆನ್ನೆಲುಬಾಗಿ ನಿಂತ ಗೋವುಗಳ ಅಪಹರಣ ಮತ್ತು ಅವುಗಳ ಬಿಡುಗಡೆಯ ವಿಚಾರ ವಿರಾಟಪರ್ವ ಕಥನಭಾಗದಲ್ಲಿ ಬರುತ್ತದೆ. ತುರುಗಳ್ಳತನದ ಬಗ್ಗೆ ಸಾವಿರಾರು ದಾಖಲೆಗಳು ಕೇವಲ ಕರ್ನಾಟಕ ಅಷ್ಟೇಅಲ್ಲ ಭಾರತದ ಬೇರೆಬೇರೆ ಭಾಗಗಳಲ್ಲಿ ಸಿಗುತ್ತವೆ, ಇಂತಹ ತುರುಗಳ್ಳತನವನ್ನು ತಡೆದವನೇ ಮಹಾ ಪರಾಕ್ರಮಿ. ಅಂಥ ಪರಾಕ್ರಮಿಯ ಕಥೆಯನ್ನು ಈ ವಿರಾಟಪರ್ವ ಒಳಕೊಂಡಿದೆ.

ಈ ಪರ್ವದ ಮತ್ತೊಂದು ವಿಶೇಷ ಸಂಗತಿಯೆಂದರೆ ಅರ್ಜುನ ವಿರಾಟನ ಮಗಳು ಉತ್ತರೆಯನ್ನು ತನ್ನ ಮಗಳಂತೆ ಭಾವಿಸುವುದು. ಮೊದಲಬಾರಿಗೆ ಅರ್ಜುನ ಸ್ತ್ರೀಯರ ಮೋಹದಿಂದ ದೂರವಾಗುವ ಸಂಗತಿ ಪ್ರಸ್ತಾಪವಾಗುತ್ತದೆ.

ಉತ್ತರೆ ಹಾಗೂ ಅಭಿಮನ್ಯುವಿನ ವಿವಾಹವೂ ಈ ಪರ್ವದಲ್ಲಿಯೇ ನಡೆಯುತ್ತದೆ. ಇದು ಮಹಾಭಾರತದಲ್ಲಿ ನಡೆಯುವ ಮುಖ್ಯವಿವಾಹಗಳಲ್ಲೊಂದು ಹಾಗೆಯೇ ಇದು

ಮಹಾಭಾರತದಲ್ಲಿ ನಡೆಯುವ ಕೊನೆಯ ವಿವಾಹ. ಈ ಅಭಿಮನ್ಯು ಹಾಗೂ ಉತ್ತರೆಗೆ ಹುಟ್ಟುವವನೇ ಪರೀಕ್ಷಿತ್ ರಾಜ. ಇವನ ಮಗನೇ ಜನಮೇಜಯ, ಈ ಜನಮೇಜಯನಿಗೇ ವೈಶಂಪಾಯನನು ವ್ಯಾಸಮಹರ್ಷಿಗಳು ಬರೆದ ಕಥೆ ಹೇಳುವುದು.

ವಿರಾಟಪರ್ವದಲ್ಲಿ ಕೃಷ್ಣನ ಆಗಮನದ ಬಗೆಯೇ ಬೇರೆ. ಇಲ್ಲಿ ಧರ್ಮರಾಯನು ಕೃಷ್ಣನಿಗೆ ಬರೆಯುವ ಪತ್ರವೇ ಅವರೆಲ್ಲರ ದೈವಸಂಬಂಧದ ಶರಣಭಾವವನ್ನು ತೋರಿಸುತ್ತದೆ. ಅಭಿಮನ್ಯು ಹಾಗೂ ಉತ್ತರೆಯ ವಿವಾಹಕ್ಕೆ ಧರ್ಮರಾಯ ಪತ್ರವನ್ನು 'ಮದುವೆಯೆಂಬುದು ನೆವ ಶ್ರೀಪದವ ತೋರಿಸಬೇಕು...'' ಎಂತಲೇ ಬರೆಯುತ್ತಾನೆ.

ಮೂಲ ಭಾರತ ಹಾಗೂ ಕುಮಾರವ್ಯಾಸಭಾರತ

ಕುಮಾರವ್ಯಾಸನ ಕರ್ಣಾಟಕಭಾರತ ಕಥಾಮಂಜರಿಗೆ ಮೂಲ ಆಕರ ವ್ಯಾಸಕೃತ ಸಂಸ್ಕೃತ ಭಾರತ, ಕುಮಾರವ್ಯಾಸ ಕೇವಲ ಕಥೆಯನ್ನು ಅನುಸರಿಸಿರುವುದು ಮಾತ್ರವಲ್ಲ, ಕೆಲವು ಭಾಗಗಳನ್ನು ಸಂಸ್ಕೃತದಿಂದ ತನ್ನದೇ ಆದ ವಿಶೇಷ ಶೈಲಿಯಲ್ಲಿ ಭಾವಗಳು ಕೆಡದಂತೆ ತರ್ಜುಮೆ ಮಾಡಿದ್ದಾನೆ. ಇಲ್ಲಿ ಗಮನೀಯವಾದ ಅಂಶವೆಂದರೆ ಸಮಕಾಲೀನ ಪ್ರಜ್ಞೆಯನ್ನು ತನ್ನ ಕಾವ್ಯದಲ್ಲಿ ಚೆನ್ನಾಗಿ ಅಳವಡಿಸಿದ್ದಾನೆ. ಕೆಲವು ನಿರೂಪಣೆಗಳಲ್ಲಿ ತನ್ನ ಸ್ವಂತಿಕೆಯನ್ನು ತೋರಿಸಿ, ಅನಗತ್ಯವೆನಿಸಿರುವ ಅನೇಕ ವಿಷಯಗಳನ್ನು ಕೈಬಿಟ್ಟು, ತನಗೆ ಸರಿಯೆನಿಸಿದ ಕೆಲವು ವಿಷಯಗಳನ್ನು ಹೊಸದಾಗಿ ಸೇರಿಸಿದ್ದಾನೆ. ಕವಿಯಪ್ರತಿಭೆ ಹಾಗೂ ಆತನಿಗೆ ಸಂಸ್ಕೃತದಲ್ಲಿದ್ದ ಪಾಂಡಿತ್ಯ ಈ ಕೃತಿಯಲ್ಲಿ ಮೇಳೈಸಿದೆ

''ಕುಮಾರವ್ಯಾಸ ಭಾರತವು ವ್ಯಾಸಭಾರತವನ್ನು ಎಷ್ಟು ಮಟ್ಟಿಗೆ ಅನುಸರಿಸಿದೆ ? ಯಾವ ಮಾರ್ಪಾಟನ್ನು ಮಾಡಿಕೊಂಡಿದೆ ? ಅವುಗಳಿಂದ ಉಂಟಾದ ಸ್ವಾರಸ್ಯವೇನು ? ಎಂಬ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ಕೊಡುವುದಕ್ಕೆ ಸಂಶೋಧನ ಸಾಮಗ್ರಿ ಸಾಲದು. ಎರಡೂ ಭಾರತಗಳಲ್ಲಿ ಅನೇಕ ಪ್ರಕ್ಷಿಪ್ತಗಳಿವೆ. ಯಾವುದು ಮೂಲ, ಯಾವುದು ಪ್ರಕ್ಷಿಪ್ತ

ಎಂಬುದನ್ನು ನಿರ್ಣಯಿಸುವುದು ಕಷ್ಟ. ಈ ವಿಷಯದಲ್ಲಿ ಸಂಶೋಧನೆ ನಡೆಯುತ್ತಿದೆ. ಅದರ ಫಲಗಳಿನ್ನೂ ಸಂಪೂರ್ಣವಾಗಿ ಲಭಿಸಿಲ್ಲ"[೩]. ಎಂದು ರಂ.ಶ್ರೀ.ಮುಗಳಿಯವರು ಹೇಳಿರುವರಾದರೂ ಈಗ ದೊರೆತಿರುವ ಸಂಸ್ಕೃತಭಾರತದ[೪] ಆಧಾರದಮೇಲೆ ಮೂಲವ್ಯಾಸಭಾರತಕ್ಕೂ ಕುಮಾರವ್ಯಾಸಭಾರತಕ್ಕೂ ಹೋಲಿಸಿ, ಕಂಡುಬರುವ ಕೆಲವು ಅಂಶಗಳನ್ನು ಗಮನಿಸಿನೋಡುವ ಅಗತ್ಯವಿದೆ. ಇದರಿಂದ ಕುಮಾರವ್ಯಾಸನ ಕಾವ್ಯದ ವಿಶಿಷ್ಟತೆಯನ್ನು ಗಮನಿಸಲು ಶಕ್ಯವಿದೆ. ಇಲ್ಲಿ ವಿರಾಟಪರ್ವಕ್ಕೆ ಸಂಬಂಧಿಸಿದಂತೆ ಕೆಲವು ಅಂಶಗಳನ್ನು ಗಮನಿಸಿದೆ.

ಕುಮಾರವ್ಯಾಸನ ಮಾರ್ಪಾಡು

ಮೂಲಮಹಾಭಾರತಕ್ಕೆ ಕಥಾನಾಯಕನಿಲ್ಲ, ಅಲ್ಲಿ ದೈವವೇ ಸ್ಥೂಲವಾಗಿ ನಿರ್ಣಾಯಕ ಪಾತ್ರ, ಕುಮಾರವ್ಯಾಸ ಕನ್ನಡಭಾರತಕ್ಕೆ ವೀರನಾರಾಯಣನನ್ನು ಕಥಾನಾಯಕನನ್ನಾಗಿ ರೂಪಿಸಿ, ವೈದಿಕ ಮತದ ಸಮಾಜಪರ ಜನಪರ ಕಾಳಜಿಗಳನ್ನು ಕೃಷ್ಣನಮೂಲಕ ಪುನರ್ ರಚಿಸಿದ್ದಾನೆ. 'ಕೃಷ್ಣನನ್ನು ನಾಯಕನನ್ನಾಗಿ ಮಾಡಿಕೊಂಡಾಗಲೇ ಈ ಕೃತಿಗೆ ವ್ಯಕ್ತಿನಿಷ್ಠ ಸ್ವರೂಪ ಪ್ರಾಪ್ತವಾಯಿತು'[೫] ಆದರೆ ವ್ಯಾಸವಿರಚಿತ ಮೂಲಭಾರತದಲ್ಲಿ ಇಂಥ ವ್ಯಕ್ತಿನಿಷ್ಠೆಕಾಣಿಸುವುದಿಲ್ಲ.

ವ್ಯಾಸಭಾರತದ ಪಾತ್ರಗಳಿಗೂ ಕುಮಾರವ್ಯಾಸನ ಪಾತ್ರಗಳಿಗೂ ಇರುವ ಮೂಲಭೂತ ಅಂತರವು ಅವರಿಬ್ಬರ ಜೀವನ ಧೋರಣೆ ಹಾಗೂ ಕಾವ್ಯಮನೋಧರ್ಮಗಳಿಂದಲೇ ಚಿಮ್ಮುತ್ತದೆ. 'ವ್ಯಾಸರು ತಮ್ಮ ಕಾಲದ ಅಥವಾ ಸ್ವಲ್ಪ ಹಿಂದಿನ ಇತಿಹಾಸವನ್ನು ಕಾವ್ಯವಸ್ತುವಾಗಿ ಆರಿಸಿಕೊಂಡವರು[೬]. ಇವರ ಉದ್ದೇಶ ಕೃಷ್ಣಕಥೆಯನ್ನು

ಚಿತ್ರಿಸುವುದಾಗಿರಲಿಲ್ಲ. ವ್ಯಾಸ ಹಾಗೂ ಕುಮಾರವ್ಯಾಸಭಾರತದಲ್ಲಿ ಕಂಡುಬರುವ ಇನ್ನು ಕೆಲವು ವ್ಯತ್ಯಾಸಗಳನ್ನು ಇಲ್ಲಿ ಗುರುತಿಸಲಾಗಿದೆ.

೧) ಅಜ್ಞಾತವಾಸದ ಸಂದರ್ಭದಲ್ಲಿ ಯುಧಿಷ್ಠಿರಾದಿಗಳೂ ಈ ಕೆಳಗಿನ ಗುಪ್ತನಾಮಗಳನ್ನು ಇಟ್ಟುಕೊಳ್ಳುತ್ತಾರೆಂದು ಮೂಲಭಾರತದಲ್ಲಿ ಹೇಳಲಾಗಿದೆ.

ಜಯೋ ಜಯಂತೋ ವಿಜಯೋ ಜಯತ್ಸೇನೋ ಜಯದ್ಬಲಃ
ಇತಿ ಗುಹ್ಯಾನಿ ನಾಮಾನಿ ಚಕ್ರೇ ತೇಷಾಂ ಯುಧಿಷ್ಠಿರಃ

ಪಾಂಡವರಿಟ್ಟುಕೊಳ್ಳುವ ಈ ಗುಪ್ತನಾಮಗಳ ಬಗ್ಗೆ ಕುಮಾರವ್ಯಾಸ ಹೇಳಿಲ್ಲ. ಆದರೆ ಕೀಚಕನ ಅನುಜರು ಕೀಚಕನ ಮರಣಾನಂತರ ಅವನ ಶವದೊಡನೆ ದ್ರೌಪದಿಯನ್ನು ಸುಡಲೆಂದು ಎಳೆದುಕೊಂಡು ಬಂದಾಗ ದ್ರೌಪದಿಯು

ಕೇಳಕಟ ಜಯನೇ ಜಯೇಶನೇ
ಕೇಳುವಿಜಯನೇ ಜಯದ್ಬಲ ನೀ
ಕೇಳು ಜಯಸೇನನೆ ಕುಠಾರಕರೆನ್ನನೆಳೆದೊಯ್ದು
ಬೀಳಿಕುವರಗ್ನಿಯಲಿ ನೀವಕ
ಟೇಳಿ ತಡಮಾದುವರೆಯೆನಲದ
ಕೇಳಿದನು ಕಲಿಭೀಮ ಸತಿಯಾಕ್ರಂದನ ಧ್ವನಿಯ (೩-೯೮)

ಈ ಪ್ರಕಾರವಾಗಿ ಕೂಗುತ್ತಾ ತನ್ನ ಪತಿಯರನ್ನು ಗುಪ್ತನಾಮಗಳಿಂದ ಕರೆಯುತ್ತಾಳೆ. ಇಲ್ಲಿ ಕುಮಾರವ್ಯಾಸ ಮೂಲಭಾರತದಲ್ಲಿ ಕೊಟ್ಟರುವ ಈ ಗುಪ್ತನಾಮಗಳನ್ನು ಬಳಸಿಕೊಂಡಿದ್ದಾನೆ.

೨) ಪಾಂಡವರು ಅಜ್ಞಾತವಾಸಕ್ಕೆ ತಮಗೆ ಯಾವ ರಾಜ್ಯ ಪ್ರಶಸ್ತ್ಯವೆಂದು ಚರ್ಚಿಸುವಾಗ ಯುಧಿಷ್ಠಿರನಿಗೆ ಅರ್ಜುನ ಹೀಗೆ ಹೇಳುತ್ತಾನೆ

ಬಡಗಲವರದು ಮೂಡಣರಸುಗ
ಳೊಡೆ ಗೆಳೆಯರಾಗಿಹರು ತೆಂಕಣ
ಕಡೆಯವರು ಕಂಡಿಹರು ಕೆಲಬಲದವರು ಕೊಂಡೆಯರು
ಪಡುವಣವರತಿ ಕೃಶರು ನಮಗಿ
ನ್ನಡಗಲಿದರೊಳಗಾವ್ಯದೆಂದೆನೆ
ನುಡಿದನರ್ಜುನದೇವನವನೀಪತಿಗೆ ವಿನಯದಲಿ

(೧–೨)

ಮೂಲದಲ್ಲಿ

ಸಂತಿ ರಮ್ಯಾ ಜನಪದಾ ಬಹ್ವನ್ನಾಃ ಪರಿತಃ ಕುರೂನ್ ಪಾಂಚಾಲಾಶ್ಚೇದಿ ಮತ್ಸ್ಯಾಶ್ಚ
ಶೂರಸೇನಾಃ ಪಟ್ಟಚ್ಚರಾಃ ದಶಾರ್ಣಾ ನವರಾಷ್ಟ್ರಂ ಚ ಮಲ್ಲಾಃ ಶ್ವಾಲಾ ಯುಗಂಧರಾಃ

ಕುರುದೇಶದ ಸುತ್ತ ರಮ್ಯವಾದ ಅನ್ನ ಸಮೃದ್ಧವಾದ ಪಾಂಚಾಲ, ಚೇದಿ, ಮತ್ಸ್ಯ, ಶೂರಸೇನ ಪಟಚ್ಚರಾ ದಶಾರ್ಣ, ನವರಾಷ್ಟ್ರ ಮಲ್ಲ, ಸಾಲ್ವ, ಯುಗಂಧರದೇಶಗಳಿವೆ ಎಂದು ಅರ್ಜುನ ನುಡಿಯುತ್ತಾನೆ.
ಇಲ್ಲಿ ಕೊಟ್ಟಿರುವ ದೇಶಗಳನ್ನು ಕುಮಾರವ್ಯಾಸ ಹೆಸರಿಸದೆ ಬಡಗಣ, ತೆಂಕಣ, ಪಡುವಣ, ಮೂಡಣ, ಕೆಲಬಲ ಎಂದಷ್ಟೇ ಹೇಳಿದ್ದಾನೆ.

ಮೂಲದಲ್ಲಿ ಅರ್ಜುನ ಹೇಳುವ ದೇಶಗಳಲ್ಲಿ ಧರ್ಮರಾಯ ಮತ್ಸ್ಯನಗರವನ್ನು ಆರಿಸಿಕೊಳ್ಳುತ್ತಾನೆ. ಕುಮಾರವ್ಯಾಸನಲ್ಲಿ ಅರ್ಜುನನೇ ಮತ್ಸ್ಯನಗರವನ್ನು ಸೂಚಿಸುತ್ತಾನೆ.

೩) ಮೂಲಭಾರತದಲ್ಲಿ ಪಾಂಡವರು ತಮ್ಮ ಆಯುಧಗಳನ್ನು ಅಲ್ಲಿ ಬಿದ್ದಿದ್ದ ಒಂದು ಶವದೊಡನೆ ಬನ್ನಿಮರದಮೇಲೆ ಬಿಗಿದರು ಎಂದಿದೆ. ಅಲ್ಲದೆ ೧೮೦ ವರ್ಷವಯಸ್ಸಿನ ತಮ್ಮ ತಾಯಿಯ ಮೃತಶರೀರವನ್ನು ಕುಲಧರ್ಮವನ್ನನುಸರಿಸಿ ಶಮೀವೃಕ್ಷದಲ್ಲಿ ಕಟ್ಟಿರುವೆವೆಂದು ಅಲ್ಲಿದ್ದ ದನಗಾಹಿಗಳಿಗೆ ಕೇಳಿಸುವಂತೆ ಕೂಗಿ ಹೇಳುವರು.

ಆದರೆ ಕುಮಾರವ್ಯಾಸ ಶಸ್ತ್ರಾಸ್ತ್ರಗಳನ್ನು ಹೆಣದ ಆಕಾರದಲ್ಲಿ ಬನ್ನಿಯಮರದಮೇಲೆ ಕಟ್ಟಿದರು ಎಂದಷ್ಟೇ ಹೇಳಿದ್ದಾನೆ. ಮೂಲಭಾರತದಲ್ಲಿ ಶವದೊಡನೆ ಕಟ್ಟುವ ಉದ್ದೇಶ, ಶವವನ್ನು ಕಂಡು ಹೆದರುವುದಷ್ಟೆ ಅಲ್ಲದೆ ಅದರ ದುರ್ಗಂಧದ ಕಾರಣದಿಂದ ಜನರು ಅದರ ಸಮೀಪ ಬರುವುದಿಲ್ಲ ಎಂಬುದಾಗಿದೆ. ಆದರೆ ಧರ್ಮರಾಯನಿಂದ ತಾಯಿ ಸತ್ತಿರುವಳೆಂಬ ಸುಳ್ಳನ್ನು ಹೇಳಿಸದಿರುವ ಕುಮಾರವ್ಯಾಸನ ಮಾರ್ಪಾಟೂ ಅಷ್ಟೇ ಉಚಿತವಾಗಿದೆ. ಅಲ್ಲದೆ ಕುಮಾರವ್ಯಾಸ ಪಾಂಡವರು ಪುರೋಪಕಂಠದ ನಂದನ (ಊರಸಮೀಪದ ತೋಟ) ದ ಬಳಿ ಎಂದು ಹೇಳಿರುವ ಈ ದೃಶ್ಯವನ್ನು ಮೂಲದಲ್ಲಿ ಸ್ಮಶಾನದಲ್ಲಿ ಎಂದೇ ಹೇಳಿದೆ ಹಾಗಾಗಿ ಸ್ಮಶಾನದಲ್ಲಿ ಅನೇಕ ಪಂಗಡದಜನ ತಮ್ಮ ಆಚರಣೆಗೆ ತಕ್ಕಂತೆ ಶವಸಂಸ್ಕಾರಮಾಡುವುದು ಉಚಿತ ತರವಾದ್ದರಿಂದ ವ್ಯಾಸರು ಆರೀತಿ ಹೇಳಿರುವುದು ಸರಿಯಾಗಿದೆ ಆದರೆ ಊರಸಮೀಪದ ಉದ್ಯಾನವನದ ಮರದಲ್ಲಿ ಶವವನ್ನು ಬಿಗಿದು ಅದನ್ನು ಸುತ್ತಮುತ್ತಲಿನವರಿಗೆ ಕೇಳುವಂತೆ ಕೂಗಿ ಹೇಳುವುದು ಸರಿಯಲ್ಲ. ಅಲ್ಲದೆ ವ್ಯಾಸರು ಹೇಳಿರುವಂತೆ ದನಗಾಹಿಗಳು ಸ್ಮಶಾನದಬಳಿ ಇರುವುದಿಲ್ಲ ಕುಮಾರವ್ಯಾಸ ಹೇಳಿರುವಂತೆ ಊರಹೊರಗಿನ ಉಪವನದಬಳಿ ದನಗಾಹಿಗಳು ಇರುವ ಸಾಧ್ಯತೆಗಳು ಹೆಚ್ಚು.

ಳ) ಈ ಪರ್ವದ ಕೊನೆಯ ಸಂಧಿಯಲ್ಲಿ ಪಾಂಡವರು ಅಜ್ಞಾತವಾಸ ಮುಗಿದ ಮಾರನೆಯದಿನ ಮಂಗಳಸ್ನಾನಾಚರಣೆಗಳನ್ನು ಮುಗಿಸಿ ಹೊಸ ವಸ್ತ್ರಧರಿಸಿ ವಿರಾಟನ ಸಭಾಮಂದಿರದಲ್ಲಿ ಧರ್ಮರಾಯನು ಸಿಂಹಾಸನದ ಮೇಲೂ ಅವನ ತಮ್ಮಂದಿರು ಅವನ ಸುತ್ತಲೂ ಕುಳಿತಿರುತ್ತಾರೆ.

ಕುಮಾರವ್ಯಾಸ ಭಾರತದಲ್ಲಿ ಈ ಸುದ್ದಿಯನ್ನು ವಿರಾಟನಿಗೆ ಕಂಚುಕಿಯಿಂದ ತಿಳಿಯುತ್ತದೆ, ವಿರಾಟ ರಾಜಸಭೆಗೆ ಬಂದು ಅವರಾರೆಂದು ತಿಳಿಯದೆ ಉತ್ತರನಿಂದ ವಿಷಯ ಅರಿಯುತ್ತಾನೆ.

ಮೂಲಭಾರತದಲ್ಲಿ ಕಂಚುಕಿ ಬಂದು ವಿರಾಟನಿಗೆ ಹೇಳುವ ಸುದ್ದಿ ಇಲ್ಲ, ಅಲ್ಲದೆ ರಾಜಸಭೆಗೆ ಬಂದು ವಿರಾಟ ಅವರನ್ನೆಲ್ಲ ಗುರುತಿಸಿ ಕಂಕಭಟ್ಟನ ಮೇಲೆ ರೇಗುತ್ತಾನೆ,

ನಂತರ ಅರ್ಜುನ ಅವನಿಗೆ ಧರ್ಮರಾಯ ಹಾಗೂ ತಮ್ಮೆಲ್ಲರ ಪರಿಚಯವನ್ನು ಮಾಡಿಕೊಡುತ್ತಾನೆ.

ಈ ಪ್ರಕಾರವಾಗಿ ಕುಮಾರವ್ಯಾಸನು ಕಾವ್ಯದ ಉದ್ದಕ್ಕೂ ಸಣ್ಣ ಸಣ್ಣ ಬದಲಾವಣೆಗಳನ್ನು ಮಾಡಿಕೊಂಡಿರುವುದಕ್ಕೆ 'ಅವನು ನೋಡಿರಬಹುದಾದ ಕನ್ನಡ ಮರಾಠಿ ನಾಟಕಗಳು, ಯಕ್ಷಗಾನಗಳು, ಕೇಳಿದ ಹರಿಕಥೆಗಳು ಕಾರಣವಿರಬಹುದು'[೭] ಎಂದು ಅ ರಾ ಮಿತ್ರ ಅವರು ಅಭಿಪ್ರಾಯ ಪಡುತ್ತಾರೆ.

೫) ಕುಮಾರವ್ಯಾಸನಲ್ಲಿ ಉತ್ತರಕುಮಾರ ತಂಗಿ ಉತ್ತರೆಯನ್ನು ಅರ್ಜುನನಿಗೆ ಕೊಡುವುದಾಗಿ ಹೇಳಿದರೆ ಮೂಲದಲ್ಲಿ

> **ಉತ್ತರಾಂ ಪ್ರತಿಗೃಹ್ಣಾತು ಸವ್ಯಸಾಚೀ ಧನಂಜಯಃ**
> **ಅಯಂ ಹ್ಯೌಪಯಿಕೋಭರ್ತಾ ತಸ್ಯಾಃ ಪುರುಷ ಸತ್ತಮಃ**

ಎಂದು ವಿರಾಟನೇ ನುಡಿಯುತ್ತಾನೆ. 'ಇಲ್ಲಿ ಕುಮಾರವ್ಯಾಸ ಮಾಡಿಕೊಂಡಿರುವ ಮಾರ್ಪಾಟಿನ ಉದ್ದೇಶ ತಿಳಿಯುವುದಿಲ್ಲ ಆದರೆ ಉತ್ತರಕುಮಾರನಿಗಿಂತ ವಿರಾಟ ಈ ಮಾತನ್ನು ಹೇಳುವುದು ಉಚಿತ'[೮]ವೆಂಬ ಎಲ್.ಎಮ್.ಎಲ್.ಶಾಸ್ತ್ರಿಅವರ ಅಭಿಪ್ರಾಯ ಸರಿಯಾಗಿದೆ. ತಂದೆ ಎದುರಿಗೇ ಇರುವಾಗ ಕುಮಾರವ್ಯಾಸ ಉತ್ತರನಿಂದ ಈ ಮಾತನ್ನು ಹೇಳಿಸಿರುವುದು ಅನೌಚಿತ್ಯ.

ಕುಮಾರವ್ಯಾಸ ಹೇಳದೇ ಬಿಟ್ಟಿರುವ ಮೂಲಭಾರತದ ಕೆಲವು ಪ್ರಸಂಗಗಳು.

೧) ಮೂಲಭಾರತದ ವಿರಾಟಪರ್ವದ ಆರಂಭದಲ್ಲಿ ಪಾಂಡವರ ಜೊತೆಯಲ್ಲಿ ಧೌಮ್ಯ ಮುನಿಗಳಿರುತ್ತಾರೆ. ಪಾಂಡವರು ಅಗ್ನಿಕಾರ್ಯ ನಡೆಸುವಲ್ಲಿ ಅವರು ನೆರವಾಗುತ್ತಾರೆ. ಆ ನಂತರ ಮುಂದೆ ಅಜ್ಞಾತವಾಸದಲ್ಲಿ ರಾಜಾಲಯದಲ್ಲಿ ಯಾವ ರೀತಿ ನಡೆದುಕೊಳ್ಳಬೇಕೆಂದು ಕೆಲವು ಸೂಚನೆ, ಉಪದೇಶಗಳನ್ನು ಕೊಡುತ್ತಾರೆ. ಇದು ೩೬ ಶ್ಲೋಕಗಳಷ್ಟು ದೀರ್ಘವಾಗಿದೆ.

೨) ವಿರಾಟನಗರಕ್ಕೆ ಬರುವಾಗ ಕಾಡಿನ ದಾರಿಯಲ್ಲಿ ನಡೆದು ಅತ್ಯಂತ ಗ್ಲಾನಿಯಿಂದ ಕೂಡಿದ ದ್ರೌಪದಿಯನ್ನು ಹೆಗಲಮೇಲೆ ಕುಳ್ಳಿರಿಸಿಕೊಂಡು ನಡೆಯುವಂತೆ ಧರ್ಮರಾಜನು ನಕುಲ ಸಹದೇವರಿಗೆ ಹೇಳಲು ಅವರು ತಾವೂ ಹೆಚ್ಚು ಶ್ರಮಿಸಿರುವುದರಿಂದ ತಮಗೆ ಅಸಾಧ್ಯವೆಂದು ತಿಳಿಸುತ್ತಾರೆ. ಆನಂತರ ಯುದಿಷ್ಠಿರ

ಧನಂಜಯ ಸಮುದ್ಯಮ ಪಾಂಚಾಲೀಂವಹ ಭಾರತ
ರಾಜ್ಯಧಾನ್ಯಾಂ ನಿವತ್ಸಾಮೋ ವಿಮುಕ್ತಾಶ್ಚವನಾದಿತಃ

ಎಂದು ಅರ್ಜುನನಿಗೆ ಹೇಳಲು ಅವನು ಪಾಂಚಾಲಿಯನ್ನು ಎತ್ತಿಕೊಂಡು ಬರುತ್ತಾನೆ.

೩) ಮೂಲಭಾರತದ ಸುದೇಷ್ಣೆಯ ಬಳಿ ಬಂದ ದ್ರೌಪದಿಯನ್ನು ಮೊದಲಬಾರಿ ಕಂಡ ಸುದೇಷ್ಣೆ ಆಕೆಯನ್ನು ತನ್ನ ಅಂತಃಪುರದಲ್ಲಿ ಇಟ್ಟುಕೊಂಡಲ್ಲಿ ಆಕೆಯರೂಪಕ್ಕೆ ಮನಸೋತು ವಿರಾಟನು ಆಕೆಯಲ್ಲಿ ಅನುರಕ್ತನಾಗಿ ತನ್ನನ್ನು ಬಿಡಬಹುದೆಂದು ಶಂಕಿಸುತ್ತಾಳೆ. ಕುಮಾರವ್ಯಾಸ ವಿರಾಟನನ್ನು ಸಭ್ಯನೆಂದು ತೋರಿಸಲೆಂದು ಈ ಪ್ರಸ್ತಾಪವನ್ನು ಬಿಟ್ಟಿರಬೇಕು.

೪) ಕೀಚಕನು ನಿನ್ನಂಥ ಅನಿಂದಿತ ಸುಂದರಯುವತಿಯರನ್ನು ನಾನು ನೋಡಿಯೇ ಇಲ್ಲ ಎನ್ನುವುದು, ದ್ರೌಪದಿ ನನ್ನನ್ನು ಪ್ರೀತಿಸಲು ನೀನು ಯೋಗ್ಯನಲ್ಲ ಎಂದು ಹೇಳುತ್ತಾ – ಬೆಟ್ಟವನ್ನು ತಕ್ಕಡಿಯಲ್ಲಿ ತೂಗಬಲ್ಲೆಯಾ ಎಂದು ಕೇಳುವ ಮಾತು ಕುಮಾರವ್ಯಾಸನಲ್ಲಿಲ್ಲ. ಮೂಲದಲ್ಲಿ ಇರುವ ಈ ಮಾತು ದ್ರೌಪದಿಯ ಸಂಪೂರ್ಣ ನಿರಾಕರಣೆಯ ಮಾತಿನಂತೆ ತೋರುವುದಿಲ್ಲ.

೬) ದ್ರೌಪದಿಯನ್ನು ಕೀಚಕ ಸಭೆಗೆ ಅಟ್ಟಿಸಿಕೊಂಡುಬಂದಾಗ, ಕುಮಾರವ್ಯಾಸನ ವಿರಾಟ ಯಾವ ಮಾತನ್ನೂ ಆಡುವುದಿಲ್ಲ, ವ್ಯಾಸರಲ್ಲಿ ಪರೋಕ್ಷಂ ನಾಭಿ ಜಾನಾಮಿ ವಿಗ್ರಹಂಯುವ ಯೋ ರಹಂ ಅರ್ಥತತ್ವ ಮವಿಜ್ಞಾಯ ಕಿಂ ನು ಸ್ಯಾತ್ ಕೌಶಲಂ ಮಮ ? – ನನ್ನ ಪರೋಕ್ಷದಲ್ಲಿ ನಿಮ್ಮಿಬ್ಬರಿಗೆ ಕಲಹವಾಗಿದ್ದರೆ ಅದು ನನಗೆ

ತಿಳಿಯದು ಅದನ್ನು ತಿಳಿದುಕೊಳ್ಳದೆ ನಿರ್ಣಯಮಾಡುವಂತಿಲ್ಲ. ಎಂದು ನುಡಿಯುತ್ತಾನೆ.

೭) ಕುಮಾರವ್ಯಾಸನಲ್ಲಿ ಸತ್ತಕೀಚಕನ ತಲೆಯನ್ನು ಭೀಮ ಎದೆಗೆ ಸಕ್ಕಿಸಿ ಕೈಕಾಲು ಹೊಟ್ಟೆಯಲ್ಲಿ ಸೇರಿಸಿ ದ್ರೌಪದಿಯನ್ನು ಕರೆದು ತೋರಿಸುತ್ತಾನೆ, ವ್ಯಾಸರಲ್ಲಿ ಕೀಚಕನ ಎಲ್ಲಾ ಅಂಗಾಗಗಳನ್ನು ಮಥಿಸಿ, ಮಾಂಸಪಿಂಡವಾಗಿದ್ದ ಕೀಚಕನ ದೇಹವನ್ನು ಕತ್ತಲಾಗಿದ್ದ ನಾಟ್ಯಶಾಲೆಯಲ್ಲಿ ತನ್ನ ಎರಡೂ ಕೈಗಳನ್ನು ಉಜ್ಜಿ ಬೆಂಕಿಹೊತ್ತಿಸಿ ಆ ಬೆಳಕಿನಲ್ಲಿ ಭೀಮ ಕೀಚಕನ ಶವವನ್ನು ದ್ರೌಪದಿಗೆ ತೋರಿಸುತ್ತಾನೆ.

ಹೀಗೆ ಕುಕಮಾರವ್ಯಾಸ ಸಂಭಾಷಣೆ, ಘಟನೆ, ಮನಃಸ್ಥಿತಿ, ಯುದ್ಧ ಹಾಗೂ ಇತರ ವರ್ಣನೆಗಳಲ್ಲಿ ತನ್ನ ಸ್ವಂತಿಕೆಯನ್ನು ತೋರಿಸಿರುವುದನ್ನು ಅಡಿಗಡಿಗೂ ಕಾಣಬಹುದು.

ಕುಮಾರವ್ಯಾಸನ ಸ್ವಂತ ನಿರೂಪಣೆ :

ವ್ಯಾಸಭಾರತವನ್ನು ಆಕರವಾಗಿಸಿಕೊಂಡರೂ ಕುಮಾರವ್ಯಾಸಭಾರತ ಅದರ ಪಡಿನೆರಳಾಗಿ, ಮಾರ್ದನಿಯಾಗಿ ಮೂಡಿಬಂದಿಲ್ಲ. 'ಅನುವಾದಾಂಶಗಳು ಬೇಕಾದಷ್ಟಿದ್ದರೂ ಈ ಕಾವ್ಯದ ಕಲೆ, ದರ್ಶನಗಳು ಕುಮಾರವ್ಯಾಸನ ಸ್ವಂತ ಆಸ್ತಿಗಳು'[೯] ಇದು 'ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೆ ಎಂಬ ಅವನ ಹೇಳಿಕೆಯಲ್ಲೇ ವ್ಯಕ್ತವಾಗುತ್ತದೆ. ತನ್ನದೇಆದ ರೀತಿ ನೀತಿಗಳಿಂದ ಕುಮಾರವ್ಯಾಸ ಭಾರತ ಸ್ವತಂತ್ರವೂ ಸೂಪಜ್ಞವೂ ಆದ ಮಹಾಕಾವ್ಯವಾಗಿದೆ.

೧) ಅಜ್ಞಾತವಾಸದ ಸಮಯದಲ್ಲಿ ಭೀಮನಿಗೆ ಆಯುಧವನ್ನು ಕೊಡಬಾರದೆಂದು ಧರ್ಮರಾಯ ದೇವತೆಗಳಲ್ಲಿ ಪ್ರಾರ್ಥಿಸಿಕೊಂಡಾಗ ಕೋಪಗೊಂಡ ಭೀಮ

> **ನೀವು ಕುಂತಿಯ ಮಕ್ಕಳಾದಿರಿ**
> **ನಾವು ದುರ್ಯೋಧನನವರು ತ**
> **ಪ್ಪಾವುದಿದಕೆಂದನಿಲಸುತನೌಡೊತ್ತಿ ಗರ್ಜಿಸಿದ**
>
> **ಸುರನಿಕರ ಕಾದಿರಲಿ ಮೇಣೀ**

ಧರಣಿ ಕೊಡೆನೆಂದೆನಲಿ ಶಕ್ರನ
ಪುರಕೆ ಧಾಳಿಯುನಿಡುವೆನಮರರ ಮೋರೆಗಳ ತಿವಿದು
ಉರುತರಾಸ್ತ್ರವನೊಯ್ವೆನೆಂದ
ಬ್ಬರಿ' ಸುತ್ತಾನೆ

(೧ - ೧೨ & ೧೩)

ಹೀಗೆ ಹೇಳುವ ಮಾತು ಮೂಲಭಾರತದಲ್ಲಿ ಬರುವುದಿಲ್ಲ

೨) ದ್ರೌಪದಿಯು ವಿರಾಟನರಸಿ ಸುಧೇಷ್ಣೆಯ ಬಳಿ ಬಂದು ಸೇರುವಾಗ

ಅತುಳಬಲ ಗಂಧರ್ವರೈವರು
ಪತಿಗಳೆನಗುಂಟೆನ್ನ ಚಿತ್ತಕೆ
ಖತಿಯ ಮಾಡಿದರೊಂದು ವರುಷವು ಬಿಡುವೆನವರುಗಳ

(೧–೨೮)

ಎಂದು ಹೇಳುತ್ತಾಳೆ. ಹೀಗೆ ನನ್ನ ಮನಸ್ಸಿಗೆ ಕೋಪವುಂಟುಮಾಡಿದಾಗ ಒಂದು ವರ್ಷ ಅವರಿಂದ ದೂರ ಇರುವೆ ಎಂದು ಹೇಳುವ ಕುಮಾರವ್ಯಾಸನ ದ್ರೌಪದಿಯಂತೆ ಮೂಲ ಭಾರತದ ದ್ರೌಪದಿ ಕೋಪದ ವಿಷಯವನ್ನು ಹೇಳುವುದಿಲ್ಲ, ಆದರೆ ಇಲ್ಲಿ ಕುಮಾರವ್ಯಾಸ ಹೇಳಿರುವ ಕಾರಣ ಚೆನ್ನಾಗಿದೆ. ಇದರೊಂದಿಗೆ ಕುಮಾರವ್ಯಾಸ ಮೂಲದಲ್ಲಿರುವ

ಯೋ ಮೇ ನ ದದ್ಯಾದುಚ್ಚಿಷ್ಟ ನ ಚ ಪಾದೌ ಪ್ರಧಾವಯೇತ್
ಪ್ರಿಯೇಯುಸ್ತೇನ ವಾಸೇನ ಗಂಧರ್ವಾಃ ಪತಯೋ ಮಮ ॥

“ಯಾರು ನನಗೆ ಎಂಜಲನ್ನು ಕೊಡುವುದಿಲ್ಲವೋ, ಯಾರು ನನ್ನಿಂದ ತಮ್ಮ ಪಾದವನ್ನು ತೊಳೆಸಿಕೊಳ್ಳುವುದಿಲ್ಲವೋ ಅಂಥವರ ಮನೆಯಲ್ಲಿ ಇರುವುದನ್ನು ನನ್ನ ಪತಿಯರು ಇಷ್ಟಪಡುತ್ತಾರೆ” ಎಂದು ಹೇಳುವ ದ್ರೌಪದಿಯ ಮಾತನ್ನು ಕುಮಾರವ್ಯಾಸ ಕೈ ಬಿಟ್ಟಿದ್ದಾನೆ.

೩)	ಸಭೆಯಲ್ಲಿ ಎಲ್ಲರಮುಂದೆ ಕೀಚಕ ದ್ರೌಪದಿಯನ್ನು ಕಾಲಿನಿಂದ ಒದ್ದು ಹಿಂಸಿಸಿದಾಗ ಪತಿಗಳು ಎದುರಿಗಿದ್ದರೂ ಅಸಹಾಯಕರಾಗಿರುತ್ತಾರೆ. ಅಂದಿನ ಇರುಳು ದ್ರೌಪದಿ ಭೀಮನಬಳಿ ಬಂದಾಗ ಭೀಮ ದ್ರೌಪದಿಯರನಡುವೆ ಸಹಜವಾದ ಸಂಭಾಷಣೆಯನ್ನು ಕುಮಾರವ್ಯಾಸ ತಂದಿದ್ದಾನೆ.

ಸ್ಮೈರಿಸರು ಬಾಣಸಿನ ಭವನದ
ನಾರಿಯರು ದುರ್ಜನರು ಖುಲ್ಲಕು
ಠಾರರಿವರರಮನೆಟಿಚು ನಾಯ್ಗಳು ನಾವು ದೇಸಿಗ್ಗರು
ಭಾರವಿದು ಕೆಲನರಿಯದಂತಿರೆ
ನಾರಿ ಹೇಳಿದು ಹೋಗು ದುಗುಡವಿ
ದಾರದೆಸೆಯಿಂದಾದುದೆನೆ ಬಿನ್ನೈಸಿದಳು ರಾಣಿ (೩-೪೧)

ಮೂಲದಲ್ಲಿ ಇಂತಹ ಸಂಭಾಷಣೆಯಿಲ್ಲ ಬದಲಿಗೆ ದ್ರೌಪದಿಯನ್ನು ಕಂಡ ಭೀಮ ಅವಳ ಕೈಹಿಡಿದು ಜೋರಾಗಿ ಅಳುತ್ತಾನೆ.

ಮುಂದೆ ದ್ರೌಪದಿಗೆ ಕೀಚಕನನ್ನು ವಧಿಸಲು ಉಳಿದ ನಾಲ್ವರು ಗಂಡಂದಿರನ್ನು ಕೇಳುಹೋಗೆಂದು ಕೋಪಿಸಿಕೊಂಡು ''ಕಲಹಕಾದೊಡೆ ನಾವು ರಮಿಸುವರುಳಿದವರು.....'' ಎಂಬ ಆಕ್ಷೇಪಣೆಯ ಮಾತುಗಳನ್ನಾಡುವುದೂ ಮೂಲದಲ್ಲಿಲ್ಲ. ಅಲ್ಲಿ ಭೀಮ ದ್ರೌಪದಿಗೆ ತಾವು ಅಜ್ಞಾತದಲ್ಲಿದ್ದೇವೆ ಕೌರವರಿಗಿದರ ಸುಳಿವು ದೊರೆಯಕೂಡದೆಂದು ಎಚ್ಚರಿಕೆಯ ಮಾತನ್ನಾಡುತ್ತಾನೆ.

೪)	ಭೀಮನನ್ನು ಒಪ್ಪಿಸಲು ಕುಮಾರವ್ಯಾಸನ ದ್ರೌಪದಿ ನಾನಾಪರಿಯಲ್ಲಿ ಗೋಳಿಡುತ್ತಾಳೆ, ಆವಗರಳನು ಕುಡಿಯಲಿ....., ಯಾರಿಗೆ ಏನನ್ಯಾಯವನೆಸೆಗಿದ್ದೆನೋ..., ಎಂದು ಮುಂತಾಗಿ ಹಲುಬುತ್ತಾಳೆ. ಮೂಲದಲ್ಲಿ ಚಂದನವನ್ನು ಅರೆದು ಅಂಗೈನಲ್ಲಾಗಿರುವ ಗಾಯವನ್ನು ತೋರಿಸುತ್ತಾ, ತನ್ನ ಪತಿಯರ ಪೌರುಷವನ್ನು ಹೊಗಳುತ್ತಾ ಆಡುವ ಮಾತು ಸುದೀರ್ಘವಾಗಿ ವರ್ಣಿತವಾಗಿದೆ.

೫) ಗೋಗ್ರಹಣ ಸಂದರ್ಭದಲ್ಲಿ ಗೋಪಾಲನೊಬ್ಬನ ಕೆಡಹಿ ಮೂಗಿನ ಮೇಲೆ ಸುಣ್ಣವ ಬರೆದು ಹಗೆಯ ಪಟ್ಟಣದೆ ಬಿಡುವ ಘಟನೆಯೂ ವ್ಯಾಸಭಾರತದಲ್ಲಿ ಕಂಡುಬರುವುದಿಲ್ಲ.

ಉತ್ತರಕುಮಾರನ ಪಾತ್ರವನ್ನೂ ಕುಮಾರವ್ಯಾಸ ಸಾಕಷ್ಟು ಬದಲಾಯಿಸಿ ಹಾಸ್ಯವನ್ನು ತಂದಿದ್ದಾನೆ. ಸಂಸ್ಕೃತಭಾರತದಲ್ಲಿ ಉತ್ತರನ ದೈನ್ಯ ದನೀಯವಾಗಿದೆಯೇ ಹೊರತು ಹಾಸ್ಯಾಸ್ಪದವಾಗಿಲ್ಲ. 'ಮಹಾಭಾರತದ ಪೂರ್ವೋತ್ತರ ಪರ್ವಗಳ ಮೌನ ಗಂಭೀರ ಹಾಸ್ಯದ ಸೇತುವಾಗಿದ್ದಾನೆ ಉತ್ತರಕುಮಾರ.'[೧೦] ಇಲ್ಲಿ ಉತ್ತರನ ಪ್ರಸಂಗದಲ್ಲಿಬರುವ ಹಾಸ್ಯಪ್ರಸಂಗಗಳನ್ನು ತಾನು ವೀರನಲ್ಲದಿದ್ದರೂ ವೀರನಂತೆಮಾತುಗಳನ್ನಾಡುತ್ತಾ ಜಂಭದಿಂದ ತರಿಸುವ ಹೆಣ್ಣುಮಕ್ಕಳನಗೆ, ಯುದ್ಧರಂಗದಲ್ಲಿ ಪಲಾಯನಮಾಡುತ್ತಾ ಸೈನಿಕರಿಗೆ ತರುವ ನಗೆ ಆನಂತರ ಅರ್ಜುನನಿಗೆ ತರಿಸುವ ದೈನ್ಯನಗೆ[೧೧] ಎಂದು ದ.ರಾ.ಬೇಂದ್ರೆಯವರು ಈ ಹಾಸ್ಯಪ್ರಕಾರಗಳನ್ನು ಮೂರು ರೀತಿಯಲ್ಲಿ ವಿಭಾಗಿಸಿದ್ದಾರೆ.

೬) ಉತ್ತರ ಗೋಗ್ರಹಣ ಸಂಗ್ರಾಮದಲ್ಲಿ ಕೌರವರ ಸೈನ್ಯವನ್ನು ಹಿಮ್ಮೆಟ್ಟಿಸಿ ಗೋವುಗಳನ್ನು ಬಿಡಿಸಿಕೊಂಡು ವಿಜಯಿಗಳಾಗಿ ತಮ್ಮ ಸೈನ್ಯ ಬರುತ್ತಿರುವ ಸುದ್ದಿ ತಿಳಿದ ವಿರಾಟ ತನ್ನ ಮಗ ಉತ್ತರಕುಮಾರನ್ನು ಹೊಗಳಲು, ಬಳಿಯಿದ್ದ ಕಂಕ ಈ ಗೆಲುವು ಸಾರಥಿಯಿಂದ ಲಭಿಸಿತೆಂದು ಹೇಳುತ್ತಾ ಮುಂದೆ

ಖತಿಯ ಹಿಡಿಯದಿರರಸ ದಿಟ ನೀ
ನತಿಶಯವ ರಚಿಸುವರೆ ಜನ ಸ
ಮ್ಮತವು ಸಾರಥಿ ಗೆಲಿದನೆಂದೇ ಹೊಯ್ಸು ಡಂಗುರವ
ಸುತನು ಸಾರಥಿಯೆಂದು ಸಾರಿಸು
ವಿತಥವಲ್ಲಿದು ಪಕ್ಷಪಾತ
ಸ್ಥಿತಿಯನಾಡೆನು ಕವಲುನಾಲಗೆಯಿಲ್ಲ ತನಗೆಂದ

(೧೦-೧೭)

ಸಾರಥಿಗೆದ್ದನೆಂದೇ ಡಂಗೂರವನು ಹೊಯ್ಸು ಎಂದು ಹೇಳುವ ಈ ಮಾತನ್ನೂ ವ್ಯಾಸರು ಹೇಳಿಲ್ಲ

೭) ಉತ್ತರೆ ಅಭಿಮನ್ಯುವಿನ ಮದುವೆಗೆ ಕುಮಾರವ್ಯಾಸನಲ್ಲಿ ಧರ್ಮರಾಯ ಕೃಷ್ಣನಿಗೆ ವಿಶೇಷ ಆಹ್ವಾನವನ್ನು ಕೋರಿ ಸುದೀರ್ಘ ಪತ್ರ ಬರೆಯುತ್ತಾನೆ. ಆದರೆ ಮೂಲದಲ್ಲಿ

ತತೋಮಿತ್ರೇಷು ಸರ್ವೇಷು ವಾಸುದೇವಂಚ ಭಾರತ
ಪ್ರೇಷಯಾಮಾಸ ಕೌಂತೇಯ ವಿರಾಟಶ್ಚ ಮಹೀಪತಿ

'ಕೃಷ್ಣನಿಗೂ ಅವನ ಸ್ನೇಹಿತರಿಗೂ ಧರ್ಮರಾಯ ಪತ್ರ ಕಳಿಸಿದ' ಎಂದಷ್ಟೇಯಿದೆ.

ಕುಮಾರವ್ಯಾಸ ಯುದ್ಧದ ನಿರೂಪಣೆಯಲ್ಲೂ ಮೂಲಕಥೆಯನ್ನು ಚಿತ್ರಿಸುತ್ತಾ ತನ್ನ ಕೈಚಳಕವನ್ನು ಸಾಕಷ್ಟು ತೋರಿಸಿ ಸಂಗ್ರಹಚಾತುರ್ಯದಿಂದ ಕಥಾಭಾಗಕ್ಕೆ ಒಂದು ವಿಧ ಸೌಂದರ್ಯವನ್ನು ಕೊಟ್ಟಿದ್ದಾನೆ. ಉದಾಹರಣೆಗೆ ಮೂಲಭಾರತದಲ್ಲಿ ಯುಧಿಷ್ಠಿರ ವಿರಾಟನೊಂದಿಗೆ ಯುದ್ಧರಂಗದಲ್ಲಿದ್ದರೂ ತನ್ನದೇ ವ್ಯೂಹವನ್ನು ರಚಿಸಿಕೊಂಡು ಯುದ್ಧಮಾಡುತ್ತಾನೆ ಕುಮಾರವ್ಯಾಸನಲ್ಲಿ ವಿರಾಟನೊಂದಿಗೇ ಇರುತ್ತಾನೆ.

'ಕನ್ನಡ ಭಾರತವು ವ್ಯಾಸ ಭಾರತದ ಸರಳಾನುವಾದವಲ್ಲ, ಸ್ವತಂತ್ರ ಕಳೆಯುಳ್ಳ ಪ್ರತಿನಿರ್ಮಾಣ[೧೨] ಎಂಬುದು ಅನೇಕ ಪದ್ಯಗಳಲ್ಲಿ ವೇದ್ಯವಾಗುತ್ತದೆ. ವ್ಯಾಸರಿಗೆ ಋಣಿಯಾಗಿ ಕುಮಾರವ್ಯಾಸ ಮಹಾಕವಿಯಾಗಿದ್ದಾನೆನ್ನುವುದು ಒಪ್ಪಬಹುದಾದರೂ ಅಲ್ಲಲ್ಲಿ ವ್ಯಾಸರನ್ನು ಹಿಂದಿಕ್ಕಿ 'ಶಿಷ್ಯಾದಿಚ್ಚೇತ್ ಪರಾಜಯಂ' ಎಂದು ಹೇಳುವಂತೆ ಪುತ್ರಾದಿಚ್ಛೇತ್ ಪರಾಜಯ' ಎನ್ನುವಷ್ಟರ ಮಟ್ಟಿಗೆ...'[೧೩] ಯಶಸ್ಸುಗಳಿಸಿದ್ದಾನೆ.

೧೨. ರಂ ಶ್ರೀ ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ಪುಟ.೨೪೦. ಉಷಾಸಾಹಿತ್ಯ ಮಾಲೆ, ಮೈಸೂರು. ೧೯೬೩.

೧೩. ಸಿ.ಪಿ.ಕೃಷ್ಣಕುಮಾರ್. ಮೂರುಭಾರತ ಎರಡು ಪರ್ವ, ಪುಟ.೨. ತಳಗವಾದಿ ಪ್ರಕಾಶನ, ಮೈಸೂರು. ೨೦೦೪.

ಕುಮಾರವ್ಯಾಸನು ಅನುಕರಣೆಮಾಡಿರುವ ವ್ಯಾಸಭಾರತದ ಪ್ರಸಂಗಗಳು

ಕುಮಾರವ್ಯಾಸ ಸಂಸ್ಕೃತದ ಮೂಲ ವ್ಯಾಸಭಾರತದ ಶ್ಲೋಕಗಳಲ್ಲಿ ಕೆಲವನ್ನು ನೇರವಾಗಿ ಭಾಷಾಂತರ ಮಾಡಿದ್ದರೆ ಕೆಲವನ್ನು ಭಾವಾನುವಾದಮಾಡಿದ್ದಾನೆ. ಹೀಗೆ ಭಾಷಾಂತರ, ಭಾವಾನುವಾದಮಾಡಿರುವ ವಿರಾಟಪರ್ವದ ಒಂದೆರಡು ಪ್ರಸಂಗಗಳು ಈ ರೀತಿಯಿದೆ.

೧) ಕುಮಾರವ್ಯಾಸ ಕೀಚಕವಧ ಪ್ರಸಂಗದಲ್ಲಿ ಕೀಚಕ ದ್ರೌಪದಿಯ ಬಳಿಗೆ ಬರುವುದನ್ನು ನರಿಯು ಸಿಂಹಿಣಿಯ ಬಳಿಗೆ ಮೋಹದಿಂದ ಬರುವಂತೆ, ಗರುಡ ಪತ್ನಿಯನ್ನು ಹಾವು ಸಂತೋಷದಿಂದ ಸಮೀಪಿಸುವಂತೆ ಎಂಬ ಹೋಲಿಕೆ ನೀಡಿದ್ದಾನೆ, ಇದೇ ಮಾತು ವ್ಯಾಸರಲ್ಲಿ "ಮೃಗೇಂದ್ರ ಕನ್ಯಾ ಇವ ಜಂಬುಕೋವನೇ" - ಸಿಂಹದ ಸತಿಗೆ ನರಿ ಮನವರಳುವಂತಿರೆ ಎಂದು ವಿವರಿಸಲಾಗಿದೆ.

೨)

ವಿತಳದಲಿ ಹೊಕ್ಕಿರಲಿಯಮರಾ
ವತಿಯೊಳಗೆ ಮೇಣರಲಿ ನಮ್ಮೀ
ಕ್ಷಿತಿಯೊಳಗೆ ಸುಳುಹಿಲ್ಲ ನೃಪ ಕುಂತೀಕುಮಾರಕರ
ಮತಿಯ ಹಬ್ಬುಗೆಯಿಂದ ನಾನಾ
ಗತಿಯೊಳಗೆ ಹೊಕ್ಕರಸಿದೆವು ಭೂ
ಪತಿಯ ಕೇಳ್ ನಿರ್ನಾಮರಾದನು ನಿನ್ನ ವೈರಿಗಳು. **(ವಿರಾಟಪರ್ವ ೪-೨)**

ಇದೇ ಅರ್ಥಬರುವ ಮಾತನ್ನು ಮೂಲದಲ್ಲಿ

ಸರ್ವಾಚ ಪೃಥಿವೀ ಕೃತ್ಸ್ನಾ ಸಶೈಲವನ ಕಾನನಾ
ಅನ್ವೇಷಿತಾ ಚ ಸರ್ವತ್ರ ನ ಚ ಪಶ್ಯಮುಪಾಂಡವಾನ್

ಎಲ್ಲ ಕಡೆ ತಿರುಗಿದೆವು ಎಲ್ಲೂ ಪಾಂಡವರು ಕಾಣಲಿಲ್ಲ ಎಂದು ಹೇಳಲಾಗಿದೆ.

೩) ಅರಿವಿರಾಟನ ಪುರಕೆ ಹಾಯಿದು
ತುರುಸೆರೆಯ ತೆಗೆಸಿದರೆ ಪಾಂಡವ
ರಿರರು ಧರ್ಮದಮೇರೆ ಮರ್ಯಾದೆಗಳ ಬಲ್ಲವರು
ಅರವರಿಸದಂಗೈಸುವರು ನಾ
ವರಿತುಕೊಂಬೆವು ಬಳಿಕ ವನದಲಿ
ವರುಷ ಹದಿಮೂರಕ್ಕೆ ಕೊಡುವೆವು ಮತೆ ವೀಳೆಯವ (ವಿ.ಪ.೪–೯)

ಮೂಲಭಾರತದಲ್ಲಿಯೂ ಈ ತೀರ್ಮಾನವಿದೆ.

ಮತ್ಸ್ಯರಾಜ್ಯಂ ಗಮಿಷ್ಯಾಮಿ ಗ್ರಹೀಷ್ಯಾಮಶ್ಚ ಗೋಧನಂ/ಗೃಹೀತೇ
ಗೋಧನಂ ನೂನಂ ತೋಪಿ ಯೋತ್ಸ್ಯಂತಿ ಪಾಂಡವಾ

ಮತ್ಸ್ಯರಾಜ್ಯಕ್ಕೆ ಹೋಗೋಣ ಅವರ ಗೋಸಂಪತ್ತನ್ನು ಹಿಡಿಯೋಣ, ಆಗ ಪಾಂಡವರು ಅಲ್ಲಿದ್ದರೆ ಮುಂದೆಬಂದು ಯುದ್ಧಕ್ಕೆ ನಿಲ್ಲುತ್ತಾರೆ. ಆಗ ಪತ್ತೆ ಹಚ್ಚೋಣ. ಎನ್ನುತ್ತಾರೆ ಇದಕ್ಕೆ ಸಮಯ ಭಂಗ ತಂತ್ರ ಎಂದು ಹೇಳುತ್ತಾರೆ.

೪) ಅರ್ಜುನ ಸಾರಥಿಯಾಗುವ ಸನ್ನಿವೇಶವನ್ನು ಕುಮಾರವ್ಯಾಸ ಹೀಗೆ ಹೇಳಿದ್ದಾನೆ.

ವೀರನಹೆ ಬಳಿಕೇನು ರಾಜಕು
ಮಾರ ನಿರೆವಡೆ ಹರೆಯವಲ್ಲಾ
ಸಾರಥಿತ್ವವ ಮಾಡಿ ನೋಡುವೆ ರಥವ ತರಿಸೆನಲು
ವಾರುವದ ಮಂದಿರದಲಾಯ್ದನು
ಚಾರು ತುರಗಾವಳಿಯ ಬಿಗಿದನು
ತೇರ ಸಂವರಿಸಿದನು ರಥವೇರಿದನು ಕಲಿಪಾರ್ಥ. (ವಿ.ಪ ೬–೪೩)

ಇದನ್ನು ಮೂಲಭಾರತದಲ್ಲಿಯೂ ಯುದ್ಧಭೂಮಿಯಲ್ಲಿ ನಿಂತು ಸಾರಥ್ಯವನ್ನು ನಿರ್ವಹಿಸುವ ಶಕ್ತಿ ನನಗೆಲ್ಲಿದೆ ? ಹಾಡು ಕುಣಿತಗಳನ್ನು ಮಾತ್ರ ನಾನು ಬಲ್ಲೆ ಎನ್ನುತ್ತಾ ಅರ್ಜುನ ಹೇಳುತ್ತಾನೆ.

ಕಾಶಕ್ತಿರ್ಮಮ ಸಾರಥ್ಯಂ ಕರ್ತುಂ ಸಂಗ್ರಾಮ ಮೂರ್ಧನಿ ಗೀತಂ ವಾ ಯದಿವಾ ನೃತ್ಯಂ
ವಾದಿತ್ವಂ ವಾ ಪೃಥಗ್ವಿಧಂ ತತ್ ಕರಿಷ್ಯಾಮಿ ಭದ್ರಂತೇ ಸಾರಥಿಂತು ಕುತೋಮಮ

ಕುಮಾರವ್ಯಾಸ ತನ್ನ ಕಾವ್ಯದಲ್ಲಿ ನೂತನತೆ ತಂದು ಭಿನ್ನನಾಗಿ ತೋರಿದರೂ 'ಕನ್ನಡ ಭಾರತ ನೂರಕ್ಕೆ ನೂರರಷ್ಟು ಸೋಪಜ್ಞವಾದ ಕಾವ್ಯವಾಗಿದೆ'[೧೩] ಎಂಬ ಮಾತು ಉತ್ಪ್ರೇಕ್ಷೆ ಎನಿಸುತ್ತದೆ. ಕನ್ನಡಭಾರತ ವ್ಯಾಸ ಭಾರತದ ಪಡಿನೆರಳಾಗಿಲ್ಲವೆಂಬುದು ನಿಜವಾದರೂ ಅನುವಾದಾಂಶಗಳೂ ಸಾಕಷ್ಟು ಸಿಗುತ್ತವೆ. ಕಲೆ, ದರ್ಶನಗಳು ಕುಮಾರವ್ಯಾಸನ ಸ್ವಂತದ್ದಾದರೂ ಕಥಾಪಥದಲ್ಲಿ ವ್ಯಾಸರನ್ನು ಅನುಸರಿಸಿದ್ದಾನೆ

<u>ಕುಮಾರವ್ಯಾಸಭಾರತದಲ್ಲಿ ಕಂಡುಬರುವ ಅನ್ಯಕವಿಗಳ ಪ್ರಭಾವ :</u>

ಕೀಚಕನು ದ್ರೌಪದಿಯ ಮೇಲೆ ಮೋಹಗೊಂಡ ಸಂಗತಿಯನ್ನು ವೈಶಂಪಾಯನರು ಸೀತೆಯನ್ನು ಮೋಹಿಸಿದ ರಾವಣನ ಕಥೆಗೆ ಸಮೀಕರಿಸಿದ್ದಾರೆ. ಇದೇ ಮಾತನ್ನೂ ಕುಮಾರವ್ಯಾಸನೂ 'ರಾವಣನು ಮುನ್ನಂದು ಸೀತಾದೇವಿಗಳುಪಿದ ಕಥೆವೋಲ್ ಸಂಭಾವಿಸಿದ ಕೀಚಕ... (ವಿರಾಟಪರ್ವ ೨-೨). ಎಂದು ಹೇಳಿದ್ದಾನೆ.

೨) ಕಾವ್ಯವನ್ನು ವಾಚಿಸುವಾಗ ಶಬ್ಧಗಳ ಉಚ್ಚರಣೆಯು ಮಹತ್ವ ಪಾತ್ರವಹಿಸುತ್ತದೆ. ಕಾವ್ಯದಲ್ಲಿ ಬಳಕೆಯಾಗುವ ಚಮತ್ಕಾರಿಪದಗಳು ಪುನರುಚ್ಚರಣಾಪದಗಳು ಓದುಗರನ್ನು ಕೇಳುಗರನ್ನು ಹಿಡಿದಿಡುವುದು ಸಹಜ, ಇಂಥ ಬಳಕೆಗಳು ರನ್ನನ ಕಾವ್ಯದಲ್ಲಿ ಹೆಚ್ಚಾಗಿ ಕಾಣಬಹುದು. ಕುಮಾರವ್ಯಾಸಕೂಡ ಇಂತಹ ಕೆಲವು ಪದಗಳನ್ನು ಬಳಸಿದ್ದಾನೆ.

ಕರುಳ ನೇವರಿಸಿದನು ಗಲ್ಲವ
ನೊರಸಿ ಮುಂಡಾಡಿದನು ಮಂಚದ
ಹೊರೆಯ ಗಿಂಡಿಯ ನೀರಿನಲಿ ತೊಳೆದನು ಮುಖಾಂಬುಜವ
ಅರಸಿ <u>ಬಿಡು ಬಿಡು</u> ಖಾತಿಯನು ಬಿ
ತ್ತರಿಸಲೇಕಿನ್ನಣ್ಣನಾಜ್ಞೆಯ
ಗೆರೆಯ <u>ದಾಂಟಿದೆ ದಾಂಟಿದೆನು</u> ಹೋಗೆಂದನಾ ಭೀಮ (ವಿರಾಟಪರ್ವ ೩-೬೬)

ಉದಾ : ರನ್ನನ ಗದಾಯುದ್ದದಲ್ಲಿ ಬರುವ ಸತ್ತಾನೆಗಳ ಹೆಣಗಳ ರಾಶಿಯನ್ನು ಏರಿ ಏರಿ, ರಕ್ತದ ಪ್ರವಾಹಗಳನ್ನು ದಾಟಿ ದಾಟಿ ಎಂಬಂತಹ ಯುಗಲೋಚ್ಚರಣಗಳಿಂದ ಕುಮಾರವ್ಯಾಸನು ಪ್ರಭಾವಿತನಾಗಿದ್ದಾನೆನ್ನಬಹುದು.

ಕುಮಾರವ್ಯಾಸ ಕೇವಲ ವ್ಯಾಸವಿರಚಿತ ಸಂಸ್ಕೃತಭಾರತವನ್ನಷ್ಟೇಅಲ್ಲದೆ ಭಾಸ ಮೊದಲಾದವರ ಸಂಸ್ಕೃತ ನಾಟಕಗಳನ್ನೂ ಪಂಪಾದಿಗಳು ರಚಿಸಿರುವ ಕನ್ನಡಕಾವ್ಯಗಳನ್ನೂ ಓದಿ ಪ್ರಭಾವಿತನಾಗಿದ್ದಾನೆ.

ಕುಮಾರವ್ಯಾಸನ ಭಾಷಾಪ್ರಯೋಗ

'ಕನ್ನಡನುಡಿಗೆ ಕಳಶವಿಟ್ಟ ಕವಿಗಳಲ್ಲಿ ನಾರಣಪ್ಪನೂ ಒಬ್ಬ'[೧೪] ಎಂದು ಹೇಳಿರುವ ಎಸ್.ವಿ.ರಂಗಣ್ಣನವರ ಮಾತು ಅಕ್ಷರಸಹ ಸತ್ಯ ಎನ್ನುವುದು ಅವನ ಕಾವ್ಯ ಓದಿದವರಿಗೆ ವೇದ್ಯವಾಗುವುದು. ಕುಮಾರವ್ಯಾಸ ತನ್ನದೇಆದ ಶೈಲಿಯಲ್ಲಿ ಬಳಸಿರುವ ಭಾಷೆಯು ಆಡುಭಾಷೆಯಷ್ಟೇ ಸಹಜವಾಗಿ ಕಾವ್ಯದಲ್ಲಿ ಮೂಡಿಬಂದಿದೆ.

೧) ಕೀಚಕನನ್ನು ದ್ರೌಪದಿ ಬೈಯುತ್ತಾ 'ಬಾಯಿ**ಹುಳುವುದು** ಬಯಲನುಡಿದರೆ' (೩-೧೩) ಎನ್ನುತ್ತಾಳೆ. ಇಲ್ಲಿ ಹುಳು ನಾಮಪದ ಆದರೆ ಕುಮಾರವ್ಯಾಸ ಹುಳುವುದು ಎಂದು ಕ್ರಿಯಾ ಪದವನ್ನಾಗಿಸಿದ್ದಾನೆ. ಬಾಯಲ್ಲಿ ಹುಳಬೀಳುವುದು ಎನ್ನುವುದು ಇದರ ಅರ್ಥ.

೨) ಭೀಮ ದ್ರೌಪದಿಯನ್ನು ಸಮಾಧಾನ ಪಡಿಸುವ ಸಂದರ್ಭದಲ್ಲಿ ಎಮ್ಮಣ್ಣನಾಜ್ಞೆಯ ಗೆರೆಯ ದಾಂಟಿದೆ ದಾಂಟಿದೆನು ಹೋಗೆಂದನಾ ಭೀಮ (ವಿರಾಟಪರ್ವ ೩-೬೬), ಹೇಳುಹೇಳಿನ್ನೊಮ್ಮೆ ! ಮತ್ಸ್ಯನ ತೋಳು ಮುರಿದುದೇ ? (೪-೪) ಎಂದು ದುರ್ಯೋಧನನು ಆಶ್ಚರ್ಯ ಪಡುತ್ತಾ ಬೇಹುಗಾರರಲ್ಲಿ ಕೇಳುವುದು, ಇಲ್ಲಿ ಪ್ರಯೋಗವಾಗಿರುವ ದಾಂಟಿದೆ ದಾಂಟಿದೆನು, ಹೇಳುಹೇಳು ದ್ವಿರುಕ್ತಿಯು ಭಾಷಾ ಪ್ರಯೋಗದ ಮಟ್ಟದಲ್ಲಿ ಕವಿಯ ಸಿದ್ಧಿಯನ್ನು ತೋರುತ್ತದೆ.

ಕೇಶಿರಾಜನು ಇಂಥ ಪ್ರಯೋಗಗಳನ್ನು ಯಗಲೋಚ್ಚರಣ ಎಂದು ಕರೆದಿದ್ದಾನೆ (ಸೂತ್ರ ೨೦೬) ಕಾವ್ಯದಲ್ಲಿ ಕ್ವಚಿತ್ತಾಗೆ ಬರುವ ಈ ಪ್ರಯೋಗಗಳು ತುಂಬಾ ಪ್ರಭಾವಪೂರ್ಣವಾಗಿರುತ್ತವೆ.

<u>ಕುಮಾರವ್ಯಾಸಭಾರತದ ಕಥೆಗೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳು</u>

ಕುಮಾರವ್ಯಾಸಭಾರತದ ವಿರಾಟಪರ್ವದಲ್ಲಿನ ಒಂದೆರಡು ಸಂದರ್ಭಗಳಲ್ಲಿ ಕಥೆಗೆ ಇನ್ನೂ ಕೆಲವು ವಿವರಣೆಗಳು ಅಗತ್ಯ ಎನಿಸುವಂತೆ ಭಾಸವಾಗುತ್ತದೆ ಅಂತಹ ಕೆಲ ಸಂದರ್ಭಗಳನ್ನು ಈ ಕೆಳಗೆ ಚರ್ಚಿಸಲಾಗಿದೆ.

೧) ಪಾಂಡವರು ವಿರಾಟನಗರಕ್ಕೆ ಪ್ರವೇಶಿಸಿ ೧೦ ತಿಂಗಳು ಕಳೆದ ನಂತರ ಕೀಚಕನ ಪ್ರವೇಶವಾಗುತ್ತದೆ. ಅಕ್ಕನೊಂದಿಗೇ ವಾಸಮಾಡುತ್ತಿದ್ದ ಕೀಚಕ ಅಲ್ಲಿಯವರೆಗೆ ಎಲ್ಲಿದ್ದ ಎನ್ನುವಬಗ್ಗೆ ಕುಮಾರವ್ಯಾಸ ಯಾವುದೇ ಕಾರಣ ನೀಡಿಲ್ಲ, ಮೂಲಭಾರತದಲ್ಲೂ ಈ ಬಗ್ಗೆ ಪ್ರಸ್ತಾಪವಿಲ್ಲ.

೨) ವಿರಾಟಪರ್ವದ ಆರಂಭದಲ್ಲಿ ಧರ್ಮರಾಯನು ತಮ್ಮಂದಿರೊಂದಿಗೆ ಅಜ್ಞಾತವಾಸಕ್ಕೆ ತಕ್ಕ ಸ್ಥಳವಾವುದೆಂದು ಪರ್ಯಾಲೋಚಿಸುತ್ತಾ **ಪಡುವಣವರತಿ ಕೃಶರು** (೧–೨) ಎಂದು ಹೇಳುತ್ತಾನೆ ಮುಂದೆ

ವಳಿತವನು ಹೊಕ್ಕಿರಿದು ಕೌರವ
ರೊಳಗೆ ಹಗೆಯಾಗಿಹನು ಕೀಚಕ
ಬಲ ವಿರಾಟಂಗವನ ಬಲುಹಿಂ ಭಯವಿಹೀನವದು
ಮುಳಿದು ಹೇಳಿಕೆಯಾದ ರವಿಸುತ
ಕಲಿತ್ರಿಗರ್ತಾದಿಗಳೆನಿಪ ಮಂ
ಡಳಿಕರನು ಕೈಕೊಳ್ಳದಾಳುವರವರು <u>ಪಶ್ಚಿಮವ</u> (೧–೩)

ಎಂದು ಹೇಳುತ್ತಾ ಕೀಚಕನ ಬಲದಿಂದ ವಿರಾಟ ಪಶ್ಚಿಮದಲ್ಲಿ ಸಮರ್ಥವಾಗಿ ರಾಜ್ಯಭಾರ ಮಾಡುತ್ತಿದ್ದಾನೆ ಎಂದು ಹೇಳುತ್ತಾನೆ ಒಂದು ಪದ್ಯದಲ್ಲಿ ಕೃಶರು ಎಂದು ಹೇಳಿ ಮುಂದಿನ ಪದ್ಯದಲ್ಲಿ ವಿರುದ್ಧವಾಗಿ ಹೇಳಿದೆ.

ಹೀಗೆ ಮೇಲಿನ ಪದ್ಯದ ಪ್ರಕಾರ ವಿರಾಟ ಪಶ್ಚಿಮ ದಿಕ್ಕಿನಲ್ಲಿ ಆಳುತ್ತಿದ್ದಾನೆ ಎಂದು ಹೇಳಿ, ಇದೇ ಸಂಧಿಯ ೧೧ನೇ ಪದ್ಯದಲ್ಲಿ '**ತೆಂಕದೆಸೆಗೆ ಸಹೋದರರು ಸಹಿತ**'

ಎಂದು ಹೇಳಿದೆ. ಪಶ್ಚಿಮಲ್ಲಿ ವಿರಾಟನಗರವಿದ್ದಾಗ ಧರ್ಮರಾಯ ತಮ್ಮಂದಿರೊಂದಿಗೆ ದಕ್ಷಿಣದಿಕ್ಕಿಗೇಕೆ ಹೊರಡುತ್ತಾನೆ.

೩) ಕೀಚಕ ದ್ರೌಪದಿಯನ್ನು ಬೆನ್ನಟ್ಟಿ ಬಂದು ವಿರಾಟನ ಸಭೆಯಲ್ಲಿ ಒದ್ದು ಬೀಳಿಸಿದಾಗ, ಭೀಮ ಅಲ್ಲಿಯೇ ಇದ್ದ ಮರವೊಂದನ್ನು ಕಿತ್ತು ಕೀಚಕನ್ನು ಮುಗಿಸಲು ಯೋಚಿಸುತ್ತಾನೆ. ಇವನ ಮನಃಸ್ಥಿತಿಯನ್ನು ಅರಿತ ಧರ್ಮರಾಯ

ಆತನಿಂಗಿತ ದನುವನರಿದು ಮ
ಹೀತಳಾಧಿಪ ಧರ್ಮಸುತನೆಲೆ
ಕಾತರಿಸದಿರು ವಲಲ ಸೈರಿಸು ಸೈರಿಸಕಟಕಟ
ಈ ತರುವ ಮುರಿಯದಿರು ಸುಜನ
ವ್ರಾತಕಾಶ್ರಯವೂರ ಹುರಗೆ ಮ
ಹಾತಿಶಯ ತರುವುಂಟು ನಿನ್ನಯ ಬಾಣಸಿನ ಮನೆಗೆ (೩-೨೩)

ಆಶ್ರಯನೀಡುವ ಮರವನ್ನು ಕಡಿಯಬೇಡ ನಿನ್ನ ಅಡುಗೆಮನೆಗೆ ಬೇಕಾದರೆ ಊರಾಚೆನ ಮರವನ್ನು ಕಡಿದುಕೋ ಎಂದು ಸಂಕೇತ ಭಾಷೆಯಲ್ಲಿ ವಿರಾಟ ನಮಗೆ ಆಶ್ರಯ ನೀಡುತ್ತಿರುವನು, ಅವನಿಗೆ ಬೇಕಾದ ಈ ಕೀಚಕನನ್ನು ಬೇಕಾದರೆ ಯಾರಿಗೂ ತಿಳಿಯದಂತೆ ಊರಾಚೆ ಸಂಹರಿಸು ಎಂದು ಹೇಳುತ್ತಾನೆಂದು ಅ.ರಾ.ಮಿತ್ರ ಹೇಳುತ್ತಾರೆ. ಆದರೆ ಮುಂದೆ ದ್ರೌಪದಿ ಕೀಚಕನ ಬಾಧೆಯಿಂದ ಬಿಡಿಸೆಂದು ಕೇಳಿಕೊಂಡ ಸಂದರ್ಭದಲ್ಲಿ ಭೀಮ "ಬಸುರಬಗಿವೆನು ಕೀಚಕನನದು..." ನೆಂದು ಹೇಳುತ್ತಾ "ಮುನಿದನಾದಡೆಯಣ್ಣತನವಿಂದಿನಲಿ ಹರಿದುದು ..." (ವಿ.ಪ ೩-೬೭,೬೮) ಅಣ್ಣನ ಮಾತನ್ನು ಮೀರಿ ಕೀಚಕನನ್ನು ಸಂಹರಿಸುವೆನೆಂದು ಹೇಳುವ ಈ ಮಾತಿನಲ್ಲಿ ಸಭೆಯಲ್ಲಾಡಿದ ಧರ್ಮರಾಯನ ಸಂಕೇತಭಾಷೆ ಭಿಮನಿಗೆ ಅರ್ಥವಾಗಿಲ್ಲವೇ ಅಥವಾ ಧರ್ಮರಾಯನ ಆ ಮಾತಿಗೆ ವಿಶೇಷ ಅರ್ಥವಿಲ್ಲವೆ ಎಂಬುದು ಸ್ಪಷ್ಟವಾಗಿಲ್ಲ.

ಕುಮಾರವ್ಯಾಸನ ಪ್ರತಿಭೆ

ಸಾಂಪ್ರದಾಯಿಕವಾದ ಕವಿಸಮಯದ ಅರ್ಥವತ್ತಾದ ಬಳಕೆ

ಸರಸಿಜದ ಪರಿಮಳಕೆ ತುಂಬಿಯ
ದರವ ಬಿಟ್ಟನು ಚಂದ್ರಕಾಂತೆಗೆ
ಬೆರಗನಿತ್ತನು ಜಕ್ಕವಕ್ಕಿಯ ನೆರೆಯ ಬಿಡಿಸಿದನು
ಕೆರಳಿ ನೈದಿಲ ಸಿರಿಯ ಸೂರೆಯ
ಬರಿಸಿದನು ರಿಪುರಾಯ ರಾಜ್ಯವ
ನೊರಸಿದನು ರವಿ ಮೂಡಣಾದ್ರಿಯೊಳಿತ್ತನೋಲಗವ (೧೧-೩)

ಮೂಲದಲಿಲ್ಲದ ಸಾಂಪ್ರದಾಯಿಕವಾದ ಕವಿಸಮಯದ ಅರ್ಥವತ್ತಾದ ಬಳಕೆಯನ್ನು ಕುಮಾರವ್ಯಾಸನ ಇಂತಹ ಕೆಲವು ಪದ್ಯಗಳಲ್ಲಿ ಕಾಣಬಹುದು.

<u>ಸಾಂಪ್ರದಾಯಿಕ ವರ್ಣನೆಗಳು.</u>

ಕೆಲವೆಡೆಗಳಲ್ಲಿ ಕುಮಾರವ್ಯಾಸನೂ ಸಾಂಪ್ರದಾಯಿಕ ವರ್ಣನೆಗಳಿಗೆ ಜೋತುಬಿದ್ದಿರುವುದು ಕಂಡುಬರುತ್ತದೆ.

೧) ಹಾಸಿದೆಳದಳಿರೊಣಗಿದವು ಹೊಗೆ
ಸೂಸಿದವು ಸುಯ್ಲಿನಲಿ ಮೆಲ್ಲನೆ
ಬೀಸುತಿರೆ ಸುಳಿಗಾಳಿಯೆಲೆ ಬಾಡಿದವು ನಿಮಿಷದಲಿ
ಆ ಸಸಿಯ ಕೋಗಿಲೆಯ ತುಂಬಿಯ
ನಾ ಸರೋಜವ ಮಲ್ಲಿಗೆಯ ಕೈ
ವೀಸಿದನು ಕುಸುಮಾಸ್ತ್ರನೀ ಕೀಚಕನ ಕಗ್ಗೊಲೆಗೆ (೨-೪೨)

ಉರಿದುದೊಡಲೊಳು ವೀಳೆಯದ ಕ
ಪ್ಪುರದ ಹಳುಕುಗಳಮಳಗಂಧದ
ಸರಸಕರ್ದಮ ಕರಿಕುವರಿದುದು ಪೂಸಿದಂದದಲಿ
ಹೊರದನೀರಿನ ಪೊಟ್ಟಣವು ದ
ಳ್ಳುರಿಯನೀದುದು ಲಲಿತ ಚಂದ್ರಿಕೆ
ವೆರಸಿ ಕರಗಿದ ತವರವಾದುದು ಕೀಚಕನ ದೆಸೆಗೆ (೨-೪೧)

ಈ ಪದ್ಯಗಳೆಲ್ಲ ಸಾಂಪ್ರದಾಯಿಕ ವರ್ಣನೆಗಳು, ವಿರಹಿಗಳ ಸ್ಥಿತಿಯನ್ನು ವರ್ಣಿಸಲು ಕವಿಗಳು ಬಳಸುವ ಪರಂಪರೆಯ ಕವಿಸಮಯಗಳು ಎನಿಸಿದರೂ ಶ್ರೀನಿವಾಸ ಎಲ್.ಕುಲಕರ್ಣಿಯವರು ಹೇಳಿರುವಂತೆ 'ಯಾವ ಮಹಾಕವಿಯೂ ಇಡಿಯಾಗಿ ಭಾಷಾಪರಂಪರೆಯನ್ನು ಧಿಕ್ಕರಿಸಿ ನೂತನ ಬ್ರಹ್ಮನೆಂಬಂತೆ ಹೊಸ ಸೃಷ್ಟಿಮಾಡಲು ಸಾಧ್ಯವಿಲ್ಲ, ಸಾಧುವೂಅಲ್ಲ ವಿಶಿಷ್ಟ ಭಾಷಾ ಪರಂಪರೆಯ ಜೊತೆಜೊತೆಗೇ ಸಾಗಬೇಕಾದ ಮಹಾಕವಿ ಆ ಕಾವ್ಯ ಪರಂಪರೆಯ ರೂಢಿಗಳನ್ನು, ಸಂಪ್ರದಾಯಗಳನ್ನು ಅನುಸರಿಸಲೇಬೇಕಾಗುತ್ತದೆ'[೧೫]. ಹೀಗಾಗಿ ಕುಮಾರವ್ಯಾಸನೂ ತನ್ನ ಮೊದಲಿನ ಕಾವ್ಯಪರಂಪರೆಯ ಅನೇಕ ಪಾರಂಪರಿಕ, ರೂಢಿಯ ರೂಪಕಗಳನ್ನು ತನ್ನ ಕಾವ್ಯದಲ್ಲಿ ಬಳಸಿರುವನು.

೨) ಕೀಚಕನ ಪ್ರಣಯ ವಿಕಾರವನ್ನು ಹತ್ತು ಪದ್ಯಗಳಲ್ಲಿ ವಿವರಿಸಲುಹೋಗಿರುವ ಕುಮಾರವ್ಯಾಸನು ಕ್ಲಿಷೆ, ಪುನರುಕ್ತಿ, ಸಾಮಾನ್ಯೋಕ್ತಿಗಳ ಮೊರೆಹೋಗಿದ್ದಾನೆ. ಕೀಚಕನ ಅತಿಯಾದ ಶೃಂಗಾರ ಕೆಲವೊಮ್ಮೆ ಬೇಸರಮೂಡಿಸುತ್ತದೆ. ಕೀಚಕನ ವಯಸ್ಸು ಹಾಗು ಸಲ್ಲದವಳಲ್ಲಿಯ ಅನುರಾಗ ಈ ರೀತಿಯ ವರ್ಣನೆಗಳನ್ನು ಮೆಚ್ಚಲು ಅಡ್ಡಿಪಡಿಸುತ್ತದೆ

ಆದರೂ 'ನಟ್ಟ ದೃಷ್ಟಿಯ ತೆಗೆಯಲಾರದೆ ಸೋತು ಕೀಚಕ ಪಾತಕವ ನೆನೆದ', ಮುಂಗಾಣಿಕೆಯಲೇ ಸೋರೆವೋದುದು ಮನದಸರ್ವಸ್ವ, ತ್ರಾಣಸಡಿಲಿತು ಬುದ್ಧಿಕದಡಿತು' ಎಂದೆಲ್ಲಾ ಕೀಚಕನನ್ನು ವರ್ಣಿಸಿ ಅವನಿಗೆ ದ್ರೌಪದಿಯ ಹುಚ್ಚಿನಲ್ಲಿ ಮನೋನಿಗ್ರಹವು ಹೇಗೆ ಅಸಾಧ್ಯವಾಯಿತೆಂಬುದನ್ನು ಸ್ಫುಟಪಡಿಸಿದ್ದಾನೆ. ಈ ಕುರಿತು ತೀ.ನಂ.ಶ್ರೀ ಅವರು 'ಕವಿಯ ವಿಶಾಲ ಹೃದಯದಲ್ಲಿ ಪಾಪಿಯ ಮನೋವೃತ್ತಿಯನ್ನು ಕುರಿತೂ ಅನುಕಂಪವುಂಟೆಂದು ತೋರ್ಪಡಿಸಿದ್ದಾನೆ[೧೬]' ಎಂದಿದ್ದಾರೆ. ಕೀಚಕನ ಹೃದಯವನ್ನು ಓದುಗರಿಗೆ ತೆರೆದು ತೋರಿಸಿ, ಕ್ಷಣಕಾಲ ಮರುಗಿಸುವಂತೆ ಮಾಡುವ ಕವಿಯಪ್ರತಿಭೆ ಮೆಚ್ಚುವಂಥದ್ದು.

೩) ಉತ್ತರೆಯ ಸೌಂದರ್ಯವನ್ನು ವರ್ಣಿಸುವ ೫ನೇ ಸಂಧಿಯ ೩೩-೩೬ ೪ ಪದ್ಯಗಳು ಕಥಾಸಂದರ್ಭಕ್ಕೆ ಸೂಕ್ತವಾಗಿ ಹೊಂದುವುದಿಲ್ಲ. ಬಹುಶಃ ಇದು ಹಾಸ್ಯ ಪ್ರಸಂಗವಾಗಿರುವುದರಿಂದ ಇದರೊಳಗೆ ಇನ್ನೊಂದು ಬಗೆಯ ಶೃಂಗಾರ ಹಾಸ್ಯ ತರಲು ಕವಿ ಪ್ರಯತ್ನಿಸಿರಬಹುದು.

ಕುಮಾರವ್ಯಾಸನ ರಚನಾ ಕೌಶಲ

ಕುಮಾರವ್ಯಾಸ ತನ್ನಕಾವ್ಯಕ್ಕೆ ಆರಿಸಿಕೊಂಡಿರುವ ಛಂದಸ್ಸು ಭಾಮಿನೀ ಷಟ್ಪದಿ. ಅನೇಕ ಕವಿಗಳು ಈ ಪ್ರಕಾರದಲ್ಲಿ ಕಾವ್ಯ ರಚಿಸಿದ್ದರೂ ಕುಮಾರವ್ಯಾಸನಷ್ಟು ಸಮರ್ಥವಾಗಿ ಇದರ ಲಯಗಳನ್ನು ಯಾರೂ ಬಳಸಿಕೊಂಡಿಲ್ಲ. ಕುಮಾರವ್ಯಾಸ ತನ್ನ ಕೌಶಲದಿಂದ ಕಾವ್ಯಕ್ಕೆ ಪಾದರಸಸದೃಶ ಶಕ್ತಿ, ಜೀವಂತಿಕೆ, ಲವಲವಿಕೆ ನೀಡಿದ್ದಾನೆ

ಅಷ್ಟೇಅಲ್ಲ 'ನಾರಣಪ್ಪನು ಮಾತುಗಳ ಗಾರುಡಿ'[೧೮] ಪಾತ್ರಗಳಿಂದ ಬರುವ ಸಂಭಾಷಣೆಯಲ್ಲೇ ಸನ್ನಿವೇಶಗಳನ್ನು ವಿವರಿಸುತ್ತಾ, ಇತರಪಾತ್ರಗಳನ್ನು ವಿಮರ್ಶೆಮಾಡುತ್ತಾನೆ.

ದ್ರೌಪದಿಯ ಪಾತ್ರದ ಮೂಲಕ ಕವಿ ಯುಧಿಷ್ಠಿರಾದಿ ಅಣ್ಣ ತಮ್ಮಂದಿರ ಸ್ವಭಾವವನ್ನು ಅಳೆಯುತ್ತಾನೆ ಕೀಚಕನನ್ನು ವಧಿಸಲು ತನಗೆ ನ್ಯಾಯದೊರಕಿಸಿಕೊಡಲು ಯಾರಬಳಿ ಅರುಹಲೆಂದು ದ್ರೌಪದಿ ಈ ರೀತಿ ಯೋಚಿಸುತ್ತಾಳೆ

ಯಮಸುತಂಗರುಹುವೆನೆ ಧರ್ಮ

ಕ್ಷಮೆಯ ಗರ ಹೊಡೆದಿಹುದು ಪಾರ್ಥನು
ಮಮತೆಯುಳ್ಳವನೆಂಬೆನೇ ತಮ್ಮಣ್ಣನಾಜ್ಞೆಯಲಿ
ಭ್ರಮಿತನಾಗಿಹನುಳಿದರಿಬ್ಬರು
ರಮಣರುಗಳೀ ನಾಯ ಕೊಲಲ
ಕ್ಷಮರು ನಿಸ್ಸಂದೇಹವೆಂದಳು ತನ್ನ ಮನದೊಳಗೆ (೩-೩೩)

ಮುಂದಿನ ಪದ್ಯದಲ್ಲಿ 'ಎಲ್ಲರೊಳು ಕಲಿಭೀಮನೇ ಮಿಡುಕುಳ್ಳ ಗಂಡ .... ' ಎಂದು ಭೀಮನನ್ನು ಸಮರ್ಥಿಸಿಕೊಳ್ಳುತ್ತಾಳೆ.

ಇದೇಪ್ರಕಾರವಾಗಿ ಉತ್ತರನ ಮಾತಿನಿಂದ ಹಾಸ್ಯದ ಧಾಟಿಯಲ್ಲಿ ಕೌರವರ ವೀರರ ವಿವರ ನೀಡುತ್ತಾನೆ.

ಆರೊಡನೆ ಕಾದುವೆನು ಕೆಲಬರು
ಹಾರುವರು ಕೆಲರಂತಕನ ನೆರೆ
ಯೂರವರು ಕೆಲರಧಮಕುಲದಲಿ ಸಂದು ಬಂದವರು
ವೀರರೆಂಬವರಿವರು ಮೇಣಿ
ನ್ನಾರ ಹೆಸರುಂಟವರೊಳೆಂದು ಕು
ಮಾರ ನೆಣಗೊಬ್ಬಿನಲಿ ನುಡಿದನು ಹೆಂಗಳಿದಿರಿನಲಿ (೬-೨೦)

ಇಲ್ಲಿ ಉತ್ತರಕುಮಾರನಿಗೆ ಕೌರವರ ಸೇನಾಬಲವ ವಿಷಯ ತಿಳಿದಿತ್ತು ಎನ್ನುವ ಸೂಚನೆಯೂಯಿದೆ. ಉತ್ತರ ಯುದ್ಧಮಾಡಲು ಅರಿಯನೆಂದೇನು ಅಲ್ಲ ಏಕೆಂದರೆ ಸಾರಥಿಯನ್ನು ಯುದ್ಧದಲ್ಲಿ ಕಳೆದುಕೊಂಡೆನೆಂದು ನುಡಿಯಬೇಕಾದರೆ ಯುದ್ಧ ಮಾಡಿರಲೇಬೇಕು, ಕವಿ ಹಾಸ್ಯವನ್ನು ತರಲೆಂದೇ ಉತ್ತರಕುಮಾರನನ್ನು ಪುಕ್ಕಲನಂತೆ ಚಿತ್ರಿಸಿದ್ದಾನೆ. ಮೂಲದಲ್ಲೂ ಉತ್ತರನ ಪೌರುಷ ಇದೆಯಾದರೂ ಅದು ಕೇವಲ ಮೂರೇ ಶ್ಲೋಕಗಳಲ್ಲಿದೆ, ಇಲ್ಲಿ ಅದು ಏಳು ಪದ್ಯದವರೆಗೂ ವಿಸ್ತರಿಸಿದೆ.

ಕವಿ ರಾಘವಾಂಕ ಕಾವ್ಯದಲ್ಲಿ ಸಂಭಾಷಣೆಯನ್ನು ತರುವ ಚಮತ್ಕಾರೀ ಕವಿ ಎಂಬ ಹೊಗಳಿಕೆಗೆ ಪಾತ್ರನಾದವನು, ಇಲ್ಲಿ ಕುಮಾರವ್ಯಾಸ ಕೂಡ ಅಂತಹ ಸಂಭಾಷಣಾಯುಕ್ತ ಪದ್ಯಗಳನ್ನು ಅತ್ಯುತ್ತಮವಾಗಿ ರಚಿಸಿರುವುದನ್ನು ಕಾಣಬಹುದು.

ಕೀಚಕನ ಹಾಗೂ ಉತ್ತರಕುಮಾರನ ಪ್ರಸಂಗಗಳಲ್ಲಿ ಸಂಭಾಷಣಾರೂಪವಾದ ಘಟ್ಟಗಳನ್ನು ನಾಟಕೀಯವಾಗಿ ಚಿತ್ರಿಸಿದ್ದಾನೆ.

ಸತ್ಯತೆಯನ್ನು ಸ್ಥಿರೀಕರಿಸಲು ಮಾತನಾಡುವಾಗ 'ಆಣೆ' ಎಂದು ಹೇಳುವುದು ದುಷ್ಟರನ್ನು 'ನಾಯಿ ಕುನ್ನಿ' ಎಂದು ರೂಪಿಸುವುದು, ಪೌರುಷ ಪ್ರದರ್ಶನದ ವೇಳೆಯಲ್ಲಿ ಮೀಸೆಯಮೇಲೆ ಕೈಯಿಡುವುದು ಮೊದಲಾದ ನಾಟಕೀಯಗಳನ್ನು ಸಂದರ್ಭಕ್ಕೆ ತಕ್ಕಂತೆ ಅಳವಡಿಸಿ ಕಾವ್ಯಕ್ಕೆ ಒಂದು ಆಕರ್ಷಕ ಶಕ್ತಿಯನ್ನು ಕೊಟ್ಟಿದ್ದಾನೆ.

<u>ಕುಮಾರವ್ಯಾಸಭಾರತದಲ್ಲಿನ ಉಪಾಖ್ಯಾನ, ದೃಷ್ಟಾಂತಗಳು</u> ಕಥಾನಿರೂಪಣೆಯ ಮಧ್ಯದಲ್ಲಿ ಉಪಾಖ್ಯಾನ ತರುವುದು ಕುಮಾರವ್ಯಾಸನ ಶೈಲಿಗಳಲ್ಲೊಂದು. ಕುಮಾರವ್ಯಾಸನ ಇತರ ಪರ್ವಗಳಲ್ಲಿರುವಂತೆ ವಿರಾಟಪರ್ವದಲ್ಲಿ ಇಂಥ ಉಪಾಖ್ಯಾನ ಹೇರಳವಾಗಿ ದೊರೆಯದಿದ್ದರೂ ಕೆಲವೊಂದು ಉದಾಹರಣೆ ಸಿಗುತ್ತದೆ. ರಾವಣನು ಸೀತಾದೇವಿಗಳುಪಿ ಕೆಟ್ಟ ಪ್ರಸಂಗವನ್ನು ಕೀಚಕ ಹಗರಣದಲ್ಲಿ ವಿವರಿಸಿರುವುದು ಅವುಗಳಲ್ಲೊಂದು. ಅಂತೆಯೇ ಪರಿಮಳವ ಕದ್ದೋಡುವನಿಲ ಭರದ ಬಟ್ಟೆಯ ಹತ್ತುವರೆ ಮಧುಕರನೆ ಬಲ್ಲದು(೪–೭), ಎನಿತುಬಲ ಘನವಾದೊಡೇನದು ನಿನಗೆ ಗಹನವೆ ಜೀಯ ಜಗದಲಿ ದಿನಪನಿದಿರಲಿ ದಿಟ್ಟತನವೇ ತಮದ ಗಾವಳಿಗೆ (೬–೧೫) ಮೊದಲಾದ ದೃಷ್ಟಾಂತಗಳನ್ನೂ ಹೇರಳವಾಗಿ ನೀಡಿದ್ದಾನೆ.

<u>ಕುಮಾರವ್ಯಾಸನ ದೇಸಿ ಬಳಕೆ :</u> ಪಂಪನಿಗೆ ಸರಿಗಟ್ಟುವಂತೆ ದೇಶಿಭಾಷೆಯನ್ನು ವಿಶೇಷರೀತಿಯಲ್ಲಿ ಬಳಸುವ ಕವಿ ಕುಮಾರವ್ಯಾಸ ಎಂದರೆ ತಪ್ಪಾಗಲಾರದು. ಅಳುಕಿತಗ್ಗದಮಹಿಮೆ <u>ಮುಸುಡಿನ</u> ಬೆಳಕು ಕುಂದಿತು (೨–೩೧) ಎಂಬಸಾಲಿನಲ್ಲಿ ಮುಖ ಎನ್ನುವ ಬದಲು 'ಮುಸುಡಿ' ಎಂದು ಬಳಕೆಯಾಗಿದೆ. 'ಈ ದೇಸಿ ಬಳಕೆಯಿಂದ ಮುಖದ ನ್ಯೂನತೆ ಧ್ವನಿಸಿದೆ ಇದು ಅರ್ಥಪೂರ್ಣ ಬಳಕೆ[೧೯] ಇಂಥ ಪ್ರಯೋಗಗಳಿಂದ ಕಾವ್ಯದ ಚಲುವು ಇಮ್ಮಡಿಸಿದೆ.

ಗಾದೆಗಳು ಭಾಷಾಶಕ್ತಿಯನ್ನು ಹೆಚ್ಚಿಸುವ ಸಾಧನೆಗಳು ಅವು ಆಯಾ ಮಣ್ಣಿನ ವಿಶೇಷ ಸೊಗಡಿನಿಂದ ಜನಪದ ಭಾಷೆಯಲ್ಲಿ ರೂಪುಗೊಂಡಿರುತ್ತವೆ. ಹೀಗೆ ನಾಡಿನ ಜನತೆಯಲ್ಲಿ ರೂಢವಾಗಿರುವ ಗಾದೆಗಳು ಆಯಾ ಭಾಷೆಗಳ ವಿಶಿಷ್ಟ ಸೊತ್ತೆಂದು ಹೇಳಬಹುದು. ಅಂತಹ ಸೊತ್ತನ್ನು ಕುಮಾರವ್ಯಾಸ ವಿಪುಲವಾಗಿ ಬಳಸಿಕೊಂಡಿದ್ದಾನೆ. 'ಬಡವರ ಕೋಪವೌಡಿಗೆ ಮೃತ್ಯು' (೨-೩೩), 'ಹರಣದಮೇಲೆ ಸರಸವೆ' (೨-೧೮), 'ನಾಲುವರ ನಡುವಣ ಹಾವು ಸಾಯದು' (೩-೧೭), 'ದೇಸಿಗರಿಗೆ ದೇಸಿಗರೊಲವು' (೩-೧೦), 'ಬೆಂದುದ ಬೆದಕಿ ನೋಯಿಸಸು' (೧೦-೩).

ಕುಮಾರವ್ಯಾಸ ಗಾದೆಗಳನ್ನು ಬಳಸಿರುವಂತೆ ಪಡೆನುಡಿಗಳನ್ನೂ ಹೇರಳವಾಗಿ ಬಳಸಿರುವುದನ್ನು ಕಾಣಬಹುದು ನಾಯಿ ಸಿಂಹಕ್ಕಿದಿರೆ (೨-೨೭), ದುರಾತ್ಮನಸೋಲಿಸುವರಾರುಂಟು (೨-೧೯), ಅಕಟ ಹೆಂಗುಸುಜನ್ಮವನು ಸುಡಲಿ (೩-೩೨). ಗುಣಕೆಮತ್ಸರವೇ (೯-೩೬).

ಇವುಗಳಂತೆ ಕುಮಾರವ್ಯಾಸ ಪ್ರಯೋಗಿಸಿರುವ ನುಡಿಗಟ್ಟುಗಳೂ ಸರಳವೂ ಅರ್ಥಗರ್ಭಿತವೂ ಕೇಳಲು ಇಂಪಾಗಿಯೂ ಪರಿಣಾಮಕಾರಿಯಾಗಿಯೂ ಇವೆ. ಸಂದರ್ಭೋಚಿತವಾಗಿ ಪ್ರಯೋಗವಾಗಿರುವ ಈ ನುಡಿಗಳು ಕವಿಯ ಹಿರಿಮೆಯನ್ನು ತೋರಿಸುತ್ತದೆ. 'ಆಲಿಯಲಿನುಂಗು' (೨-೧೨), 'ಹೆಡತಲೆಯ ಹಾವು'(೫-೧೫), 'ಸುಡುಪೊಡಲು' (೩-೬೩), 'ಗಂಟಲಕೊಯ್' (೭-೭), 'ಕಟವಾಯ ಕೊಯ್' (೭-೨೭), 'ನುಗ್ಗುನುಸಿ' (೮-೪೨), 'ಮಾತುಹಳಸು' (೯-೭೫), 'ದಿಂಡುಗೆಡೆ'(೫-೧೬) ಹೀಗೆ ಜನತೆಯ ಆಡುಭಾಷೆಯನ್ನು ಬಳಸಿರುವುದೇ ಕುಮಾರವ್ಯಾಸನ ಸಫಲತೆಗೆ ಕಾರಣವೆನ್ನಬಹುದು.

'ಕೆಲವೇ ಪದಗಳಿರಲಿ ಹೆಚ್ಚು ಪದಗಳಿರಲಿ ಹೇಳಿಕೆಯ ಸುತ್ತ ಪ್ರಪಂಚವೊಂದನ್ನು ನಿರ್ಮಾಣಗೈದು ಅದರ ಭವ್ಯ ವೈಭವದಿಂದ ನಮ್ಮನ್ನು ಅಮಿತಾನಂದದಲ್ಲಿ ಮುಳುಗಿಸಬಲ್ಲ ಕುಮಾರವ್ಯಾಸ'[೨೦] ಅನ್ಯ ಸಂದರ್ಭದಲ್ಲಿ ಅಶ್ಲೀಲವೆಂದು

ಹೇಳಬಹುದಾದ ಮಾತುಗಳನ್ನು ತನ್ನ ಕಾವ್ಯದಲ್ಲಿ ಸುಂದರವಾಗಿ ಶಕ್ತಿಯುತವಾಗಿ ಬಳಸಿಕೊಂಡಿದ್ದಾನೆ 'ಗಂಡರೋ ನೀವ್ ಷಂಡರೋ ಹೇಳೆಂದಳಿಂದುಮುಖಿ' , 'ಒರಲಬೇಡವೋ ಕುನ್ನಿ', `ಈ ನಪುಂಸಕರೊಡನೆ ಹುಟ್ಟಿದನಾನು ಮೂಗುಳ್ಳವನೇ' ಮಹಾಕವಿ ಇಂತಹಕಡೆಗಳಲ್ಲಿ ಅಶ್ಲೀಲತೆಯನ್ನು ತೊಳೆದು ಅಪೂರ್ವತೆಯನ್ನು ಹೊಳೆಸುತ್ತಾನೆ. ಹಾಗೆಯೇ ಸಾಧಾರಣ ಪದಗಳ ಅರ್ಥಸೀಮೆಯನ್ನು, ಭಾವಶ್ರೀಮಂತಿಕೆಯನ್ನು ಹೆಚ್ಚಿಸುವ ಅದ್ಭುತಶಕ್ತಿಯೂ ಇವನಿಗೆ ಹೇರಳವಾಗಿದೆ.

ಕುಮಾರವ್ಯಾಸನ ರೂಪಕಗಳು : ಕುಮಾರವ್ಯಾಸ ರೂಪಕಗಳನ್ನು ಸಾಕಷ್ಟುಪ್ರಮಾಣದಲ್ಲಿ ಯಶಸ್ವಿಯಾಗಿ ಬಳಸಿದ್ದಾನೆ. ಇವನ ಕಾವ್ಯಭಾಷೆಯೇ ರೂಪಕ ಎನ್ನಬಹುದು. ಅಂತೆಯೇ ಇವನನ್ನು ಪ್ರೊ.ಎಸ್.ವಿ.ರಂಗಣ್ಣ 'ರೂಪಕಸಾಮ್ರಾಜ್ಯ ಚಕ್ರವರ್ತಿ' ಎಂದು ಕರೆದಿದ್ದಾರೆ. ಕುಮಾರವ್ಯಾಸ ಮಾತನಾಡುವುದು ರೂಪಕಗಳನ್ನು, ಅದೆಷ್ಟೆಂದರೆ ಅವನ ಸಾಧಾರಣತಮ ಭಾಷೆಯು ರೂಪಕದಿಂದ ದೀಪ್ತಗೊಂಡಿರುತ್ತವೆ. ಕುಮಾರವ್ಯಾಸನ ರೂಪಕಗಳನ್ನು ಕುರಿತು ಮಾತನಾಡುವಾಗ ಅನೇಕ ವಿಮರ್ಶಕರು W.B.Yeats ನ `wisdom speaks first in images' ಎಂಬ ಮಾತನ್ನು ಸ್ಮರಿಸುತ್ತಾರೆ. ಕುಮಾರವ್ಯಾಸ ಕೇವಲ ರೂಪಕವನ್ನು ಮಾತ್ರವಲ್ಲ, ಸಮಯವರಿತು ಉತ್ಪ್ರೇಕ್ಷೆ ಸ್ವಭಾವೋಕ್ತಿ ಮೊದಲಾದ ಅಲಂಕಾರಗಳನ್ನೂ ಪ್ರಯೋಗಿಸಿದ್ದಾನೆ. ವಿರಾಟಪರ್ವದಲ್ಲಿ ಕಂಡುಬರುವ ಕೆಲವು ಅಲಂಕಾರಗಳು. ರೂಪಕ : 'ತನು ನಾಲ್ಕರಲಿ ಜೀವಾತ್ಮ ನೀವೆಮಗೆ(೧೦೮), ಎಳನಗೆಯ ಬೆಳುದಿಂಗಳನು ನೀ ತಳಿದು ತಾಪವ ಕೆಡಿಸು ಮೆಲುನುಡಿಯ ಸ್ಮಧೆಯಿಂದ ತೃಷ್ಣೆಯನಕಟ ಪರಿಹರಿಸು (೨-೧೭)

ಮಾಲಾರೂಪಕ : 'ಮನುಮ್ಮಥನ ಮದದಾನೆ', 'ಕಂದರ್ಪನ ಮಹಾಮಂತ್ರಾಧಿದೇವತೆ' ಜನವು ಮರುಳಹ ಮದ್ದೂ ಸಂಸ್ಕೃತಿ ಸುಖದಸಾಕಾರ, 'ಮನಸಿಜನ ಮಸೆದಲಗು'.

ಉಪಮೆ: 'ಸಿಂಹದ ಸತಿಗೆ ನರಿ ಮನವೊಲಿದು ಬಪ್ಪಂದದಲಿ', 'ಬರಸಿಡಿಲು ಪರ್ವತದ ಶಿಖರವ ನರಗುವಂತಿರೆ ಖಳನ ನೆತ್ತಿಯನೆರಗಿ' (೩-೮೯), 'ಬಿರುಗಾಳಿಯಲಿ ಸೈಗೆಡೆದ ಕದಳಿಯ ಕಂಬದಂತಿರೆ ಕಾಂತೆ ಹೊರಳಿದಳು' (೩-೧೫).

ಕುಮಾರವ್ಯಾಸ ಕನ್ನಡದ ಶಬ್ದಭಂಡಾರವನ್ನು ಶ್ರೀಮಂತಗೊಳಿಸಿದನೆಂಬುದು ಅತಿಶಯೋಕ್ತಿಯಲ್ಲ 'ಈ ಕವಿಯ ಹೆಸರು ಹೇಳಿದವರಿಗೂ ಶಬ್ದದಾರಿದ್ರ್ಯಬಾರದು' ಎಂದು ವಿಮರ್ಶಕರೋರ್ವರು ಹೇಳಿರುವ ಮಾತು ಸತ್ಯ.

ದೇಶದ ಅಂತಶ್ಚೇತನವನ್ನು ಹೀಗೆ ಸಾಹಿತ್ಯ ಕೃತಿಯೊಂದು ರೂಪಿಸಿರುವ ನಿದರ್ಶನ ಮಹಾಭಾರತವನ್ನು ಬಿಟ್ಟರೆ ಬಹುಶಃ ಇನ್ನೊಂದಿಲ್ಲ' [೨೧] ಎಂಬ ಅಗ್ಗಳಿಕೆಗೆ ಪಾತ್ರವಾದ ಈ ಭಾರತ ಗತಕಾಲದ ಇತಿಹಾಸ, ವೈದಿಕ ಸಂಸ್ಕೃತಿಗೂ ಇತಿಹಾಸ ಗೋಚರ ಸನಾತನ ಸಂಸ್ಕೃತಿಗೂ ನಡುವಣ ಸೇತುವೆ. ಚಾರಿತ್ರಿಕರ ಕಣ್ಣಿಗೆ ಅಪರಿಸ್ಫುಟವಾಗಿರುವ ಗತಕಾಲದ ಬಗೆಗೆ ನಮಗಿರುವ ದಾಖಲೆ, ಪುರುಷಾರ್ಥಸಾಧನೆಯ ಮಾರ್ಗದರ್ಶಿ, ಮಹಾಭಾರತೋತ್ತರ ಯುಗದ ಧಾರ್ಮಿಕ ಜೀವನದ ರೂವಾರಿ, ಸಾಂಪ್ರತ ಯುಗದ ಧಾರ್ಮಿಕ ಜೀವನ, ಎಂದೆಲ್ಲಾ ಕರೆಯಲಾಗುತ್ತದೆ.

ಈ ಪ್ರಕಾರವಾದ ಭಾರತ ವ್ಯಾಸರ ಕಾಲದಲ್ಲಿ ಘಟಿಸಿದ ಇತಿಹಾಸ. ಇದನ್ನು ಕುಮಾರವ್ಯಾಸ ಭಕ್ತನಾಗಿ, ಭಾಗವತನಾಗಿ ಕೃಷ್ಣಕಥೆಯನ್ನಾಗಿಸಿದ್ದಾನೆ. ಇವನಿಗೆ ಇದು ಭಗವದನುಸಂಧಾನ, ಆತ್ಮ ಸಾಕ್ಷಾತ್ಕಾರ ಸಾಧನ, ಸಕಲ ಪುರುಷಾರ್ಥ ಕೋಶಕೆ ಮತ್ತು ದೀಪಿಕೆ. ಇಷ್ಟೇ ಅಲ್ಲ ಇದರಲ್ಲಿ ವೀರ, ವೇದದ ಸಾರ, ತತ್ತ್ವವಿಚಾರ, ಬುದ್ಧಿಗುಣಗಳೆಲ್ಲಾ ಸಮಾವೇಶಗೊಂಡಿದೆ, ಇದು ಕಲೆಯೂ ಹೌದೆಂಬುದನ್ನು 'ವಿರಹಿಗಳ ಶೃಂಗಾರ' 'ವಿದ್ಯಾಪರಿಣತರಲಂಕಾರ' ಎಂಬ ನುಡಿಗಳು ಸೂಚಿಸುತ್ತದೆ.

ರಂಶ್ರೀ ಮುಗಳಿಯವರು ಕುಮಾರವ್ಯಾಸಭಾರತವನ್ನು 'ಪುರಾಣಕಾವ್ಯ' [೨೨] ಎಂದಿದ್ದಾರೆ, ಆದರೆ 'ಕುಮಾರವ್ಯಾಸ ಪೌರಾಣಿಕ ರೀತಿಯನ್ನು ಕಾವ್ಯತಂತ್ರವನ್ನಾಗಿಸಿ ಸ್ವೀಕರಿಸಿದನೇ ಹೊರತು ಅವನ ಕಾವ್ಯವನ್ನು ಪುರಾಣ ಕಾವ್ಯವೆಂದು ಕರೆಯಲಾಗುವುದಿಲ್ಲ" ಅದು ಶುದ್ಧವಾಗಿ ಮಹಾಕಾವ್ಯ. ಈ ಪ್ರಕಾರವಾಗಿ ವ್ಯಾಸ ಸಮಾನನಲ್ಲದಿದ್ದರೂ ವ್ಯಾಸರನ್ನು ಅನುಸರಿಸಿಯೂ ಅನುಸರಿಸದವನಂತೆ ಕೆಲವೆಡೆಗಳಲ್ಲಿ ವ್ಯಾಸರನ್ನು ಹಿಂದಿಕ್ಕಿ ಸ್ವತಂತ್ರ

ಕೃತಿಯೆಂಬಂತೆ ಪ್ರತಿ ನಿರ್ಮಾಣಮಾಡಿರುವುದನ್ನು ವಿರಾಟಪರ್ವದ ಕೆಲ ಉದಾಹೃತ ಭಾಗಗಳಿಂದ ಈ ಅಧ್ಯಾಯದಲ್ಲಿ ಮನಗಂಡಿದೆ.

ಟಿಪ್ಪಣಿಗಳು

೧. ಕಿ.ರಂ.ನಾಗರಾಜ್, ಕುಮಾರವ್ಯಾಸ ಭಾರತ ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.೨೦೦೪.ಪುಟ.೧೯೮.

೨. ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿ, ನಾರಣಪ್ಪನ ಶೈಲಿ–೧, ಕುಮಾರವ್ಯಾಸ ಪ್ರಶಸ್ತಿ, ಕನ್ನಡಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು. ೧೯೭೮. ಪುಟ೨೮೧,

೩. ರಂ.ಶ್ರೀ.ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ಉಷಾಸಾಹಿತ್ಯಮಾಲೆ, ಮೈಸೂರು. ಪುಟ–೨೪೭.

೪. ಪುಣೆಯ ಭಾಂಡಾರಕರ್ ಪ್ರಾಚ್ಯ ವಿದ್ಯಾ ಸಂಶೋಧನಾ ಕೇಂದ್ರ ಹತ್ತಾರು ವಿದ್ವಾಂಸರ ನೆರವಿನಿಂದ ಹಲವು ದಶಕಗಳ ಯೋಜನೆಯಲ್ಲಿ ಈ ಸಂಸ್ಕೃತ ಭಾರತ ಪರಿಷ್ಕರಣಾ ಕಾರ್ಯವನ್ನು ತಕ್ಕಮಟ್ಟಿಗೆ ಮಾಡಿದೆ.

೫ & ೬. ಹೆಚ್.ಎಸ್.ರಾಘವೇಂದ್ರರಾವ್, 'ಕುಮಾರವ್ಯಾಸನ ಇತರ ಪಾತ್ರಗಳು' ಕುಮಾರವ್ಯಾಸನ ಕನ್ನಡಭಾರತ, ಪುಟ.೧೮೮, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡಭವನ, ಜೆ.ಸಿ.ರಸ್ತೆ, ಬೆಂಗಳೂರು.

೭. ಪ್ರೊ.ಅ.ರಾ.ಮಿತ್ರ, 'ಕುಮಾರವ್ಯಾಸಭಾರತ :ವ್ಯಾಸಭಾರತದ ಹಿನ್ನೆಲೆಯಲ್ಲಿ' ಕುಮಾರವ್ಯಾಸಭಾರತ : ಸಾಂಸ್ಕೃತಿಕ ಮುಖಾಮುಖಿ, ಪುಟ.೮೭. ಕನ್ನಡ ವಿಶ್ವವಿದ್ಯಾಲಯ ಹಂಪಿ. ೨೦೦೪.

೮. ಪ್ರೊ.ಎಲ್.ಎಮ್.ಎಲ್.ಶಾಸ್ತ್ರಿ, ವಿರಾಟಪರ್ವದೀಪಿಕೆ, ಪುಟ.೧೫೯. ರಿಯಾಏಜನ್ಸೀಸ್. ಕೂಗುಬಂಡೆರಸ್ತೆ, ಕುವೆಂಪುನಗರ, ಮೈಸೂರು. ೨೦೦೭

೯. ಸಿ.ಪಿ.ಕೆ. ಮೂರುಭಾರತ್ ಎರಡುಪರ್ವ, ಪುಟ.೨, ತಳಗವಾದಿ ಪ್ರಕಾಶನ ಮೈಸೂರು. ೨೦೦೪.

೧೦. 'ತೋರಣನಾಂದಿ' ಪುಟ XX ಕರ್ಣಾಟ ಭಾರತ ಕಥಾಮಂಜರಿ, ಸರಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಮೈಸೂರು. ೧೯೮೮.

೧೧. ದ.ರಾ.ಬೇಂದ್ರೆ, 'ಉತ್ತರಕುಮಾರ' ಕುಮಾರವ್ಯಾಸನ ಕನ್ನಡಭಾರತ, ಪುಟ.೧೮೨, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡಭವನ, ಜೆ.ಸಿ.ರಸ್ತೆ, ಬೆಂಗಳೂರು.

೧೩. ಕುರ್ತುಕೋಟಿ, ಕುಮಾರವ್ಯಾಸ (ಸಂ). ವಿ.ಸೀ, ಐ.ಬಿ.ಹೆಚ್ ಪ್ರಕಾಶನ, ಪುಟ.೪೭.

೧೪. ಎಸ್.ವಿ.ರಂಗಣ್ಣ, ನಾರಣಪ್ಪನ ಶೈಲಿ–೨, ಪುಟ.೩೦೫. ಕುಮಾರವ್ಯಾಸ ಪ್ರಶಸ್ತಿ, ಕನ್ನಡಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–೧೮.

೧೫. ಶ್ರೀನಿವಾಸ ಎಲ್.ಕುಲಕರ್ಣಿ, ಕುಮಾರವ್ಯಾಸನ ರೂಪಕ ಪ್ರತಿಭೆ, ಪುಟ.೨೯೧ ಕುಮಾರವ್ಯಾಸನ ಕನ್ನಡಭಾರತ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡಭವನ, ಜೆ.ಸಿ.ರಸ್ತೆ, ಬೆಂಗಳೂರು. ೨೦೦೪.

೧೭. ತೀ.ನಂ.ಶ್ರೀಕಂಠಯ್ಯ, ಕನ್ನಡಭಾರತದಲ್ಲಿ ಶೃಂಗಾರ ಸನ್ನಿವೇಶಗಳು ಪುಟ ೨೭೧ ಕುಮಾರವ್ಯಾಸ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜ ಪೇಟೆ, ಬೆಂಗಳೂರು. ೧೯೭೮

೧೮. ಎಸ್.ವಿ.ರಂಗಣ್ಣ, ನಾರಣಪ್ಪನ ಶೈಲಿ–೨, ಪುಟ ೩೦೦, ಕುಮಾರವ್ಯಾಸ ಪ್ರಶಸ್ತಿ, ಕನ್ನಡಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು. ೧೯೭೮.

೧೯. ಎಲ್.ಎಂ.ಎಲ್.ಶಾಸ್ತ್ರಿ, ವಿರಾಟಪರ್ವದೀಪಿಕೆ ಪುಟ.೨೩, ರಿಯಾ ಏಜನ್ಸೀಸ್, ಕುವೆಂಪು ನಗರ, ಮೈಸೂರು.

೨೦. ಎಸ್.ವಿ.ರಂಗಣ್ಣ, ಕುಮಾರವ್ಯಾಸ ಪ್ರಶಸ್ತಿ, ಕುಮಾರವ್ಯಾಸನ ಶೈಲಿ.೩೨೭, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೧. ಪ್ರೊ.ಫ್ರಾಂಕ್ಲಿನ್ ಎಜರ್‌ಟನ್ (ಅಮೆರಿಕದ ಪ್ರಸಿದ್ಧ ಭಾಷಾಶಾಸ್ತ್ರಜ್ಞ, ಸಂಸ್ಕೃತ ಪಂಡಿತ)
Journal of the American Oriental Society .

೨೨. ರಂ ಶ್ರೀ ಮುಗಳಿ, ಕನ್ನಡಸಾಹಿತ್ಯ ಚರಿತ್ರೆ, ಪುಟ.೨೫೩, ಉಷಾಸಾಹಿತ್ಯ ಮಾಲೆ, ಮೈಸೂರು. ೧೯೫೩.

೨೩. ಕುರ್ತುಕೋಟಿ, ಕುಮಾರವ್ಯಾಸ (ಸಂ), ವಿ.ಸೀ, ಪುಟ.೭೭. ಐ.ಬಿ.ಹೆಚ್ ಪ್ರಕಾಶನ, ಬೆಂಗಳೂರು.

ಅಧ್ಯಾಯ – ೩

ವಿರಾಟಪರ್ವದ ಪಾಠಾಂತರಗಳ ವಿಶ್ಲೇಷಣೆ

ಕುಮಾರವ್ಯಾಸಭಾರತ ಅಪಾರಜನ ಮೆಚ್ಚುಗೆಯನ್ನು ಪಡೆದಿದ್ದರಿಂದ ಈ ಕೃತಿಯಲ್ಲಿ ಕವಿಯ ಪಾಠವನ್ನು ಹುಡುಕಲಾರದಷ್ಟು ಪ್ರಕ್ಷೇಪಗಳು ಸೇರಿಕೊಂಡಿವೆ. ಉದ್ದೇಶಪೂರ್ವಕವಾಗಿ ಕವಿ ಹೇಳದೇ ಬಿಟ್ಟಿರುವ ಮೂಲಸಂಸ್ಕೃತಭಾರತದ ಭಾಗಗಳು, ಧರ್ಮವಿಚಾರವಾಗಿ ತಮಗೆ ತೋಚಿದ ವಿಷಯಗಳು, ಉಪಕಥೆಗಳು, ವರ್ಣನೆ, ವಿವರಣೆಗಳನ್ನು ಪಾಂಡಿತ್ಯಉಳ್ಳಂತಹ ವಾಚಕರು, ಲಿಪಿಕಾರರು ಸೇರಿಸಿರುವುದರಿಂದ ಇಂಥಹ ಪ್ರಕ್ಷೇಪ ಕಾರ್ಯಗಳು ನಡೆದಿವೆ.

ಪಾಠಾಂತರಗಳ ಗೋಜು ನಮಗೇಕೆ?, ಪ್ರಕ್ಷಿಪ್ತ ಶ್ಲೋಕಕಗಳಿಂದ ನಷ್ಟವೇನು? ಬರೆದವರು ಯಾರಾದರಾಗಲಿ, ಶ್ಲೋಕ ಚೆನ್ನಾಗಿದ್ದರೆ ಓದಿ ಸಂತೋಷಪಡಬಹುದಲ್ಲ?

ಬಾಧಕವೇನು? ಎಂಬಿತ್ಯಾದಿ ಧೋರಣೆಯಿಂದ ಇಂತಹ ಪ್ರಕ್ಷೇಪಗಳು ಕಾವ್ಯದಿಂದ ಬೇರ್ಪಡಿಸಲಾಗದಂತೆ ಬೆಸೆದು ಕೊಂಡಿವೆ.

ಕಳೆದ ಒಂದು ಶತಮಾನದಿಂದ ಕವಿಯ ಶುದ್ಧಪಾಠವನ್ನು ಹುಡುಕುವ ಈ ಕಾರ್ಯ ನಡೆದು ಬಂದಿದ್ದರೂ ಈ ವರೆವಿಗೂ ಕವಿಯ ಶುದ್ಧಪಾಠ ನಿರ್ಧರಿಸಲಾಗದಿರುವುದು ಪ್ರಕ್ಷೇಪಗಳು ಯಾವ ಮಟ್ಟಿಗೆ ಬೆಳೆದು ಬಂದಿದೆ ಎಂಬುದನ್ನು ತಿಳಿಸುತ್ತದೆ. ಅಲ್ಲದೆ ಕುಮಾರವ್ಯಾಸ ಭಾರತದ ಪ್ರತಿಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿರುವುದು ಪಾಠಾಂತರ ಗೊಂದಲಗಳಿಗೆ ಕಾರಣವಾಗಿದೆ.

ಪ್ರಸ್ತುತ ಪ್ರಬಂಧದಲ್ಲಿ ಹಸ್ತಪ್ರತಿಗಳಲ್ಲಿ ಸಿಗುವ ಭಿನ್ನ ಪಾಠಗಳನ್ನು ಮುದ್ರಿತ ಪ್ರತಿಯಿಂದ ಆರಿಸಿಕೊಂಡು ಅಕ್ಷರ ಪಾಠಾಂತರ, ಪದ ಪಾಠಾಂತರ, ಪದ್ಯ ಪಾಠಾಂತರಗಳಾಗಿ ತೆಗೆದುಕೊಂಡು ಕೆಲವನ್ನು ವಿವೇಚಿಸಲಾಗಿದೆ. ಈ ಹಿಂದೆ ಹೇಳಿದಂತೆ ಕೃಷ್ಣಜೋಯಿಸರ ಪ್ರತಿಯನ್ನು ಇದಕ್ಕೆ ಆಧಾರವಾಗಿಟ್ಟುಕೊಳ್ಳಲಾಗಿದೆ.

ಅಕ್ಷರಪಾಠಾಂತರಗಳು

೧) **ಮಗನೆ ಕೇಳೈ ಐದು ವರುಷಕೆ**
ಮಿಗುವು ವೆ ರಡೇ ಮಾಸ ಮಾಸಾ
ದಿಗಳನವರನುಭವಿಸಿದರು ಹದಿಮೂರುವತ್ಸರವ
ಮಿಗುವವಧಿ ಬುಧರರಿಯೆ ನಿನ್ನಿನ
ಹಗಲು ನಿನ್ನದು ಪಾಂಡುಪುತ್ರರು
ಹೊಗುವರಿಂದಿನ ದಿನ ದಿವಸವವರದು ಕಂದ ಕೇಳೆಂದ (೮–೨೨)

ಪಾಠಾಂತರ : ದೆ (ಜ,ನ,ಪ)
ಇಲ್ಲಿ ಮಿಗುವುದು + ಎರಡೇಮಾಸ ಮಿಗುವುದೆರಡೇಮಾಸ ಎಂದು ಆಗುತ್ತಾದರೂ, ಬಹುವಚನ ಇರುವುದರಿಂದ ಮಿಗುವುವು ಎನ್ನುವ ರೂಪವೇ ಸಾಧುವಾದುದು. ಜೋಯಿಸರು ಸ್ವೀಕರಿಸಿರುವ ಪಾಠ ಉಚಿತವಾಗಿದೆ.

ಈ ಪದ್ಯದಲ್ಲಿ 'ಮಗನೆ ಕೇಳೀರ್ಐದುವರ್ಷಕೆ ಮಿಗುವುವೆರಡೇಮಾಸ' ಎಂದು ಮೊದಲ ಪ್ರತಿಗಳಲ್ಲಿ ಅಚ್ಚಾಗಿರುವುದನ್ನು ಜೋಯಿಸರು ಪ್ರಬುದ್ಧಕರ್ಣಾಟಕ ಸಂಪುಟ ೪೨ ಸಂಚಿಕೆ ೪ ರ 'ಕುಮಾರವ್ಯಾಸ ಭಾರತದ ಒಂದೆರಡು ಸಮಸ್ಯೆಗಳು ಮತ್ತು ನಿವಾರಣೆ' ಎಂಬ ಲೇಖನದಲ್ಲಿ 'ಮಗನೆ ಕೇಳೀರ್ಐದು ವರುಷಕೆ ಮಿಗುವುವೆರಡಿಮ್ಮಾಸ' ಎಂದು ತಿದ್ದುಪಡಿ ಮಾಡಿದ ಪಾಠವನ್ನು ನೀಡಿದ್ದರು. ಆರ್.ಶಾಮಾಶಾಸ್ತ್ರಿಗಳ ಪರಿಷ್ಕರಣದಲ್ಲಿ 'ಮಗನೆ ಕೇಳೈ ಐದುವರುಷಕೆ ಮಿಗುವುವೆರಡೇಮಾಸ' ಎಂಬ

ಸೂಚನೆ: ಇಲ್ಲಿ ( ) ಚಿನ್ಹೆ ಯ ಒಳಗೆ ತೋರಿಸಿರುವುದು ಕೃಷ್ಣಜೋಯಿಸರು ನೀಡಿರುವ ಹಸ್ತಪ್ರತಿಯ ಪಾಠಾಂತರ ಹಾಗೂ [ ] ಚಿನ್ಹೆಯ ಒಳಗೆ ಕೊಟ್ಟಿರುವುದು ಇತರ ಸಂಪಾದಕರ ಪಾಠಾಂತರ.

ಪಾಠವನ್ನು ಒಪ್ಪಿಕೊಳ್ಳಲಾಗಿದೆ. ಐದು ವರುಷದಲ್ಲಿ ಎರಡು ಅಧಿಕಮಾಸಗಳು ಬರುವುದು, ಈರೈದು ಎಂದಾಗ ಎರಡು + ಐದು ಹತ್ತು ವರುಷಗಳಾಗುತ್ತದೆ. ಹಾಗಾಗಿ ಈರೈದುವರುಷಕೆ ಎರಡು ಇಮ್ಮಾಸ ಎಂಬ ಪಾಠವನ್ನು ಪ್ರಬುದ್ಧಕರ್ನಾಟಕದಲ್ಲಿ ನೀಡಿದ್ದರಾದರೂ ಅದು ಸಮಂಜಸವಲ್ಲವೆಂದು ತೋರಿದ್ದರಿಂದ ಪುನರ್ ಪರಿಷ್ಕರಣೆ ಮಾಡುವಾಗ 'ಐದು ವರುಷಕೆ ಮಿಗುವುವೆರಡೇಮಾಸ' ಎಂದು ಉಚಿತವಾದ ಪಾಠವನ್ನು ತೆಗೆದುಕೊಂಡಿದ್ದಾರೆ. ಇದು ಜೋಯಿಸರು ಮಾಡಿಕೊಂಡಿರುವ ತಿದ್ದುಪಡಿಗೆ ಒಂದು ನಿದರ್ಶನವಾಗಿದೆ.

೨) **ಬಳಿಕನಿನ್ನ ಪುರಾಣಧರ್ಮವ**
ತಿಳಿದುಕೊಂಬೆವಿದೊಮ್ಮೆ ನಿನ್ನಯ
ಲಲಿತಕರುಣಕಟಾಕ್ಷಕವಚವ ತೊಡಿಸಿ ತನ್ನೊಡಲ
ಅಳುಕದೆಸುವ ಮನೋಜನಂಬಿನ
ಹಿ ಳುಕ ಮುಟಿ ಡಿಂಗರಿಗನ ಹೆನಂ
ದಳುಪಿ ಮನದಲಿ ಖೂಳ ಕಮಲಾನನೆಗೆ ಕೈಮುಗಿದ

(೩-೭೫)

ಪಾಠಾಂತರ : <u>ಹು</u>ಳುಕ (ಕು&ಮಾ, ಎ.ವಿ.ಪ್ರಸನ್ನ)

ಇಲ್ಲಿ ಜೋಯಿಸರು ಯಾವುದೇ ಪಾಠಾಂತರ ಕೊಟ್ಟಿಲ್ಲ, ಮಾ & ಕು ಹಾಗೂ ಎ.ವಿ.ಪ್ರಸನ್ನರ ಸಂಪಾದಿತ ಕೃತಿಯನ್ನುಳಿದು ಉಳಿದೆಲ್ಲ ಸಂಪಾದಕರ ಕೃತಿಯು ಜೋಯಿಸರ ಪಾಠವನ್ನೇ ಒಳಕೊಂಡಿದೆ.

ಕುವೆಂಪು ಮತ್ತು ಮಾಸ್ತಿ ಹಾಗೂ ಎ.ವಿ.ಪ್ರಸನ್ನ ಅವರ ಸಂಪಾದಿಸಿರುವ ಕೃತಿಯಲ್ಲಿ ಕೊಟ್ಟಿರುವಂತೆ ಮನ್ಮಥನು ಬಿಡುವ ಬಾಣದ ಹುಳುಕನ್ನು ಮುರಿ ಎನ್ನುವುದು ಸಂದರ್ಭಕ್ಕೆ ಸೂಕ್ತವಾದ ಯಾವುದೇ ಅರ್ಥವನ್ನು ನೀಡುವುದಿಲ್ಲ. ಹಿಳುಕ ಎಂದರೆ ಬಾಣದ ಹಿಂಬಾಗ ಅಥವಾ ಬಾಣದ ಗರಿಗಳು ಹಾಗಾಗಿ ಹಿಳುಕ ಎಂಬ ಪದವು ಮನ್ಮಥನು ಬಿಡುತ್ತಿರುವ ಬಾಣವನ್ನು (ಗರಿಗಳನ್ನು) ಮುರಿ ಎಂಬ ಅರ್ಥವತ್ತಾದ ವಾಕ್ಯವನ್ನುಂಟುಮಾಡುತ್ತದೆ.

೩) **ಎಲಗೆ ಕುಲುಮ್ಮೆಯಾದೆ ಕಡುಕೋ**
ಮಲತೆಯೆತ್ತಲು ಕರ್ಕಶಾಂಗ್ಗದ
ಬಲುಹಿದೆತ್ತಲು ಮಾಯ ವೇಷವ ಧರಿಸಿದೆಯೊ ಮೇಣು
ತಿಳುಹೆನಲು ಕೇಳೆಲವೋ ಪರಸತಿ
ಗಳುಪಿದಾತಂಗಮೃತ ವಿಷ ಕೋ
ಮಲತೆ ಕರ್ಕಶವಹುದೆನುತ ತುಡುಕಿದನು ಮುಂದಲೆಯ

(೩-೮೬)

ಪಾಠಾಂತರ : ಮಾಯೆ – ಎಂ.ವಿ.ಸೀ

ಈ ಪದಕ್ಕೆ ಜೋಯಿಸರ ಗ್ರಂಥದಲ್ಲಿ ಯಾವುದೇ ಪಾಠಾಂತರ ನೀಡಿಲ್ಲ. ಅಲ್ಲದೆ ಎಂ.ವಿ.ಸೀ ಅವರ ಸಂಪಾದಿತ ಕೃತಿಯನ್ನು ಹೊರತುಪಡಿಸಿ ಮಿಕ್ಕೆಲ್ಲರ ಕೃತಿಗಳಲ್ಲಿ 'ಮಾಯ' ಎನ್ನುವ ಪಾಠವೇ ಇದೆ.

ಟಿ.ವಿ.ವೆಂಕಟಾಚಲಶಾಸ್ತ್ರಿ ಅವರು ಎಂ.ವಿ.ಸೀ ಅವರ ಪಾಠ ಮಾಯೆ ಎನ್ನುವ ಪದವನ್ನೇ ಅನುಮೋದಿಸಿದ್ದಾರೆ.

ಭಾಷಾಶಾಸ್ತ್ರದಲ್ಲಿ ಆ>ಅ ಹಾಗೂ ಅ>ಎ ಆಗುವುದನ್ನು ಗಮನಿಸಿದ್ದೇವೆ. ಉದಾಹರಣೆಗೆ : ರಮಾ > ರಮ > ರಮೆ ; ಉಮಾ > ಉಮ > ಉಮೆ ಇದೇ ಪ್ರಕಾರವಾಗಿ ಮಾಯಾ ಮಾಯೆ ಆಗಿದೆ. ಇಲ್ಲಿ ಅರ್ಥವ್ಯತ್ಯಾಸವೇನೂ ಇಲ್ಲದಿದ್ದರೂ ಮಾಯೆವೇಷ ಎಂದು ಉಚ್ಚರಿಸುವಾಗ, ಗಮಕಿಗಳು ಹಾಡುವಾಗ ಸುಲಭ ಎನಿಸುವುದಿಲ್ಲ, ಲಯವ್ಯತ್ಯಾಸವಾಗುವ ಸಂಭವವಿರುವುದರಿಂದ 'ಮಾಯ ಪಾಠವನ್ನು ತೆಗೆದುಕೊಳ್ಳಬಹುದು.

ಕುಮಾರವ್ಯಾಸ 'ಓದಿ ಹೊಗಳಿಸಿಕೊಂಬ ಗಮಕಿಗಳು' ಎನ್ನುತ್ತಾ ಗಮಕ ಕಲೆಯ ಸಾಧನೆಯನ್ನು ಮೆಚ್ಚಿರುವುದು, ಗಮಕಿಗಳ ಲಯಕ್ಕೆ ತಕ್ಕಂತೆ ರಚಿಸಿರುವ ಸಾಧ್ಯತೆಯಿರುವುದನ್ನು ತಿಳಿಸುತ್ತದೆ.

೫) **ಅರಿವು ತಲೆಕೆಳಗಾಯ್ತು ಧೈರ್ಯದ**
ನಿಱಿಗೆ ನಗೆಗೆಡೆಯಾಯ್ತು ಲಜ್ಜೆಯ
ಹೊಱಿಗೆ ಬ ತ್ತಿ ದೊಱೆಯಾಯ್ತು ಕರಿಮೊಳೆಯೋಯ್ತು ಭಯಬೀಜ
ನುಱಿವೆ ಗಱಿಗಟ್ಟಿತು ಮನೋಭವ
ನಿರಿಗೆಲಸ ಬಲುಹಾಯ್ತು ಹೊಗಳುವ
ದಱಿಯೆನಾತನ ತನುವಿನಂತಸ್ತಾಪ ದೀಪನವ

(೨-೧೧)

ಪಾಠಾಂತರ : ಬಲುದೊರೆ (ಆ)
ಬರುದೊ (ಖ, ನ)

ಬಲಿದೊ (ರ)

ಮೇಲಿನ ನಾಲ್ಕು ಹಸ್ತಪ್ರತಿಗಳ ಪಾಠಾಂತರ ಹೊರತುಪಡಿಸಿ ಎಂ.ವಿ.ಸೀ ಅವರ ಕೃತಿಯನ್ನೂ ಒಳಗೊಂಡಂತೆ ಉಳಿದ ಎಲ್ಲ ಸಂಪಾದಿತ ಕೃತಿಗಳಲ್ಲೂ ಜೋಯಿಸರು ನೀಡಿರುವ 'ಬಟಿದೊಱೆ' ಎಂಬ ಪಾಠವೇ ಕೊಟ್ಟಿದೆ.

ಎಂ.ವಿ.ಸೀ ಅವರ ಕುಮಾರವ್ಯಾಸಭಾರತ ಸಂಗ್ರಹದ ಉಪೋದ್ಘಾತದಲ್ಲಿ ಟಿ.ವಿ.ವೆಂಕಟಾಚಲ ಶಾಸ್ತ್ರಿಯವರು [೧]'ಬಟಿದೊರೆ=ಬ[ಉ]ದೊಱೆ ಸಂಭಾವ್ಯ'[೧] ಎಂದಿದ್ದಾರೆ.

ಕೀಚಕನ ಮನದ ಅಂತರಾಳದ ಅನುಭವವನ್ನು ಸುಂದರವಾಗಿ ಬಿಂಬಿಸುವ ಈ ಪದ್ಯದಲ್ಲಿ ಬಟಿದೊರೆ [೨]'ಎಂಬುದೊಂದು ಸುಂದರವಾದ ಪ್ರತಿಮೆ'[೨]. ಬಟಿದೊರೆ ಎಂದರೆ ಬತ್ತಿಹೋದ ನದಿ. ಬಹುಸಂಖ್ಯಾ ಪ್ರತಿಯಾನುಸಾರಿಯಾದ ಪಾಠಕ್ಕಿಂತಲೂ ಅರ್ಥವತ್ತಾದ ಪದಬಳಕೆಯುಳ್ಳ ಪ್ರತಿಗೆ ಆದ್ಯತೆ ನೀಡುವುದು ಉತ್ತಮ ಪಾಠಪರಿಷ್ಕರಣಾಕಾರ್ಯ ವೈಖರಿ. ಆದರೆ ಬಉದೊಱೆ ಪಾಠವೂ ಕೂಡ ಕವಿಶೈಲಿಗೆ ಅನುಗುಣವಾದುದು, ಅರ್ಥವ್ಯತ್ಯಾಸವೇನೂ ಆಗುವುದಿಲ್ಲ ಯಾವ ಪಾಠವನ್ನು ಸ್ವೀಕರಿಸಿದರೂ

ಪದ ಪಾಠಾಂತರ (ಪಾಠ ವ್ಯತ್ಯಾಸ)

ಸುರನಿಕರ ಕಾದಿರಲಿ ಮೇಣೀ
ಧರಣಿ ಕೊಡೆನೆಂದೆನಲಿ [೧]<u>ಹಸ್ತಿನ</u>
<u>ಪುರಕೆ</u>[೧] ಧಾಳಿಯನಿಡುವೆನಮರರ ಮೋರೆಗಳ ತಿವಿದು
ಉರುತರಾಸ್ತ್ರವನೊಯ್ವೆನೆಂದ
ಬ್ಬರಿಸಿ ಮಾರುತಿ ನುಡಿಯೆ ತಮ್ಮನ
ಬರಸೆಳೆದು ಬಿಗಿಯಪ್ಪಿ ಮೈದಡವಿದನು ಭೂಪಾಲ (೧-೧೩)

ಪಾಠಾಂತರ: ಶಕ್ರನಪುರಕೆ – (ಣ,ಪ,ರ) [ತ.ಸು.ಶಾ]

ಅಜ್ಞಾತವಾಸದವೇಳೆಯಲ್ಲಿ ಧರ್ಮರಾಯನು ಅಷ್ಟದಿಕ್ಪಾಲಕರಲ್ಲಿ ತಮ್ಮ ಆಯುಧಗಳನ್ನು ಸಂರಕ್ಷಿಸುವಂತೆ ಬೇಡಿ, ಭೀಮನಿಗೆ ಈ ಅವಧಿಯಲ್ಲಿ ಆಯುಧಗಳನ್ನು ನೀಡಬಾರದೆಂದು ಕೇಳಿಕೊಳ್ಳುತ್ತಾನೆ. ಅಣ್ಣನ ಮಾತಿಗೆ ಕೋಪಗೊಂಡ ಭೀಮ ಈ ಮೇಲಿನ ಮಾತನ್ನು ಹೇಳುತ್ತಾನೆ.

ಇಲ್ಲಿ ಧರ್ಮರಾಯ ಆಯುಧಗಳನ್ನು ಸಂರಕ್ಷಿಸುವಂತೆ ಕೇಳಿಕೊಳ್ಳುವುದು ಅಷ್ಟದಿಕ್ಪಾಲಕರನ್ನಾದ್ದರಿಂದ ಭೀಮ **ಶಕ್ರನಪುರಕೆ** ಧಾಳಿಯಿಟ್ಟು ಅಸ್ತ್ರಗಳನ್ನು ಕೊಂಡೊಯ್ಯಬೇಕಾದದ್ದು ಸಹಜ. ಅಲ್ಲದೆ ಅಮರಾವತಿಗೆ ಧಾಳಿಯಿಡುವ ಭೀಮನಿಗೆ ಹಸ್ತಿನಾಪುರಿ ಯಾವ ಲೆಕ್ಕ ? ಹಾಗಾಗಿ ಇಲ್ಲಿ ತ.ಸು.ಶಾಮರಾಯರು ತೆಗೆದುಕೊಂಡಿರುವ ಶಕ್ರನಪುರಿ ಎಂಬ ಪಾಠ ಸೂಕ್ತವಾಗಿದೆ.

೨) **ಕೇಳು ಜನಮೇಜಯ ಧರಿತ್ರೀ**
ಪಾಲ ⌈ಮುನಿಜನ ಪರಿ ಜನಂಗಳ⌉
ಬೀಳು ಕೊಟ್ಟನು ಭೂಮಿಪತಿ ಬಲವಂದು ಹುತವಹನ
ಮೇಲುಶಕುನದ ಚಾರುನಿನದವ
ನಾಲಿಸುತ ಸೋದರರು ಸಹಿತ ವ
ನಾಲಯವ ಹೊರವಂಟು ಸಾರಿದರೊಂದು ವಟಕುಜವ (೧-೧)

ಪಾಠಾಂತರ : ನೃಪಜನ ಪರಿಜನಂಗಳ (ಬ)
ನೃಪಜನ ಮುನಿಜನಂಗಳ (ಅ, ಈ)
ಮುನಿಜನ ನೃಪಜನಂಗಳ [ಕುವೆಂಪು & ಮಾಸ್ತಿ, ಎ.ವಿ.ಪ್ರಸನ್ನ]
ಧರ್ಮಜಮುನಿ ಜನಂಗಳ [ಶಾಮಾಶಾಸ್ತ್ರಿ]

ಇಲ್ಲಿ ಜೋಯಿಸರ ಪಾಠ ಮುನಿಜನ ಪರಿಜನಂಗಳ ಸೂಕ್ತವಾಗಿದೆ. ಉಳಿದ ಪಾಠಾಂತರಗಳು ಸರಿಹೊಂದುವುದಿಲ್ಲ ಏಕೆಂದರೆ 'ನೃಪಜನಂಗಳ' ಎಂದು ತೆಗೆದುಕೊಂಡಲ್ಲಿ, ಕಾಡಿನಲ್ಲಿ ರಾಜರಿರುವುದಿಲ್ಲ. ಧರ್ಮಜಮುನಿ ಎಂಬುದುಕೂಡಾ ಸೂಕ್ತವಾಗಿಲ್ಲ, ಧರ್ಮಜನೇ ಉಳಿದವರೊಡನೆ ಹೊರಟಿರುತ್ತಾನಲ್ಲದೆ

ಭೂಮಿಪತಿಬಲವಂದು ಎಂಬುದು ಧರ್ಮಜನನ್ನೇ ಸೂಚಿಸುತ್ತದೆ ಆದಕಾರಣ ಜೋಯಿಸರು ಹೇಳಿರುವ ಮುನಿಜನ ಪರಿಜನಂಗಳ ಎಂಬ ಪಾಠ ಸೂಕ್ತವಾಗಿದೆ.

೩) **ಜಗವ ಕೆಡಹಲು ಜಲಜಸಂಭವ**
ಬಿಗಿದ ಬಲೆಯಿವಳಲ್ಲಲೇ ಮೂ
ಜಗದ ಯತಿಗಳನೆಸಲು ಮಸೆದಲಗಲ್ಲಲೇಯೆನುತ
ಮಗುನನಾದನು ಮದನನಂಬುಗ
ಳುಗಿದವೆದೆಯಲಿ ನಟ್ಟ ದೃಷ್ಟಿಯ
ತೆಗೆಯಲರಿಯದೆ ಸೋತು ಕೀಚಕ ಪಾತಕವ ನೆನೆದ (೨-೮)

ಪಾಠಾಂತರ :

ಜಲಜಭವನನು (ಕ,ಮ)

ಕಮಲ ಸಂಭವ (ಖ)

ಜಲಜ ವಿಶಿಖ [ಕುವೆಂಪು & ಮಾಸ್ತಿ, ಎಂ.ವೀ.ಸೀ, ಎ.ವಿ.ಪ್ರಸನ್ನ]

ಜೋಯಿಸರ ಈ ಮೇಲಿನ ಪಾಠ ಶಾಮಶಾಸ್ತ್ರಿ, ತ.ಸು.ಶಾ, ಕೆ.ಎಂ.ಕೃ ರವರ ಸಂಪಾದಿತ ಕೃತಿಯಲ್ಲೂ ಕಂಡುಬರುತ್ತದೆ. ಇಲ್ಲಿ ಜಲಜ (ಕಮಲ) ಸಂಭವ ಎಂದರೆ ಕಮಲದಲ್ಲಿ ಹುಟ್ಟಿರುವ ಬ್ರಹ್ಮ, ಜಲಜ ವಿಶಿಖನೆಂದರೆ ಕಮಲದ ಬಾಣವುಳ್ಳ ಮನ್ಮಥ.

ಬ್ರಹ್ಮನ ಕಾರ್ಯ ಜಗತ್ತನ್ನು ಸೃಷ್ಟಿಸುವುದು ಲಯ ಕರ್ತ ಯಾವತ್ತೂ ಶಿವ, ಆದರೆ ಇಲ್ಲಿ 'ಮೋಹದಬಲೆಯಿಂದ ಜಗತ್ತನ್ನು ಕೆಡುಹಲು ಸೃಷ್ಟಿಸಿರುವುದು' ಎಂದಿರುವುದರಿಂದ ಅದು ಮನ್ಮಥನೇ ಸರಿ. ಹಾಗಾಗಿ ಜಲಜವಿಶಿಖನೆಂಬ ಪಾಠ ಸೂಕ್ತವಾಗಿದೆ.

೪) **ನಿಂದು ನೋಡಿದ ದ್ರೌಪದಿಯ ಮುಖ**
ದಂದವನು ಕಂಡಾಗ ಕೀಚಕ
ನೊಂದನೆನೆ ಮುಖದಿರುಹಲೆಚ್ಚನು ಕಾಮ ಕೈಗೂಡಿ
ಅಂದು ಬೆರಗಾದನು ವಿಳಾಸಿನಿ

ಯಿಂದು <u>ತುಳಿದಳು</u> ಮನವನಿವಳಾ

ರೆಂದು ಭಾವಿಸಿಚಾಚಿದನು ಕದಪಿನಲಿ ಕರತಳವ

(೨-೬)

ಪಾಠಾಂತರ :

ತುಳಿದುದು ಮಾನವಿವಳಾ	(ಅ)
ಯಂದವನು ತಿದೀತಯಿವಳಾ	(ಕ, ಮ)
ತಳಿತುದು ಮನದಲಿವಳಾ	(ಬ)
ತುಳಿದಳು ಮನವದಿವರಾ	(ಯ)
ತುಳಿದಳು ಮನವಯಿವಳಾ	[ಶಾಮಶಾಸ್ತ್ರಿ]
ತಳೆದಳು ಮನವನಿವಳಾ	[ಕು & ಮಾ, ಎ.ವಿ.ಪ್ರಸನ್ನ]

ಮನಸ್ಸನ್ನು ತಳೆದಳು (ಪಡೆದುಬಿಟ್ಟಳು) ಎನ್ನುವ ಪಾಠಕ್ಕಿಂತ ಮನಸ್ಸನ್ನು ತುಳಿದಳು ಎನ್ನುವ ಪಾಠ ಕೀಚಕನ ವ್ಯಥೆಯನ್ನು ಸಮರ್ಪಕವಾಗಿ ತಿಳಿಸುತ್ತದೆ. ಎಲ್.ಎಮ್.ಎಲ್ ಶಾಸ್ತ್ರಿಯವರ 'ವಿರಾಟಪರ್ವ ದೀಪಿಕೆ' ಕುವೆಂಪು ಮಾಸ್ತಿ ಸಂಪಾದಿತ ಆವೃತ್ತಿಯನ್ನು ಆಧರಿಸಿದ್ದರೂ ಅವರು ಜೋಯಿಸರ ಈ ಮೇಲಿನ ಪಾಠವನ್ನೇ ಅಂಗೀಕರಿಸಿದ್ದಾರೆ. ಅ.ರಾ.ಮಿತ್ರ ಅವರು 'ತಳೆದಳು' ಎಂಬ ಪದವನ್ನೇ ಸ್ವೀಕರಿಸಿ ಅದಕ್ಕೆ ಬಂಧಿಸಿದಳು ಎಂಬ ಅರ್ಥ ನೀಡಿದ್ದಾರೆ. ಆದರೆ ಮನಸ್ಸನ್ನು ಸೂರೆಗೊಂಡಳು, ಮನವನು ಕೊಂದಳು, ಎಂಬ ಅರ್ಥದಷ್ಟು ಮನಸ್ಸನ್ನು ಬಂಧಿಸಿದಳು ಎಂಬ ಪದ ಪರಿಣಾಮಕಾರಿಯಾಗಿಲ್ಲ.

೫) **ತಾಱತಂತಃಕರಣ ಕಾಮನ**

ಕೂಱುಗಣೆಗಡಹಾಯ್ದು ಮೈ ಮನ

ದೇಱು ಮುಚ್ಚದು ದುಗುಡ ಬಲಿದುದು ಮುಸುಕು ಮೋಱೆಯಲಿ

ನೀಱ ನಿಜಮಂದಿರಕೆ ಢಗೆ ಮೈ

ದೋಱೆ ಬಂದನು ಮಱುದಿವಸ <u>ತಲೆ</u>

<u>ಮಾಱೆ</u> ಕಂಡನು ದ್ರೌಪದಿಯನರಮನೆಯ ಬಾಗಿಲಲಿ (೨-೧೪)

ಪಾಠಾಂತರ : ತಲೆದೋರೆ (ಎ, ಗ)

ತಲೆದೋರಿ [ಶಾಮಾಶಾಸ್ತ್ರಿ, ತ.ಸು.ಶಾ]

ಕುವೆಂಪು ಮಾಸ್ತಿ, ಕೆ.ಎಂ.ಕೃ ಸಂಪಾದಿತ ಕೃತಿಗಳಲ್ಲಿ ಮೇಲಿನ ಜೋಯಿಸರ ಪಾಠವನ್ನೇ ನೀಡಲಾಗಿದೆ.

ಶಾಮಶಾಸ್ತ್ರಿ, ತ.ಸು.ಶಾ ರವರು ಕೊಟ್ಟಿರುವ 'ತಲೆದೋರಿ' ಎನ್ನುವ ಪಾಠಕ್ಕಿಂತ ಸ್ವಾರ್ಥಕ್ಕಾಗಿ ಯಾವುದೇ ಅನ್ಯಾಯ ಮಾಡಬಲ್ಲವನು ದುಷ್ಟಕೀಚಕ ಎಂದು ಹೇಳುವ ತಲೆಮಾರಿ ಎನ್ನುವ ಜೋಯಿಸರ ಪಾಠವೇ ಸೂಕ್ತವಾಗಿದೆ. 'ತಲೆಮಾರಿ' ಎಂಬ ಪದಕ್ಕೆ ಅ.ರಾ.ಮಿತ್ರ ಅವರು ವೇಷಮರೆಸಿಕೊಂಡು ಎನ್ನುವ ಅರ್ಥನೀಡಿದ್ದಾರೆ. ಆದರೆ ಮುಂದಿನ ಪದ್ಯದಲ್ಲಿ ದೂರದಿಂದಲೇ ಕೀಚಕನನ್ನು ನೋಡಿ ದ್ರೌಪದಿ ಅವನಿಂಗಿತವನ್ನು ಅರಿತು ಕಳವಳಿಸಿ ಹೆಜ್ಜೆ ಹಿಂದಕ್ಕಿಡುತ್ತಾ ಹೋದಳು ಎಂದಿದೆ ಅಲ್ಲದೆ ಮುಂದಿನ ಪದ್ಯಗಳಲ್ಲಿ ಇವರಿಬ್ಬರ ಸಂಭಾಷಣೆಯೂ ಇದೆ. ಹಾಗಾಗಿ ಕೀಚಕ ಮಾರುವೇಷ ಧರಿಸಿ ಬಂದ ಎನ್ನುವುದು ಹೊಂದುವುದಿಲ್ಲ.

೬) **ಅಳುಕಿತಗ್ಗದ ಮಹಿಮೆ ಮುಸುಡಿನ**
ಬೆಳಕು ಕುಂದಿತು ಬಹಳ ಚಿಂತಾ
ಅಲಧಿಯೊಳಗದ್ದಂತೆ ಸೊಂಪಡಗಿತು ನಿಜಾಕಾರ
ಕುಲಶಿರೋಮಣಿ ಹೇಳು ಚಿತ್ತದ
ನೆಲೆಯನೆನೆ ನಸುನಾಚಿ ಮದನನ
ಹಿಳುಕು <u>ಸಮತೆಯ</u> ಸೀಳೆ ಬಳಿಕಿಂತೆಂದನವ ನಗುತ (೨-೩೧)

ಪಾಠಾಂತರ : ಮಮತೆಯ ಸೀಳೆ (ಇ,ಖ,ಯ)

ಸಮತಳಿಸಿತ್ತು (ಈ)

ಮಮತೆಯಸೀಳೆ (ರ)

ಸುಮತಿಯಸೀಳಿ [ಶಾಮಶಾಸ್ತ್ರಿ, ಕು&ಮಾ, ತ.ಸು.ಶಾ, ಕೆ.ಎಂ.ಕೃ]

ಮೇಲಿನ ಈ ಎಲ್ಲ ಪಾಠಾಂತರಗಳಿಗಿಂತ ಜೋಯಿಸರು ನೀಡಿರುವ **ಸಮತೆ** ಎಂಬ ಬಳಕೆ ಸರಿಯಾಗಿದೆ. ಚಿತ್ತದ ಸುಸ್ಥಿತಿ ಎನ್ನುವ ಅರ್ಥಕೊಡುವ ಈ ಪದವನ್ನು ಜೋಯಿಸರು ನೀಡಿರುವುದು ಅರ್ಥವತ್ತಾಗಿದೆ.

ಈ ಪದ್ಯದಲ್ಲಿ ಸುದೇಷ್ಣೆಯು ತನ್ನ ತಮ್ಮನಾದ ಕೀಚಕನನ್ನು 'ನಿನ್ನ ಕಾಂತಿ ತಗ್ಗಿದಂತಿದೆ, ಮುಖದ ಬೆಳಕು ಮುಸುಕಾಗಿದೆ, ಚಿಂತೆಯ ಸಮುದ್ರದಲ್ಲಿ ಮುಳುಗಿದ್ದೀಯೆ ಎಂಬಹಾಗೆ ನಿನ್ನ ಸ್ವರೂಪ ಸೊಂಪನ್ನು ಕಳೆದುಕೊಂಡಿದೆ. ನಿನ್ನ ಮನಸ್ಸಿನಲ್ಲೇನಿದೆ ಹೇಳು' ಎಂದಾಗ ಕೀಚಕ ನಸುನಾಚಿದನು. ಮನ್ಮಥನ ಬಾಣದ ಹಿಳುಕು ಅವನ ವಿವೇಕವನ್ನು (ಸಮತೆಯನ್ನು) ಸೀಳಲು ಅವನು ನುಡಿಯುತ್ತಾನೆ. ಇಲ್ಲಿ ಸಮತೆ ಎಂಬ ಪದವು ಅರ್ಥಪೂರ್ಣವಾಗಿದೆ.

೭) **ಉರಿದುದೊಡಲೊಳು ವೀಳೆಯದ ಕ**
ಪ್ಪುರದ ಹಳುಕುಗಳಮಳಗಂಧದ
ಸರಸರ್ದಮ ಕರಿಕುವರಿದುದು ಪೂಸಿದಂದದಲಿ
[೧]ಹೊರದ ನೀರಿನ[೧] ಪೊಟ್ಟಣವು ದ
ಳ್ಳುರಿ ಯನೀದುದು ಲಲಿತ ಚಂದ್ರಿಕೆ
ವೆರಸಿ ಕರಗಿದ ತವರವಾದುದು ಕೀಚಕನ ದೆಸೆಗೆ (೨-೪೧)

ಪಾಠಾಂತರ : ಹೊರದಹೂವಿ (ಅ)
ತೊರೆದನೀರಿ (ಜ)
ಹೊರವ ನೀರೆ (ಬ, ಯ, ರ)
ಹೊರಳೆನೀರಿನ [ಶಾಮಶಾಸ್ತ್ರಿ, ಕು&ಮಾ, ಎ.ವಿ.ಪ್ರಸನ್ನ]

ಕೀಚಕನಿಗೆ ತಂಪುನೀಡಬೇಕಾದ ಕರ್ಪೂರದ ಚೂರುಗಳು ದೇಹದ ಉರಿಯನ್ನು ಹೆಚ್ಚಿಸಿದವು, ಶ್ರೀಗಂಧದ ಅನುಲೇಪನವೂ ಧಗೆಗೆ ಕಪ್ಪಾಯಿತು. ದೇಹಕ್ಕೆ ಹಚ್ಚಿದ ಗಂಧ ಕಪ್ಪುಬಣ್ಣಪಡೆಯಿತು. ಶೈತ್ಯಕ್ಕಾಗಿ ಬಳಸಿದ ತಣ್ಣೀರು ಬಿಸಿನೀರಾಗಿ ದಳ್ಳುರಿಯ ಅನುಭವ ನೀಡಿತು, ವ್ಯಾಪಪಿಸಿದ ಬೆಳದಿಂಗಳು ಕರಗಿ ತೀವ್ರವಾಗಿ ಹರಡಿದ ತವರವಾಯಿತು ಎಂದೆಲ್ಲ ಕೀಚಕನ ಪರಿಸ್ಥಿತಿಯನ್ನು ಈ ಪದ್ಯದಲ್ಲಿ ವರ್ಣಿಸಲಾಗಿದೆ.

ಈ ವಿವರಣೆಯಲ್ಲಿ 'ಹೊರಳೆ ನೀರಿನ ಪೊಟ್ಟಣವು ದಳ್ಳುರಿಯೊಲಾದುದು' ಎಂಬುದರ ಅರ್ಥಸ್ಫುಟವಾಗಿಲ್ಲ.

ಜೋಯಿಸರು ತೆಗೆದುಕೊಂಡಿರುವ ಹೊರದ ಎಂಬ ಪದ ಹೊರ = ಹೊರೆ = ಪೊರೆ ಎಂದಾಗುವುದರಿಂದ ಬಿಸಿಯದಗೆಯಿಂದ ರಕ್ಷಿಸಲು, ಹೊರೆಯಲು (ಪೊರೆಯಲು) ಎಂಬ ಅರ್ಥ ನೀಡುತ್ತದೆ. ಹಾಗಾಗಿ 'ಹೊರದ ನೀರಿನ ಪೊಟ್ಟಣವು ದಳ್ಳುರಿಯೊಲಾದುದು' ಎನ್ನುವುದೇ ಸೂಕ್ತವಾಗಿದೆ.

೮) **ಕಾದುವೆನು ಮಾಱ್ಕೊಡ್ಡಿನಲಿ ನೀ**
ಚೋದಿಸೆನ್ನಯ ರಥವನಕಟಾ
ಮಾದು ಬಿಡು ಭೀತಿಯನು ಸಾರಥಿಯಾಗು ನೀನೆನಲು
ಆದಿಯಲಿ ನೀನಾವರಾಯರ
ಕಾದಿ ಗೆಲಿದ್ಯೆ ಹುಲು ಬೃಹಂದಳೆ
ಯಾದ ನಿನಗೀ ಕದನ <u>ನಾಟಕ ವಿದ್ಯೆ</u> ವಲ್ಲೆಂದ (೭–೨೫)

ಪಾಠಾಂತರ : ನಾಟ್ಯದ (ಅ,ಈ,ಉ,ಜ,ಪ,ಯ,ರ) [ಶಾಮಾಶಾಸ್ತ್ರಿ, ಎಂ.ವಿ.ಸೀ]

ಎಂ.ವಿ.ಸೀ ಅವರ ಕುಮಾರವ್ಯಾಸಭಾರತ ಸಂಗ್ರಹ ದ ಉಪೋದ್ಘಾತದಲ್ಲಿ ಟಿ.ವಿ.ವೆಂಕಟಾಚಲ ಶಾಸ್ತ್ರಿಅವರು `ನಾಟ್ಯ ನಾಟಕಗಳೆರಡೂ ಒಂದೇ ಅರ್ಥ ನೀಡುವ ಪದ[೩] ಗಳೆಂದು ಸೂಚಿಸಿದ್ದಾರೆ. 'ನಾಟ್ಯ ನಾಟಕಗಳೆರಡೂ ಅಭಿನಯ ಮುಖೇನ ಅರ್ಥಹೊಮ್ಮಿಸುವಂಥದ್ದಾದರೂ ಭಿನ್ನ ರೂಪಗಳು. ಅರ್ಜುನ ನಾಟ್ಯಕಲಿಸುವ ಗುರುವಾಗಿದ್ದರಿಂದ 'ಯುದ್ಧವೆಂಬುದು ನಾಟ್ಯದ ವಿದ್ಯೆ ಅಲ್ಲ' ಎಂದು ಉತ್ತರ ಅರ್ಜುನನಿಗೆ ಕಟಕಿಯಾಡುವುದು ಸೂಕ್ತವಾಗಿದೆ.

ಅ.ರಾ.ಮಿತ್ರಅವರು 'ಯುದ್ಧವೆಂಬ ನಾಟಕ ನಿನ್ನ ವಿದ್ಯೆಯಲ್ಲ' ಎಂದು ಅರ್ಥೈಸಿ ನಾಟಕ ಎಂಬ ಪದವನ್ನೇ ಅಂಗೀಕರಿಸಿದ್ದಾರೆ. ಹೆಂಗೆಳೆಯರ ಮುಂದೆ ಜಂಭಕೊಚ್ಚಿಕೊಳ್ಳುತ್ತಿದ್ದ

ಉತ್ತರಕುಮಾರ 'ಯುದ್ಧ ಏನ್ನುವುದು ನಾಟಕದಂತೆ' ಎಂದು ಹಗುರವಾಗಿ ಮಾತನಾಡಿದನೆಂದೂ ಅರ್ಥೈಸಬಹುದು.

ಕು&ಮಾ, ತ.ಸು.ಶಾ , ಕೆ.ಎಂ.ಕೃ, ಎ.ವಿ.ಪ್ರಸನ್ನ ಅವರ ಕೃತಿಗಳಲ್ಲೂ ನಾಟಕ ಏನ್ನುವ ಪಾಠವನ್ನೇ ತೆಗೆದುಕೊಳ್ಳಲಾಗಿದೆ.

೯) **ಭಂಡರಲಿದರೆ ಗರುವರದ ಮಾ**
ಕೊರ್ಂಡು ನುಡಿವರೆ ಸಾಕಿದೇತಕೆ
ದಿಂಡುದಱಿವೆನು ನಿಮಿಷ ಸೈರಿಸಿನಿಂದು ಕಾದುವರೆ
ಕೊಂಡ ಹಜ್ಜೆಗೆ ಹಂಗಿಗರು ಮಿಗೆ
ದಿಂಡುಗೆಡದಿರಿ ನಿಮ್ಮ ನುಡಿ ತಾ
ಕಂಡುಬಲ್ಲದೆನುತ್ತ ಫಲುಗುಣನೆಚ್ಚನತಿರಥರ (೯–೮)

ಪಾಠಾಂತರಗಳು :	ಗಂಡುಗಿಡುವಿರಿ	[ಶಾಮಶಾಸ್ತ್ರಿ]
	ಗಂಡುಗೆಡದಿರಿ	[ಕು&ಮಾ, ಎ.ವಿ.ಪ್ರಸನ್ನ]
	ದಿಂಡುಗೆಡೆವಿರಿ	[ತ.ಸು.ಶಾ]

ಶಾಮಶಾಸ್ತ್ರಿಗಳು ಅಡಿಟಿಪ್ಪಣಿಯಲ್ಲಿ 'ತೊಂಡುಗೆಡೆದೊಡೆ ಎಂದು ಇರಬೇಕಾದುದಕ್ಕೆ ಕೊಂಡು ಎಂದು ಬಿದ್ದಿರಬಹುದೆಂದು ಊಹಿಸಲವಕಾಶವಿದೆ' ಎಂದುಹೇಳಿರುವುದನ್ನು ಡಿ.ಎಲ್.ಎನ್ ಅವರು ಅಂಗೀಕರಿಸಿ 'ಈ ಊಹೆಸರಿ' ಎಂದು ಈ ಕುರಿತು ಈ ಕೆಳಗಿನ ಹೇಳಿಕೆ ನೀಡಿದ್ದಾರೆ.

'ಕವಿಪಾಠ ಇಲ್ಲಿ 'ತೊಂಡುಗೆಡೆದೊಡೆ' ಎಂಬಂತಿರಬೇಕು. ಉಳಿದ ಎಲ್ಲ ಪಾಠಾಂತರಗಳೂ ಸ್ಖಾಲಿತ್ಯಗಳು ಆಯಾ ಪ್ರತಿಗೆ ವಿಶಿಷ್ಟವಾದವು (ಝ) ಪ್ರತಿಯ ಪಾಠ ಮೂಲದ ಶುದ್ಧ ಪಾಠಕ್ಕೆ ತೀರಾ ಸಮೀಪವಾದದ್ದು. ಈ ಪಾಠ ಮಿಕ್ಕೆಲ್ಲಾ ಪ್ರತಿಗಳಿಂದ (ಝ) ಪ್ರತಿಯನ್ನು ಬೇರ್ಪಡಿಸುತ್ತದೆ ಆದ್ದರಿಂದ ಇದರ ಪಾಠ ವಿಚ್ಛೇದಿತ

ಸ್ಖಾಲಿತ್ಯ, ಆದರೆ ಇದು ಸಂದರ್ಭಕ್ಕೆ ಹೊಂದಿಕೊಳ್ಳುವುದಿಲ್ಲವಾದ್ದರಿಂದ ಪ್ರತಿಕಾರರು ಇದನ್ನು ಹಲವು ರೀತಿಗಳಲ್ಲಿ ತಿದ್ದಿದ್ದಾರೆ.' ೬

ತೊಂಡುಗೆಡೆ ಎಂದರೆ ಅರಚಿಕೋ, ಕೂಗಾಡು ಎಂದೆಲ್ಲಾ ಅರ್ಥಗಳಿವೆ ಇದು ಸಂದರ್ಭಕ್ಕೆ ಹೊಂದಿಕೊಳ್ಳುವುದಿಲ್ಲವೆಂದು ಡಿ.ಎಲ್.ಎನ್ ಅವರೇ ಹೇಳಿದ್ದಾರೆ. ಗಂಡುಗೆಡದಿರಿ ಎಂದರೆ ಹೇಡಿಯಾಗದಿರಿ ಎಂದು ಅರ್ಥ. ಇಲ್ಲಿ ಅರ್ಜುನ ನಿಮ್ಮನ್ನೆಲ್ಲ ಸಾಮೂಹಿಕವಾಗಿ ಕೊಚ್ಚಿಹಾಕುತ್ತೇನೆ ಸ್ವಲ್ಪತಡೆಯಿರಿ ಎಂದು ಹೇಳುತ್ತಾ ಗಂಡುಗೆಡದಿರಿ (ಹೇಡಿಯಾಗದಿರಿ) ಎಂದು ಹೇಳುವುದು ಹೊಂದುವುದಿಲ್ಲ. ಚದುರಿಹೋಗದಿರಿ (ಓಡಿಹೋಗದಿರಿ) ಎಂಬ ಅರ್ಥಬರುವ 'ದಿಂಡುಗೆಡದಿರಿ' ಎನ್ನುವ ಜೋಯಿಸರು ತೆಗೆದುಕೊಂಡಿರುವ ಪದವೇ ಸೂಕ್ತವಾಗಿದೆ

೧೦) **ಬಂದು ಮತ್ಸ್ಯಪುರೋಪಕಂಠದ**
ನಂದನದ ಕೆಲಕಡೆಯಲನಿಬರು
ನಿಂದು ನಾಲುಕುದೆಸೆಯನೀಕ್ಷಿಸಿ ನಿಜನಿವಾಸದಲಿ
ತಂದು ಚರ್ಮದಲಖಿಳಕೈದುವ
ನೊಂದು ಹೆಣನಾಕಾರದಲಿ ಬಿಗಿ
ದೊಂದು ಬನ್ನಿಯ ಮರನ ತುದಿಯಲಿ ಕಟ್ಟಲೇರಿದರು (೧-೧೦)

ಪಾಠಾಂತರ : ಕಟ್ಟಿನೇರಿದರು (ಇ, ಣ, ತ, ದ) [ಎಂ.ವಿ.ಸೀ]
ಕಟ್ಟಿನೇಲಿದರು (ಖ)

ಶಾಮಶಾಸ್ತ್ರಿಗಳು, ಕು&ಮಾ, ತ.ಸು.ಶಾ, ಕೆ.ಎಂ.ಕೃ, ಎ.ವಿ.ಪ್ರಸನ್ನ ಇವರೆಲ್ಲರ ಸಂಪಾದಿತ ಕೃತಿಗಳಲ್ಲೂ ಈ ಮೇಲಿನ ಜೋಯಿಸರ ಪಾಠದಂತೆ ಕಟ್ಟಲೇರಿದರು ಎಂಬ ಪಾಠವೇ ಇದೆ. ಆದರೆ ಎಂ.ವಿ.ಸೀ ಅವರ ಸಂಗ್ರಹದಲ್ಲಿ ಕಟ್ಟನೇರಿದರು ಎಂದು ಕೊಟ್ಟಿದೆ, ಈ ಪಾಠವನ್ನು ವೆಂಕಟಾಚಲಶಾಸ್ತ್ರಿ ಅವರು ಸೂಕ್ತವಾಗಿದೆ ಎಂದಿದ್ದಾರೆ.

ನೇರು = ನೇತುಹಾಕು ; ತೂಗುಹಾಕು ಎಂದುಅರ್ಥ ಬರುವುದರಿಂದ ಶಸ್ತ್ರಾಸ್ತ್ರಗಳನ್ನು ಹೆಣದಾಕಾರದಲ್ಲಿ ಬಿಗಿದು ತೂಗುಹಾಕಿದರು ಎನ್ನುವ ಈ ಅರ್ಥ ತಪ್ಪಲ್ಲವಾದರೂ ಸೂಕ್ತವಲ್ಲ. ಕುಮಾರವ್ಯಾಸ ಮೂಲ ವ್ಯಾಸಭಾರತವನ್ನು ಅನುಸರಿಸಿರುವುದರಿಂದ ಅಲ್ಲಿ ಶವದೊಂದಿಗೆ ಶಸ್ತ್ರಾಸ್ತ್ರಗಳನ್ನು ಕಟ್ಟಿಹಾಕಿದರು ಎಂದಿರುವುದರಿಂದ ಮೇಲಿನ ಜೋಯಿಸರ ಪಾಠವನ್ನೇ ಅಂಗೀಕರಿಸಬಹುದು.

೧೦) **ತಿರುಗಿ ಪೈಸರವೋಗಿ ಪವನಜ**
ಮರಳಿ ತಿವಿದನು ಕೀಚಕನ ಹೇ
ರುರವನೆದೆ ಜಜ್ಜರಿತವಾದುದು ಕಾಣಿದನು ಕರುಳ
ಸರಿದವಾಲಿಗಳೊಲೆದು ಗೋ
ಣುಱುಗಿ ದೊಪ್ಪನೆ ಕಡೆದು ನೆಲನಲಿ
ಹೊರಳಿ ಹರಣವ ಕಳುಹಿ ಕಳೆದುದು ಕಾಯಕೀಚಕನ

(೩-೯೧)

ಪಾಠಾಂತರ : ಗೋಣೊರಗಿ (ಅ,ಇ,ಉ,ಜ,ತ,ಪ,ಯ,ರ)
ಗೋಣ್ಮುರಿದು (ಖ)
ಕಣ್ಣುರುಗಿ [ಕು & ಮಾ, ಎ.ವಿ.ಪ್ರಸನ್ನ]

ಕೀಚಕನನ್ನು ಭೀಮನು ಸಂಹರಿಸುವ ದೃಶ್ಯವನ್ನು ಕವಿ ಈ ಪದ್ಯದಲ್ಲಿ ವರ್ಣಿಸಿದ್ದಾನೆ, ಕೊಟ್ಟಿರುವ ಪಾಠಗಳಲ್ಲಿ ಜೋಯಿಸರು ಆರಿಸಿಕೊಂಡಿರುವ ಗೋಣುರುಗಿ ಸೂಕ್ತವಾಗಿದೆ ಕಣ್ಣುಗುಡ್ಡೆಗಳೊಡೆದವು ಕತ್ತು ವಾಲಿತು ಎಂಬ ಅರ್ಥಸರಿ ಹೊಂದುತ್ತದೆ. ಕು&ಮಾ ಸಂಪಾದಿತ ಕೃತಿ ಯನ್ನು ಆಧಾರವಾಗಿಟ್ಟುಕೊಂಡು ಅರ್ಥವಿವರಣೆ ನೀಡಿರುವ ಹುಬ್ಬಳ್ಳಿ ಕುಮಾರವ್ಯಾಸ ಸೇವಾಸಂಘದ ಪ್ರಕಟಣೆಯಲ್ಲಿ ಈ ಸಾಲಿಗೆ 'ಕಣ್ಣು ಗುಡ್ಡೆಗಳು ಒಡೆದವು, ಒಲೆದಾಡಿ ಕಣ್ಣುಕತ್ತಲಿಸಿ ದೊಪ್ಪನೆ ಬೀಳಲು'[೫೫] ಎಂದು ಅರ್ಥನೀಡಿದೆ. ಅಂತಹ ದೈತ್ಯನ ಸಾವನ್ನು ವರ್ಣಿಸುವಾಗ ಕಣ್ಣುಕತ್ತಲಿಸಿ ಬಿದ್ದ ಎನ್ನುವುದಕ್ಕಿಂತ ಕತ್ತುಮುರಿದು ಬಿದ್ದನು ಎಂಬುದೇ ಹೆಚ್ಚುಸೂಕ್ತ.

೧೧) ಧೈರ್ಯವನು ನರೆಬಲಿದು ಮೇಲಣ
ಕಾರ್ಯಭಾಗೆಯ ನಟೆದು ನೃಪವಂ
ಶಾರ್ಯ ನುಡಿಯದೆ ಸುಮ್ಮನಿದ್ದನು ಧರ್ಮನಂದನನು
ಶೌರ್ಯಕವಸರವಲ್ಲ ನಮಗಿ
ನ್ನಾರ್ಯನಾಜ್ಞೆಯೆನುತ್ತ ಬಹಳ
ಸ್ಥೈರ್ಯರಿದ್ದರು <u>ಭೀಮಸೇನಾದಿಗಳು ದುಗುಡದಲಿ</u> (೩-೧೮)

ಪಾಠಾಂತರ : ಭೀಮಸೇನಾರ್ಜುನರು ದುಗುಡದಲಿ (ಎ)
ಪಾರ್ಥಯಮಳರು ಬಲಿದ ದುಗುಡದಲಿ [ಕು&ಮಾ, ಎ.ವಿ.ಪ್ರಸನ್ನ]

ಜೋಯಿಸರು ಬಳಸಿರುವ ಹೆಚ್ಚಿನ ಪ್ರತಿಗಳಲ್ಲಿ ಭೀಮಸೇನಾದಿಗಳು ಎಂಬ ಪಾಠವೇ ಇರುವುದು ಕಂಡುಬರುತ್ತದೆ. ಶಾಮಶಾಸ್ತ್ರಿಗಳೂ ಜೋಯಿಸರು ನೀಡಿರುವ ಈ ಪಾಠವನ್ನೇ ಸ್ವೀಕರಿಸಿದ್ದಾರೆ. ಎಂ.ವಿ.ಸೀ, ತ.ಸು.ಶಾಮರಾಯರ ಸಂಗ್ರಹಗಳಲ್ಲಿ ಈ ಪದ್ಯವನ್ನು ನೀಡಿಲ್ಲ. ಇಲ್ಲಿ ಭಿನ್ನಪಾಠವಿರುವುದು ಕುವೆಂಪು ಮಾಸ್ತಿ ಹಾಗೂ ಎ.ವಿ.ಪ್ರಸನ್ನರ ಸಂಪಾದಿತ ಕೃತಿಗಳಲ್ಲಿ.

ಕೀಚಕನು ದ್ರೌಪದಿಯನ್ನು ವಿರಾಟನ ಸಭೆಯಲ್ಲಿ ಹಿಂಸಿಸಿದಾಗ ಧರ್ಮರಾಯನು ಯಾವುದೇ ಪ್ರತಿಕ್ರಿಯೆ ತೋರದೆ ನಿಂತಿರುತ್ತಾನೆ. ಅಣ್ಣ ಸುಮ್ಮನಿರುವುದು ನಮಗೆ ಅವಸರಿಸಬೇಡಿ ಎಂಬ ಆಜ್ಞೆಯಂತಿಹುದು ಎಂದು ಭೀಮಸೇನಾದಿಗಳು ದುಃಖದಿಂದ ತಾಳ್ಮೆಯನ್ನು ತಂದುಕೊಂಡರು ಎಂಬುದು ಈ ಪದ್ಯದ ಭಾವಾರ್ಥ.

ಜೋಯಿಸರು ಇಲ್ಲಿ ಬಹುಸಂಖ್ಯಾಪ್ರತಿಯಾನುಸಾರಿಯಾಗಿ ಭೀಮಸೇನಾದಿಗಳು ಎಂಬುದನ್ನು ಸ್ವೀಕರಿಸಿದ್ದಾರೆ. ಆದರೆ ಭೀಮನಿಗೆ ದುಗುಡ, ತಾಳ್ಮೆಯ ಬದಲಿಗೆ ರೋಷ ಉಕ್ಕಿ ಔಡುಕಚ್ಚುವುದನ್ನೂ, ಮನಸ್ಸಿನಲ್ಲಿ ಕೀಚಕನನ್ನೂ ಅವನ ತಮ್ಮಂದಿರನ್ನೂ ಬಳಿಕ ವಿರಾಟನನ್ನೂ ಕೊಲ್ಲುವುದಾಗಿ ಯೋಚಿಸುತ್ತಾ ಮರವೊಂದನ್ನು ಕೀಳಲು ಹವಣಿಸುವುದನ್ನು ಮುಂದಿನಪದ್ಯಗಳಲ್ಲಿ ಕವಿ ವಿವರಿಸಿದ್ದಾನೆ. ಧರ್ಮರಾಯ ಯಾವುದೇ ಪ್ರತಿಕ್ರಿಯೆ ತೋರದಿರುವುದನ್ನೂ, ಮುಂದಿನ ಪದ್ಯಗಳಲ್ಲಿ ಭೀಮನ ಪರಿಸ್ಥಿತಿಯನ್ನೂ

ವಿವರಿಸಿರುವುದರಿಂದ ಈ ಪದ್ಯದಲ್ಲಿ ಉಳಿದ ಮೂವರ ಮನಃ ಸ್ಥಿತಿಯನ್ನು ತಿಳಿಸುವುದು ಉಚಿತ ಹಾಗಾಗಿ 'ಬಹಳ ಸ್ಥೈರ್ಯರಿದ್ದರು ಪಾರ್ಥಯಮಳರು ಬಲಿದ ದುಗುಡದಲಿ' ಎಂಬ ಪಾಠ ಉಚಿತವೆಂದು ತೋರುತ್ತದೆ.

<u>ಊಹಾಪಾಠ</u>

೧) **ಕೇಳು ಜನಮೇಜಯ ಸುಯೋಧನ**
ನಾಳು ಮುತ್ತಿತು ತುರುಗಳನು ಮೇ
ಲಾಳು ಕವಿದುದು ಭೀಷ್ಮ ಕರ್ಣ ದ್ರೋಣ ಮೊದಲಾಗಿ
ಕೋಲ ಸೂಟಿಯ ಸಿವಳಿಗೆ ಗೋ
ಪಾಲ ಪಡೆ ಮುಗ್ಗಿದುದು ಗೋವರ
ಸಾಲ ಹೊಯ್ದರು <u>ಕರ್ಣ</u> ದುಶ್ಯಾಸನನ ಜಯದ್ರಥರು (೬–೧)

ಪಾಠಾಂತರ : ತೊಡರಿ (ಕ,ಖ,ಬ,ಯ,ರ)
ಶಲ್ಯ [ಎಂ.ವಿ.ಸೀ]

ಶಾಮಶಾಸ್ತ್ರಿ, ಕು&ಮಾ, ತ.ಸು.ಶಾ, ಕೆ.ಎಂ.ಕೃ, ಎ.ವಿ.ಪ್ರಸನ್ನ ಈ ಎಲ್ಲರ ಸಂಪಾದಿತ ಕೃತಿಯಲ್ಲಿ ಜೋಯಿಸರು ನೀಡಿರುವ ಕರ್ಣ ಎನ್ನುವ ಪಾಠವನ್ನೇ ಕೊಟ್ಟಿರುತ್ತಾರೆ.

ಎಂ.ವಿ.ಸೀ ಅವರು ತೆಗೆದುಕೊಂಡಿರುವ 'ಶಲ್ಯ' ಎನ್ನುವ ಪಾಠವು ಸರಿಯಾದುದಲ್ಲ ಎಂದು ಅದೇ ಗ್ರಂಥದ ಉಪೋದ್ಘಾತದಲ್ಲಿ ಟಿ.ವಿ.ವೆಂಕಟಾಚಲಶಾಸ್ತ್ರಿ ಅವರು ತಿಳಿಸುತ್ತಾ ಈ ಪದ್ಯದ ಮೂರನೇ ಸಾಲಿನಲ್ಲಿ ಕರ್ಣ ಎಂದು ಒಮ್ಮೆ ಬಂದಿರುವುದರಿಂದ ಈ ಕಡೆಯ ಸಾಲಿನ ಕರ್ಣ ಎನ್ನುವ ಪಾಠಕ್ಕೆ ಶಲ್ಯ ಎಂದು ತೆಗೆದುಕೊಂಡಿರಬಹುದು ಆದರೆ ಈ ಬದಲಾವಣೆ ಅನಾವಶ್ಯಕ ಎಂದಿದ್ದಾರೆ.

ಜೋಯಿಸರು (ಕ,ಖ,ಬ,ಯ,ರ) ಪ್ರತಿಗಳಲ್ಲಿ ನೀಡಿರುವ ತೊಡರಿ ಪಾಠ ಗಮನಿಸಿ ಸೂಕ್ತವಲ್ಲವೆಂದು ಬಿಟ್ಟಿದ್ದಾರೆ, ೩ ಹಾಗೂ ೬ನೇ ಸಾಲಿನಲ್ಲಿ ಪುನರುಕ್ತಿ ಆಗಿರುವ

ಕರ್ಣ ಎನ್ನುವ ಪದಕ್ಕೆ ಊಹಾ ಪಾಠ ಅನವಶ್ಯಕವೆಂದು ಹಾಗೆಯೇ ಉಳಿಸಿದ್ದಾರೆ. ಅಲ್ಲದೆ ಮೂಲಭಾರತದಲ್ಲು 'ಗೋಗ್ರಹಣ'ದಲ್ಲಿ ಶಲ್ಯ ಪಾಲ್ಗೊಂಡಿರುವುದನ್ನು ಹೇಳಿಲ್ಲ.

ಛಂದೋವಿಚಾರ

೨) **ರಾಯ ಧರ್ಮಜ ಬಾಳುಗೆನುತ ನಿ**
ಜಾಯುಧದ ಗುರುವಿಂಗೆರಗಿ ಸುರ
ರಾಯ ನಂದನನೊಲವಿನಲಿ ಗಾಂಡಿವವ ಜೇವಡೆಯೆ
ರಾಯ ಕುವರನ ಸ್ರತತನದ ವಿ
ಡಾಯಿಯಚೆಯಲು ಬಹುದೆನುತ ಸಮ
ರಾಯತಾಸ್ತ್ರನು ಪಾರ್ಥ ಮೈದೋಚಿದನು ಪರಬಲಕೆ **(೬–೪೮)**

ಪಾಠಾಂತರ : ಗಾಂಡೀವ (ಕ)
ಗಾಂಡೀವವ [ಕು&ಮಾ, ಎಂವಿಸೀ]

ತ.ಸು.ಶಾ ಹಾಗೂ ಶಾಮಶಾಸ್ತ್ರಿಗಳು ಗಾಂಡಿವ ಎನ್ನುವ ಪಾಠವನ್ನೇ ನೀಡಿದ್ದಾರೆ. ಕು&ಮಾ ಅವರ ಸಂಪಾದಿತ ಪ್ರತಿಯಲ್ಲಿ ಕೊಟ್ಟಿರುವ ಗಾಂಡೀವ ಎನ್ನುವ ಪಾಠ ಸರಿಯಾಗಿದ್ದರೂ ಛಂದಸ್ಸಿಗೆ ಹೊಂದುವುದಿಲ್ಲ. 'ಗಾಂಡೀವ ಹಾಗೂ ಗಾಂಡಿವ ಎರಡೂ ಸಾಧುರೂಪಗಳೇ'[೬] ಎಂದು ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು ಹೇಳಿದ್ದಾರೆ.

ಛಂದಸ್ಸಿಗೆ ಹೊಂದಲೆದು ಹಾಗೂ ಗಾಂಡೀವ ಎನ್ನುವ ಶುದ್ಧಪದ ಉಳಿಸಿಕೊಳ್ಳಲು ಎಂ.ವಿ.ಸೀ ಅವರು ಗಾಂಡೀವದ ಮುಂದಿನ ಪದ ಜೇವಡೆ ಎಂದಿರುವುದನ್ನು ಮಿಡಿದು ಎಂದು ಬದಲಿಸಿಕೊಂಡು 'ಗಾಂಡೀವ[ವನು ಮಿಡಿದು]' ಎಂದು ನೀಡಿದ್ದಾರೆ.

ಜೋಯಿಸರು ನೀಡಿರುವಂತೆ ಗಾಂಡಿವ ಎಂಬ ಪಾಠ ತೆಗೆದುಕೊಂಡಿದ್ದಲ್ಲಿ ಊಹಾಪಾಠದ ಸಮಸ್ಯೆಯೇ ಇರುತ್ತಿರಲಿಲ್ಲ.

ಜೋಯಿಸರ ಪಾಠ ಯಾವುದೇ ಊಹಾಪಾಠ/ಸಮಸ್ಯೆಗಳಿಲ್ಲದೆ ಛಂದಸ್ಸಿಗೆ ಸೂಕ್ತವಾಗಿ ಹೊಂದಿಕೊಂಡಿರುವುದನ್ನು ಗಮನಿಸಬಹುದು.

- U - U U U U U U U - U U U - U U -
ರಾಯ ನಂದನ । ನೊಲ ವಿ । ನಲಿ **ಗಾಂ** । **ಡಿವವ** । ಜೇವಡೆ । ಯೆ

ಇಲ್ಲಿ ಗಾಂಡೀವವ ಎಂದು ತೆಗೆದು ಕೊಂಡಿದ್ದಲ್ಲಿ ೩ ಮಾತ್ರೆ ಬರುವೆಡೆ ಡೀವವ ಎಂದಾಗೆ ೪ ಮಾತ್ರೆ ಬರುತ್ತದೆ. ಇದು ಭಾಮಿನಿ ಷಟ್ಪದಿಯ ನಿಯಮಕ್ಕೆ

ಹೊಂದುವುದಿಲ್ಲ. ೩,೪,೩,೪ ಮಾತ್ರೆಯ ಗಣಗಳು ೧,೨,೪,೫ನೇ ಸಾಲಿನಲ್ಲೂ ೩,೪,೩,೪,೩,೪,೧ಗುರು ೩ ಹಾಗೂ ೬ನೇ ಸಾಲಿನಲ್ಲಿ ಬರುವುದು ಭಾಮಿನಿಷಟ್ಪದಿಯ ಮುಖ್ಯಲಕ್ಷಣಗಳಲ್ಲೊಂದು.

ವೆಂಕಟಾಚಲಶಾಸ್ತ್ರಿಗಳು ಹೇಳಿರುವಂತೆ ಗಾಂಡೀವ ಗಾಂಡಿವ ಎರಡೂ ಸಾಧುರೂಪಗಳೇ. ಕುಮಾರವ್ಯಾಸ ಅನೇಕಕಡೆಗಳಲ್ಲಿ ದೀರ್ಘಗಳನ್ನು ಹ್ರಸ್ವಮಾಡಿ ಬಳಸಿದ್ದಾನೆ, ಉದಾಹರಣೆಗೆ ವೀರನಾರಯಣ (ನಾರಾಯಣ) ಎಂಬ ಪಾಠವನ್ನು ಗಮನಿಸಬಹುದು.

ಜೋಯಿಸರು ಕೊಟ್ಟಿರುವ ಪಾಠ ಸಮಂಜಸವಾಗಿದೆ, ಎಂ.ವಿ.ಸೀ ಅವರ ಊಹಾಪಾಠ ಅನಗತ್ಯ ಎನಿಸುತ್ತದೆ. ಹಸ್ತಪ್ರತಿಗಳಲ್ಲಿ ಸಿಗುವ ಪಾಠಸೂಕ್ತವಿದ್ದಾಗ ಊಹಾಪಾಠ ಅಗತ್ಯ ಎನಿಸುವುದಿಲ್ಲ.

೨) ಅರಿದು ನೆತ್ತರುಗಾಣದಲಗಿದು
ನೆಱೆ ಬಿಗಿಯೆ ಮೈಬಾಸುಳಾಗದ

ಹುರಿ ಬಲಿದ ನೇಣ್ ಸೊಕ್ಕಿದರೆ ಹೊಗೆ ಮಸಗದಡಿಗಿಚ್ಚು
ಅರರೆ ಕಂಗಳ ಧಾರೆಯಾವನ
ಕೊರಳ ಕೊಯ್ಯದ ದಾವನಱಿತವ
ಹುರುಳುಗೆಡಿಸದಿ[೧] ದಾವ ನಿಲುವನು[೧] ಶಿವಶಿವಾ'ಯೆಂದ (೩-೧೦)

ಪಾಠಾಂತರ :	ಸಿದಡಾವ ನಿಲುವನು	(ಅ,ಉ,ಯ)
	ಸಿದಿದಾರನೆನುತಡಿ	(ಎ)
	ಸಿದಡಾವನುಡಿವನು	(ಕ)
	ಸದದಾವ ನುಲುವನು	(ಜ,ಯ)

ಈ ಮೇಲಿನ ಪದ್ಯದಲ್ಲಿ ದ್ರೌಪದಿಯನ್ನು ಕಂಡಾಗ ಕೀಚಕನಿಗಾದ ಸ್ಥಿತಿಯನ್ನು ವರ್ಣಿಸಿದೆ. ಅವಳ ಸೌಂದರ್ಯ, ವಿವೇಕವನ್ನು ನಾಶಗೊಳಿಸುವಂತಿದೆ ಎನ್ನುವುದು ಇದರ ಭಾವ.

ಜೋಯಿಸರು ಹಸ್ತಪ್ರತಿಯ ಎಲ್ಲ ಪಾಠಾಂತರಗಳಲ್ಲಿ 'ಆವ ನಿಲುವನು' ಎನ್ನುವ ಪಾಠವನ್ನು ಸೂಕ್ತವೆಂದು ಆರಿಸಿಕೊಂಡಿದ್ದಾರೆ. ಆದರೆ ಎಲ್.ಎಮ್.ಎಲ್.ಶಾಸ್ತ್ರಿಗಳು ತಮ್ಮ ವಿರಾಟಪರ್ವ ದೀಪಿಕೆಯಲ್ಲಿ 'ಅವ ನುಡಿವನು'[೨] ಎಂಬ ಪಾಠ ಸೂಕ್ತ ಎಂದು ಸೂಚಿಸಿದ್ದಾರಾದರೂ ಇವರು ಕೊಟ್ಟಿರುವ ಪಾಠದಲ್ಲಿ ಅ ಹ್ರಸ್ವ ವಾಗಿ ಒಂದು ಮಾತ್ರೆ ಕಡಿಮೆಯಾಗುವುದರಿಂದ ಛಂದಸ್ಸಿಗೆ ಹೊಂದುವುದಿಲ್ಲ. ಅಲ್ಲದೆ ನಿಲುವು = ಧೃಢತೆ ಎಂಬ ಅರ್ಥವೇ ಸೂಕ್ತವಾಗಿದೆ. ಹಿಂದಿನ ಪದ್ಯಗಳಲ್ಲಿ ದ್ರೌಪದಿಯವರ್ಣನೆ, ಕೀಚಕನವೇದನೆಗಳನ್ನು ವರ್ಣಿಸುತ್ತಾ ಸಾಂಪ್ರದಾಯಿಕ ಕವಿಸಮಯದಲ್ಲಿ ಮುಳುಗಿದ್ದ ಕವಿ ಈ ಪದ್ಯದಲ್ಲಿ ತನ್ನ ಪ್ರತಿಭೆಯಿಂದ ಮಿಂಚಿದ್ದಾನೆ. ದ್ರೌಪದಿಯ ಸೌಂದರ್ಯ ಎಂಥವರನ್ನೂ ವಿವೇಕಶೂನ್ಯರನ್ನಾಗಿ ಮಾಡುತ್ತದೆಂದು ತಿಳಿಸುವ ಈ ಸಾಲನ್ನು ಕುರಿತು ಅ.ರಾ.ಮಿತ್ರ ಅವರು 'ಕೊಲ್ಲುವ ಸೌಂದರ್ಯವೆಂದರೆ ಇದೇ ಅಲ್ಲವೇ ?' ಎಂಬ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

೩)　**ವರ ದಿಗಂಗನೆಯಿಟ್ಟ ಚಂದನ**
ತಿ ಲ ಕವೋ ಮನುಮಥನ ರಾಣೀಯ
ಕರದಲಹ ಕನ್ನಡಿಯೊ ಮದನನ ಬಿರುದಿನೊಡ್ಡಣವೊ
ಸುರತ ವಿರಹಿಯ ಸುಡುವ ಕೆಂಡದ
ಹೊರಳಿಯೋ ಹೇಳೆನಲು ಮಿಗೆ ಹಿಮ
ಕರನು ಜನಿಸಿದ ರಜನಿ ಮಧ್ಯದೊಳವನಿ ತಳತಳಿಸೆ　　**(ಕು&ಮಾ ವಿ.ಪ.೨–೫೦)**

ಕುವೆಂಪು & ಮಾಸ್ತಿಯವರ ಸಂಪಾದಿತ ಆವೃತ್ತಿಯಲ್ಲಿರುವ ಈ ಪದ್ಯ ಎ.ವಿ.ಪ್ರಸನ್ನರವರ ಸಂಪಾದಿತ ಕೃತಿಯಲ್ಲೂ ೨ನೆಯ ಸಂಧಿ ೫೦ನೆಯ ಪದ್ಯವಾಗಿ ದೊರೆಯುತ್ತದೆ. ಈ ಪದ್ಯದ ಎರಡನೇ ಸಾಲಿನಲ್ಲಿ 'ರ' ಕಾರದ ಬದಲಿಗೆ 'ಲ' ಬಂದಿರುವುದರಿಂದ ಷಟ್ಪದಿ ಛಂದಸ್ಸಿನ ಲಕ್ಷಣಗಳಲ್ಲೊಂದಾದ ಆದಿಪ್ರಾಸದ ನಿಯಮವನ್ನು ಇಲ್ಲಿ ಮೀರಿದೆ.

ಈ ಪದ್ಯವನ್ನು ಜೋಯಿಸರು ಸಂಪಾದಿಸಿರುವ ಆವೃತ್ತಿಯಲ್ಲಿ ತೆಗೆದುಕೊಂಡಿಲ್ಲವಾದರೂ ಪ್ರಕ್ಷಿಪ್ತಪದ್ಯಗಳೊಂದಿಗೆ ಇದೇ ಭಾವಾರ್ಥವಿರುವ ಈ ಕೆಳಗಿನ ಪದ್ಯವನ್ನು ನೀಡಿದ್ದಾರೆ. ಈ ಪದ್ಯ ಮೇಲೆ ತಿಳಿಸಿರುವ ಛಂದೋ ದೋಷದಿಂದ ಮುಕ್ತವಾಗಿದೆ.

ಸಲೆದಿಗಂಗನೆಯಿಟ್ಟ ಚಂದನ
ತಿಲಕವೋ ಮನುಮಥನ ರಾಣಿಯ
ಚೆಲುವ ಕೈಗನ್ನಡಿಯೊ ಮದನನ ಬಿರುದಿನಡ್ಡಣೆಯೊ
ತಳಿತ ವಿರಹಿಯ ಸುಡುವ ಕೆಂಡದ
ಹೊಳಹೊ ಬೆಸಗೊಳಲೇನು ರಜನೀ
ವಳಯದಲಿ ಶಶಿಯುದಯವಾದನು ಜಗವ ಪ್ರಜ್ವಲಿಸಿ.

ಚಂದ್ರೋದಯವನ್ನೂ ಜೊತೆಗೆ ವಿರಹಿಯನ್ನು ವರ್ಣಿಸುವ ಸಾಂಪ್ರದಾಯಿಕ ಕವಿಸಮಯುದ ಇದೇ ಪದ್ಯವನ್ನು ಶಾಮಶಾಸ್ತ್ರಿಗಳು ೨ನೇ ಸಂಧಿ ೫೩ನೆಯ ಪದ್ಯವಾಗಿ ಕೊಟ್ಟಿದ್ದಾರೆ.

ಪದ್ಯಪಾಠಾಂತರ

೧) **ಆವಗರಳವ ಕುಡಿವೆನೋ ಮೇ**
ಣಾವ ಬೆಟ್ಟವನಡರಿ ಬೀಳ್ವೆನೊ
ಆವ ಮಡುವನು ಹೊಗುವೆನೋ ಹಾಸರೆಯ ಗುಂಪಿನಲಿ
ಆವ ಕುಂಡವ ಹಾಯ್ವೆನೋ ಮೇ
ಣಾವ ಪಾವಕನೊಳಗೆ ಬೀಳ್ವೆನೊ
ಸಾವು ಸಮನಿಸದೆನಗೆನುತ ಮರುಗಿದಳು ಕಮಲಾಕ್ಷಿ (೩-೬೧)

ಜೋಯಿಸರ ಈ ಪದ್ಯವು ಶಾಮಾಶಾಸ್ತ್ರಿಗಳ ಕೃತಿಯಲ್ಲಿ ೩ನೇ ಸಂಧಿ ೫೯ನೇ ಪದ್ಯವಾಗಿ ಕೊಟ್ಟಿದ್ದಾರೆ ಹಾಗೂ ಇದೇ ಸಂಧಿ ೩೨ನೇ ಪದ್ಯವಾಗಿ ಇದೇ ಭಾವಾರ್ಥವಿರುವ ಮತ್ತೊಂದು ಪದ್ಯ ಈ ಕೆಳಗಿನಂತಿದೆ

ಆವ ಕೊಂಡವ ಹಾಯ್ವೆನೋ ಮೇ
ಣಾವ ಬೆಟ್ಟವನಡಲಿ ಬೀಳುವೆ
ನಾವ ಮಡುವನು ಹೋಗುವೆನೋ ಹಾನರೆಯ ಗುಂಪಿನಲಿ
ಆವ ಗರಳವ ಕುಡಿವೆ ಮೇಣಿ
ನ್ನಾವ ಪಾತಕದೊಳಗೆ ಬೀಳುವೆ
ಸಾವು ಸಮನಿಸದೆಂದು ದ್ರೌಪದಿ ಹಲವು ಹಲುಬಿದಳು
[ಶಾಮಶಾಸ್ತ್ರಿ] (೩-೩೨)

ಈ ಎರಡನೇ ಪದ್ಯವು ಮೇಲಿನ ಪದ್ಯದ ಪುನರುಕ್ತಿಯಂತಿರುವುದರಿಂದ ಅಲ್ಲದೆ ಪ್ರಕ್ಷಿಪ್ತವೆಂದು ತೋರಿದ್ದರಿಂದ ಜೋಯಿಸರು ಹೆಚ್ಚಿನಪದ್ಯಗಳೊಂದಿಗೆ ಪರಿಶಿಷ್ಟ-೧ ರಲ್ಲಿ ಕೊಟ್ಟಿದ್ದಾರೆ. ಕು&ಮಾ ಸಂಪಾದಿತ ಕೃತಿಯಲ್ಲೂ ಈ ಪುನರಾವರ್ತಿತ ಪದ್ಯ ಕೊಟ್ಟಿಲ್ಲ. " ಈ ಪದ್ಯವನ್ನು ಕುಮಾರವ್ಯಾಸನು ಕಥೆಯ ಯಾವ ಸಂದರ್ಭದಲ್ಲಿ ಹೇಳಿದ್ದನೆನ್ನುವುದು ನಿರ್ಣಯವಾದ ಹೊರತು ಏನನ್ನೂ ಹೇಳುವಹಾಗಿಲ್ಲ ಪುನರುಕ್ತಿಯ ಅಧಿಕ ಪಾಠವೆಂಬುದಂತೂ ಸ್ಪಷ್ಟ." ಎಂದು ಡಿ.ಎಲ್.ನರಸಿಂಹಾಚಾರ್ಯರು ಹೇಳಿದ್ದಾರೆ

೨) **ವನಿಪನ ಸಿಂಹಾಸನವ ನೇ**
ರುವ ಸಗರ್ವಿತರಾರು ನೋಡಿದ
ಡೆವೆಗಳುರಿಯವೆ ನೂಕೆನುತ ಕಂಚುಕಿಗಳೈತಂದು
ಇವರ ವಿಮಳಕ್ಷಾತ್ರ ತೇಜವ
ನವಗಡಿಸಲಂಜಿದರು ಹರಿತಂ
ದವದಿರೆಬ್ಬಿಸಿ ಬಿನ್ನವಿಸಿದರು ಮತ್ಸ್ಯಭೂಪತಿಗೆ (೧೧-೭)

ಜೋಯಿಸರು ಸಂಪಾದಿಸಿದ ಪ್ರತಿಯಲ್ಲಿನ ಈ ಪದ್ಯವನ್ನು ಶಾಮಶಾಸ್ತ್ರಿ ಕು&ಮಾ, ತ.ಸು.ಶಾ ರ ಕೃತಿಗಳಲ್ಲೂ ಕಾಣಸಿಗುತ್ತದೆ. ಆದರೆ ಇದೇ ಪದ್ಯ (ಖ) ಪ್ರತಿಯಲ್ಲಿ

ಅರಸಿಯಿರೆ ವಾಮದಲಿ ವಿವಿಧಾ
ಭರಣರಶ್ಮಿಯ ಝಳವ ಹೊದರಿನ
ಹೊರಳಿಯಲಿ ಕಣ್ಣಾಲಿ ಕೋರೈಸಿತ್ತು ಪರಿಜನದ
ಧರಣಿಪನ ಸಿಂಹಾಸನದ ಮೇ
ಲಿರುವ ಗರ್ವಿತರಾರು ನೂಕಿರೆ
ಯೆನುತಲೈದಿದು ಮುಂದೆ ಕಂಚುಕಿನಿಕರವೊಗ್ಗಿನಲಿ

ಎಂದು ನೀಡಲಾಗಿದೆ, ಆದರೆ ಜೋಯಿಸರು ಹೆಚ್ಚಿನ ಹಸ್ತಪ್ರತಿಗಳಲ್ಲಿ ಕಾಣಸಿಗುವ ಮೊದಲನೇ ಪದ್ಯವನ್ನು ಮಾತ್ರ ಅಂಗೀಕರಿಸಿ ಕೇವಲ (ಖ) ಪ್ರತಿಯ ಈ ಎರಡನೇ ಪದ್ಯವನ್ನು ಪ್ರಕ್ಷಿಪ್ತವೆಂದು ಪರಿಗಣಿಸಿದ್ದಾರೆ.

೩) **ಕಡಲು ಕದಡಲು ರಾಯದಳದಲಿ**
ನಡೆದು ಕೌರವ ನೃಪತಿ ಗೋವರ
ಕೆಡಹಿ ತುರುಗಳ ಹಿಡಿದನಂದು ವಿರಾಟನಗರಿಯಲಿ

(೪ನೇ ಸಂಧಿ ಸೂಚನಾ ಪದ್ಯ)

ಜೋಯಿಸರ ಸಂಪಾದಿತ ಕೃತಿಯಲ್ಲಿ ಸಿಗುವ ಈ ಸೂಚನಾ ಪದ್ಯವು ಶಾಮಶಾಸ್ತ್ರಿ, ಕು&ಮಾ, ಕೆ.ಎಂ.ಕೃ, ಇವರಾರ ಕೃತಿಗಳಲ್ಲೂ ಸಿಗುವುದಿಲ್ಲ.

ಜೋಯಿಸರ ೪ನೇ ಹಾಗೂ ೫ನೇ ಸಂಧಿಗಳೆರಡರಲ್ಲಿ ಸಂಪಾದಿತವಾಗಿರುವ ಪದ್ಯಗಳು ಶಾಮಶಾಸ್ತ್ರಿ, ಕು&ಮಾ, ಅವರ ಸಂಪಾದಿತ ಕೃತಿಗಳಲ್ಲಿ ಒಂದೇ ಸಂಧಿಯಲ್ಲಿ ಸಿಗುವುದು ಈ ಮೇಲಿನ ಸೂಚನಾ ಪದ್ಯ ಸಿಗದಿರಲು ಕಾರಣವಾಗಿದೆ.

೪) ಶಾಮಾಶಾಸ್ತ್ರಿ ಹಾಗೂ ಎ.ವಿ.ಪ್ರಸನ್ನ ರ ಸಂಪಾದಿತ ಕೃತಿಗಳಲ್ಲಿ ಕೃಷ್ಣಜೋಯಿಸರು, ಕು&ಮಾ ಸಂಪಾದಿತ ಮುದ್ರಣಗಳಲ್ಲಿಲ್ಲದ ‘ಮಲ್ಲಬಳಗವ ವಲಲ

ಕೊಂದನು ಮತ್ಸನಗರಿಯಲಿ' ಎನ್ನುವ ಪದ್ಯಭಾಗ ಸಿಗುತ್ತದೆ. ಈ ಸಂಧಿಯ ಸೂಚನಾ ಪದ್ಯ ಈ ಪ್ರಕಾರವಾಗಿದೆ.

ಅರಸು ಕುರುಪತಿ ಪಾಂಡು ನಂದನ
ರರಿಕೆ ಯಾಗಲು ಮಲ್ಲಬಳಗವ
ಕರೆಸಿಕಳುಹಲು ವಲಲ ಕೊಂದನು ಮತ್ಸ್ಯನಗರಿಯಲಿ

ಈ ಸಂಧಿಯಲ್ಲಿರುವ ಪದ್ಯಗಳನ್ನು ಜೋಯಿಸರು ಪ್ರಕ್ಷೇಪಗಳೆಂದು ಪರಿಗಣಿಸಿ ಪರಿಶಿಷ್ಟದಲ್ಲಿ ಕೊಟ್ಟಿರುತ್ತಾರೆ ಆದರೆ ಸೂಚನಾ ಪದ್ಯಮಾತ್ರ ಭಿನ್ನವಾಗಿ ಈ ರೀತಿ ಇದೆ.

ತೋಳ ಮುರಿದನು ಭೀಮಸೆಂದಾ
ಮೇಲುವಾರ್ತೆಯ ಕೇಳಿ ಮತ್ಸ್ಯನ
ಆಲಯಕೆ ಕಳುಹಿದನು ಮಲ್ಲನ ಕೌರವರಾಯ

ಈ ಪದ್ಯದಲ್ಲಿ ತೋಳಮುರಿದನು ಭೀಮ ಎಂದಿರುವುದರಿಂದ ಮಲ್ಲನನ್ನು ಕೌರವನು ವಿರಾಟನಗರಿಗೆ ಕಳಿಸುವುದಕ್ಕಿಂತ ಮುಂಚಿತವಾಗಿಯೇ ಭೀಮ ಬೇರೆ ಕೆಲವರೊಂದಿಗೆ ಕಾದಾಡಿದ್ದಿರಬೇಕು. ಪ್ರಕ್ಷಿಪ್ತವಾದರೂ ಈ ಸೂಚನಾಪದ್ಯ ಅಸ್ಪಷ್ಟ.

೫) ಜೋಯಿಸರು ಕೆಲವು ಪದ್ಯಗಳನ್ನು ಪ್ರಕ್ಷಿಪ್ತವೆಂದು ಪರಿಗಣಿಸಿ ಅವುಗಳನ್ನು ಪರಿಶಿಷ್ಟ-೧ರಲ್ಲಿ ನೀಡಿದ್ದಾರೆ. ಈ ಪ್ರಕಾರವಾದ ಪ್ರಕ್ಷಿಪ್ತ ಪದ್ಯಗಳಲ್ಲೂ ಪಾಠಾಂತರಗಳಿರುವುದನ್ನು, ಆ ಕೆಲವು ಪದ್ಯಗಳನ್ನು ಇತರ ಸಂಪಾದಕರು ತಮ್ಮ ಸಂಪಾದನೆಯಲ್ಲಿ ಬಳಸಿಕೊಂಡಿರುವುದನ್ನು ಕಾಣಬಹುದು.

ಪರಿಮಳದ ಸುಳಿವಾಲವಟ್ಟದೊ
ಳಿರದೆ ಬೀಸುವ ಗಂಧ ಕರ್ಪೂರ
ದುರುಳಿ ಸೀದುವು ಕೀಚಕನ ಕಾಮಾಗ್ನಿತಾಪದಲಿ
ದುರುಳ ಪತಿವ್ರತೆಗಳುಪಿಸವ ನಿಜ
ಹರಣದಾಸೆಯ ಮರದು ಪಾತಕಿ
ಹೊರಳುತಿರ್ದನು ಚಂದ್ರಕಾಂತೆಯ ಶಿಲೆಯ ಮಧ್ಯದಲಿ

(ಪರಿಶಿಷ್ಟ-೧ ಪುಟ-೩೧೨)

ಜೋಯಿಸರು ಪ್ರಕ್ಷಿಪ್ತವೆಂದು ಪರಿಗಣಿಸಿರುವ ಈ ಮೇಲಿನ ಪದ್ಯವು (ಅ,ಆ,ಈ,ಪ,ಯ, ರ) ಪ್ರತಿಗಳಲ್ಲಿ ೨ನೇ ಸಂಧಿ ೩೫ನೇ ಪದ್ಯವಾದನಂತರ ಸಿಗುತ್ತದೆ. ಈ ಪದ್ಯವನ್ನು ಶಾಮಾಶಾಸ್ತ್ರಿ ಹಾಗೂ ಕು & ಮಾ ಸಂಪಾದಿತ ಕೃತಿಗಳಲ್ಲೂ ೨ನೇ ಸಂಧಿಯಲ್ಲಿ ಕ್ರಮವಾಗಿ ೫೮ ಹಾಗೂ ೫೫ನೇ ಪದ್ಯವಾಗಿ ನೀಡಲಾಗಿದೆ.

ಈ ಮೇಲಿನ ಪದ್ಯವು ಅದೇಭಾವಾರ್ಥದೊಂದಿಗೆ ಆದರೆ ಭಿನ್ನವಾಗಿ (ಗ,ಬ) ಹಸ್ತಪ್ರತಿಗಳಲ್ಲಿ ಸಿಗುತ್ತದೆ. ಈ ಪದ್ಯವನ್ನೂ ಜೋಯಿಸರು ಪ್ರಕ್ಷಿಪ್ತ ಪದ್ಯಗಳ ಸಾಲಿಗೇ ಸೇರಿಸಿದ್ದಾರೆ.

ಕರವ ನೇಮಿಸಿದಾಲವಟ್ಟದ
ಯಿರವ ಹೇಳಿದನಾ ಸುಗಂಧದ
ಪರಿಮಳದ ಘಾಳಿಗಳು ದಳ್ಳುರಿಯಾಯ್ತುನಿಮಿಷದಲಿ
ವರ ಪತಿವ್ರತೆಗಳುಪಿದವ ನೀ
ಹರಣದಾಸೆಯ ಮರದು ಪಾತಕಿ
ಹೊರಳುತರ್ದನು ಚಂದ್ರಕಾಂತದ ಮಣಿಯ ಮಂಚದಲಿ

(ಪರಿಶಿಷ್ಟ-೧, ಪುಟ ೩೧೨)

ಸಂಧಿ ವ್ಯತ್ಯಾಸ

ಶಾಮಶಾಸ್ತ್ರಿ ಎ.ವಿ.ಪ್ರಸನ್ನ ರ ಸಂಪಾದಿತ ಕೃತಿ ಹಾಗೂ ಕೆ.ಎಂ.ಕೃ ರವರ ಸಂಗ್ರಹಗಳಲ್ಲಿ ಮಲ್ಲಬಳಗವ ವಲಲ ಕೊಂದನು ಮತ್ಸ್ಯನಗರಿಯಲಿ ಎನ್ನುವ ಪ್ರತ್ಯೇಕ ಸಂಧಿಯಲ್ಲಿ ಸುಮಾರು ೮೫ ಪದ್ಯಗಳು ಸಿಗುತ್ತವೆ.

ಜೋಯಿಸರು ಈ ಪದ್ಯಗಳನ್ನು ಪ್ರಕ್ಷಿಪ್ತವೆಂದು ತೀರ್ಮಾನಿಸಿದ್ದಾರೆ. ಈ ಮಲ್ಲಬಳಗವನ್ನು ಕೌರವನು ಪಾಂಡವರ ಅಜ್ಞಾತವನ್ನು ಬಯಲು ಪಡಿಸಲು ವಿರಾಟನ

ನಗರಕ್ಕೆ ಕಳಿಸುತ್ತಾನೆ ವಿರಾಟನಗರಿಯಲ್ಲಿ ಬಲಶಾಲಿಯಾಗಿದ್ದ ಕೀಚಕ ಈಗಾಗಲೇ ಹತನಾಗಿದ್ದರಿಂದ ಅವರನ್ನು ಎದುರಿಸುವವರಾರೂ ಇಲ್ಲ ಎನ್ನುವ ವಿರಾಟನ ಆತಂಕವನ್ನು ಕಂಡು ಧರ್ಮರಾಯ ವಲಲ(ಭೀಮ) ಅವರನ್ನು ಎದುರಿಸಲು ತಕ್ಕವನೆಂದು ಹೇಳಲು, ವಿರಾಟನ ಕೋರಿಕೆಯಂತೆ ಹಾಗೂ ಅಣ್ಣನ ಆಣತಿಯ ಮೇರೆಗೆ ಭೀಮ ಆ ಬಲಿಷ್ಠ ಮಲ್ಲರನ್ನು ಸದೆಬಡಿಯುತ್ತಾನೆ. ಆನಂತರ ಗೋಗ್ರಹಣ ನಡೆಯುತ್ತದೆ.

ಜಿಮೂತನೆಂಬ ಮಲ್ಲ ಕೌರವನ ಕಡೆಯಿಂದ ವಿರಾಟನಗರಕ್ಕೆ ಬರುವ ಮಲ್ಲಬಳಗದಲ್ಲಿ ಬಹಳ ಬಲಶಾಲಿ, ಆದರೆ ಕೀಚಕ, ಭೀಮ, ಬಲರಾಮ, ಶಲ್ಯರು ಸಮನಾದ ಬಲಶಾಲಿಗಳು,(ವಿ.ಪ. ೪–೮) ಯಾವ ಗಂಧರ್ವನೂ ಕೀಚಕನನ್ನು ಕೊಲ್ಲಲು ಶಕ್ತನಲ್ಲ ಎಂದು ದುರ್ಯೋಧನನ ಪಾತ್ರದಿಂದ ಹೇಳಿಸಿರುವುದಲ್ಲದೆ ಜಿಮೂತ ಕೀಚಕನಷ್ಟು ಬಲಶಾಲಿಯಲ್ಲ ಎನ್ನುವುದು ಸ್ಪಷ್ಟವಾಗಿದೆ. ಕೀಚಕನನ್ನೇ ಸಂಹರಿಸಿರುವಾಗ ಮಲ್ಲಬಳಗವನ್ನು ಕಳುಹಿಸಿ ಅವರೂ ಸೋತನಂತರ ವಿರಾಟನಗರದಲ್ಲಿ ಪಾಂಡವರಿರುವ ಅನುಮಾನವನ್ನು ದೃಢಪಡಿಸಿಕೊಳ್ಳುವ ಅವಶ್ಯಕತೆ ದುರ್ಯೋಧನನಿಗಿರುವುದಿಲ್ಲ. ಕೀಚಕ ಸತ್ತ ವಾರ್ತೆಯನ್ನು ಕೇಳಿ ಪಾಂಡವರು ವಿರಾಟನಗರಿಯಲ್ಲಿರುವುದನ್ನು ಪ್ರಕಟಪಡಿಸಲು ನೇರವಾಗಿ ಗೋಗ್ರಹಣ ನಡೆಸುವ ಪ್ರಕರಣ ಸಾಧುವಾಗಿದೆ. ಹಾಗಾಗಿ ಜೋಯಿಸರು ಈ ಸಂಧಿಯ ಪದ್ಯಗಳನ್ನು ಪ್ರಕ್ಷಿಪ್ತವೆಂದು ಪರಿಗಣಿಸಿರುವುದು ಸಕಾರಣವಾಗಿಯೇ ಇದೆ.

ಶಾಮಶಾಸ್ತ್ರಿಗಳು ಕೀಚಕ ಹತನಾದನಂತರದ ಸಂಧಿಯಲ್ಲಿ (೪ನೆಯ ಸಂಧಿಯಲ್ಲಿ) ಈ ಮಲ್ಲಬಳಗ ವಿರಾಟನಗರಕ್ಕೆ ಬರುವ ಸನ್ನಿವೇಶದ ಪದ್ಯಗಳನ್ನು ನೀಡಿದ್ದರೆ, ಎ.ವಿ.ಪ್ರಸನ್ನರವರು ಸಂಪಾದಿಸಿರುವ ಕೃತಿಯಲ್ಲಿ ಕೀಚಕವಧೆಗಿಂತ ಮುಂಚಿತವಾಗಿಯೇ ಎರಡನೆಯ ಸಂಧಿಯಲ್ಲಿಯೇ ಕೊಡಲಾಗಿದೆ. ಕೀಚಕ ಇನ್ನೂ ಬದುಕಿರುವಾಗಲೇ ವಿರಾಟನಗರಿಗೆ ಬಂದ ಮಲ್ಲರನ್ನು ಅವನೇಕೆ ಎದುರಿಸಲಿಲ್ಲ ಎಂಬ ಪ್ರಶ್ನೆಗೆ ಇಲ್ಲಿ ಸರಿಯಾದ ಉತ್ತರ ದೊರಕುವುದಿಲ್ಲ.

ಪ್ರಕ್ಷಿಪ್ತಪದ್ಯಗಳು ಹೇರಳವಾಗಿ ದೊರೆಯುವ ಕುಮಾರವ್ಯಾಸ ಭಾರತವನ್ನು ದೊರಕುವ ಎಲ್ಲ ಪ್ರತಿಗಳನ್ನು ಬಳಸಿ ಸೂಕ್ತವಾದ ಕವಿಪಾಠವನ್ನು ಹುಡುಕುವುದು ಅಸಾಧ್ಯದ ಕಾರ್ಯ. ಜೋಯಿಸರು ೨೦ ಪ್ರತಿಗಳನ್ನು ಬಳಸಿ ವಿದ್ವತ್ಪೂರ್ಣವಾಗಿ ನಿರ್ಣಯಿಸಿರುವ ಪಾಠ ಉಳಿದ ಪಾಠಗಳಿಗಿಂತ ಹೆಚ್ಚು ಸೂಕ್ತವಾಗಿ ತೋರುವುದೆಂದು ಈ ಅಧ್ಯಾಯದಿಂದ ತಿಳಿದು ಬಂದಿದೆ.

ಟಿಪ್ಪಣಿಗಳು

೧. ಟಿ.ವಿ.ವೆಂಕಟಾಚಲ ಶಾಸ್ತ್ರಿ, ಕುಮಾರವ್ಯಾಸ ಭಾರತ ಸಂಗ್ರಹ, ಉಪೋದ್ಘಾತ, ಪುಟ.೭೮, ಬಿ.ಎಂ.ಶ್ರೀ ಪ್ರತಿಷ್ಠಾನ, ಬೆಂಗಳೂರು.

೨. ಅ.ರಾ.ಮಿತ್ರ, ಅಪ್ರಕಟಿತ ಲೇಖನ

೩. ಟಿ.ವಿ.ವೆಂಕಟಾಚಲ ಶಾಸ್ತ್ರಿ, ಕುಮಾರವ್ಯಾಸ ಭಾರತ ಸಂಗ್ರಹ, ಉಪೋದ್ಘಾತ, ಪುಟ.೭೮, ಬಿ.ಎಂ.ಶ್ರೀ ಪ್ರತಿಷ್ಠಾನ, ಬೆಂಗಳೂರು

೪. ಡಿ.ಎಲ್.ಎನ್, ಕನ್ನಡ ಗ್ರಂಥಸಂಪಾದನೆ, ಪುಟ.೧೩೭, ಡಿವಿಕೆ ಮೂರ್ತಿ, ಮೈಸೂರು. ೪ನೆಯ ಮುದ್ರಣ

೫. ವಿರಾಟಪರ್ವ ಹುಬ್ಬಳ್ಳಿ ಕುಮಾರವ್ಯಾಸ ಸೇವಾಸಂಘ, ೨೦೦೦

೬. ಟಿ.ವಿ.ವೆಂಕಟಾಚಲ ಶಾಸ್ತ್ರಿ, ಕುಮಾರವ್ಯಾಸ ಭಾರತ ಸಂಗ್ರಹ, ಉಪೋದ್ಘಾತ, ಪುಟ.೭೮, ಬಿ.ಎಂ.ಶ್ರೀ ಪ್ರತಿಷ್ಠಾನ, ಬೆಂಗಳೂರು

೭. ಎಲ್.ಎಮ್.ಎಲ್.ಶಾಸ್ತ್ರಿ, 'ಕುಮಾರವ್ಯಾಸ ವಿರಾಟಪರ್ವದೀಪಿಕೆ', ಪುಟ.೩೧, ರಿಯಾ ಏಜನ್ಸೀಸ್, ಕುವೆಂಪು ನಗರ, ಮೈಸೂರು.

೮. ಕನ್ನಡ ಗ್ರಂಥಸಂಪಾದನೆ. ಪುಟ.೧೧೩-೧೧೪.

ಅಧ್ಯಾಯ – ೬

ಸಮಾರೋಪ

ಮಹಾಭಾರತ ಬಹಳ ವಿಸ್ತಾರವಾದ ಗ್ರಂಥ, **'ಮಹತ್ತ್ವಾದ್ ಭಾರವತ್ತ್ವಾಚ್ಚ ಮಹಾಭಾರತಮುಚ್ಚತೇ'** (ಆದಿಪರ್ವ, ೧–೨೦೯) ಎನ್ನುವ ಈ ಶ್ಲೋಕ ಈ ಮಾತನ್ನು ಶ್ರುತಪಡಿಸುತ್ತಿದೆ, ಪಾಶ್ಚಾತ್ಯರ ಬೃಹತ್ ಗ್ರಂಥಗಳಾದ ಇಲಿಯಡ್ ಮತ್ತು ಒಡಿಸ್ಸಿ ಗ್ರಂಥಗಳೆರಡೂ ಸೇರಿದರೂ ಒಂದು ಲಕ್ಷ ಶ್ಲೋಕಗಳಷ್ಟು ವಿಸ್ತಾರವಾದ ಭಾರತದ ಎಂಟರಲ್ಲೊಂದು ಭಾಗದಷ್ಟೇ ಆಗುವುದು. ಆದರೆ ವ್ಯಾಸರು ರಚಿಸಿದ್ದು ಕೇವಲ ಇಪ್ಪತ್ನಾಲ್ಕು ಸಾವಿರ ಶ್ಲೋಕಗಳನ್ನು ಮಾತ್ರ ಎಂದು ಹೇಳುವ

ಚತು ರ್ವಿಂಶತಿ ಸಾಹಸ್ರಿಂಚಕ್ರೇ ಭಾರತ ಸಂಹಿತಾಮ್

ಉಪಾಖ್ಯಾನೈರ್ವಿನಾ ತಾವತ್ ಭಾರತಂ ಪ್ರೋಚ್ಯತೇ ಬುಧೈಃ

ಈ ಶ್ಲೋಕ ಆದಿಪರ್ವ (೧-೬೧) ರಲ್ಲಿ ಸಿಗುತ್ತದೆ. ಉಪಾಖ್ಯಾನಗಳನ್ನು ಬಿಟ್ಟರೆ ಭಾರತದ ಶ್ಲೋಕಸಂಖ್ಯೆ ಸುಮಾರು ಇಷ್ಟಾಗುತ್ತದೆಂದು ಪಂಡಿತರು ಗಣಿಸಿದ್ದಾರೆ. ಸಹಸ್ರಾರು ವರ್ಷಗಳಿಂದ ಜನಮನ್ನಣೆಗಳಿಸುತ್ತಾ ಭಾರತದಾದ್ಯಂತ ಹಬ್ಬಿ ಬಂದಿರುವ ಈ ಕೃತಿಯು ಕಾಲಾನುಕ್ರಮದಲ್ಲಿ ಈ ಪ್ರಕಾರವಾಗಿ ವಿಸ್ತಾರ ಪಡೆದಿದೆ.

ವ್ಯಾಸರ ಭಾರತಕ್ಕೆ ಗಣೇಶ ಲಿಪಿಕಾರನಾದಂತೆಯೂ, ಗಣೇಶ ಬರೆದಿರುವುದು ಎಂಟು ಸಾವಿರದ ಎಂಟುನೂರು ಶ್ಲೋಕಗಳು ಎಂದು ಹೇಳುವ ಮತ್ತೊಂದು ಪದ್ಯ ಈ ಪ್ರಕಾರವಾಗಿದೆ.

ಅಷ್ಟೌ ಶ್ಲೋಕಸಹಸ್ರಾಣಿ ಅಷ್ಟೌ ಶ್ಲೋಕಶತಾನಿ ಚ
ಅಹಂ ವೇದ್ಮಿ ಶುಕೋ ವೇತ್ತಿ ಸಂಜಯೋ ವೇತ್ತಿ ವಾ ನವಾ॥

'ಈ ೮,೮೦೦ ಶ್ಲೋಕಗಳ ಅರ್ಥವನ್ನು ನಾನು ಬಲ್ಲೆ, ಶುಕನು ಅರಿತುಕೊಂಡಿದ್ದಾನೆ. ಸಂಜಯನು ಒಂದು ವೇಳೆ ತಿಳಿದುಕೊಂಡಿದ್ದರೂ ಇರಬಹುದು' ಎಂದು ಹೇಳುವ ಈ ಶ್ಲೋಕದ ಪ್ರಕಾರ ಮೂಲಮಹಾಭಾರತ ಕೇವಲ ೮,೮೦೦ ಶ್ಲೋಕಗಳಿಂದ ರಚಿತವಾಗಿತ್ತೆಂದು ತಿಳಿದುಬರುತ್ತದೆ. ಆದರೆ ಪರಿಷ್ಕೃತಪಾಠದ ಆದಿಪರ್ವದ ಸಂಪಾದಕರಾದ ಸುಕ್ಥಂಕರ್‌ರವರು ಈ ಶ್ಲೋಕವೇ ಪ್ರಕ್ಷಿಪ್ತವೆಂದು ತಿಳಿಸಿದ್ದಾರೆ.

ಇದೇ ಪ್ರಕಾರವಾದ ಇನ್ನೊಂದು ಶ್ಲೋಕದಲ್ಲಿ ವ್ಯಾಸರು ಅರವತ್ತು ಲಕ್ಷ ಶ್ಲೋಕಗಳ ವಿಸ್ತಾರವಾದ ಭಾರತವನ್ನು ರಚಿಸಿ ಅವುಗಳಲ್ಲಿ ಮೂವತ್ತು ಲಕ್ಷ ಶ್ಲೋಕಗಳು ದೇವಲೋಕದಲ್ಲಿಯೂ, ಹದಿನೈದು ಲಕ್ಷಶ್ಲೋಕಗಳು ಪಿತೃಲೋಕದಲ್ಲಿಯೂ, ಹದಿನಾಲ್ಕು ಲಕ್ಷಶ್ಲೋಕಗಳು ಗಂಧರ್ವಲೋಕದಲ್ಲಿಯೂ ಪ್ರಾಚುರ್ಯ ಪಡೆದು ಉಳಿದ ಒಂದು ಲಕ್ಷಶ್ಲೋಕಗಳಷ್ಟು ವಿಸ್ತಾರವಾದ ಭಾರತಗ್ರಂಥ ಮಾನವಲೋಕಕ್ಕೆ ಸಂದಿತು. ದೇವತೆಗಳು ನಾರದರ ಮೂಲಕವೂ, ಪಿತೃಲೋಕದವರು ದೇವಲರ ಮೂಲಕವೂ , ಗಂಧರ್ವರು ಶುಕಮಹರ್ಷಿಗಳ ಮೂಲಕವೂ ಕೇಳಿ ಆನಂದಿಸಿದ ಈ ಭಾರತವನ್ನು ಮಾನವಲೋಕಕ್ಕೆ ವ್ಯಾಸರ ಶಿಷ್ಯರಾದ ವೈಶಂಪಾಯನರು ಶ್ರುತಪಡಿಸಿದರು ಎಂದಿದೆ.

ಪಾಠಭೇದಗಳಿಗೆ ಕಾರಣ: ಆರಂಭದಲ್ಲಿ ನೂರಾರು ವರ್ಷಗಳಕಾಲ ಮಹಾಭಾರತವನ್ನು ವೇದದಂತೆ ಬಾಯಿಪಾಠವಾಗಿ ಕಲಿಸುವ, ಪ್ರಚಾರಮಾಡುವ ಪರಿಪಾಠ ನಡೆದುಬಂತು. ಈ ಕೈಂಕರ್ಯದಲ್ಲಿ ಹಾಡುಕವಿಗಳು, ಹರಿಕಥಾಕಾರರು ಗ್ರಂಥವನ್ನು ಅಷ್ಟಿಷ್ಟು ವಿಸ್ತಾರಪಡಿಸಿದರು, ಈ ಕಾರ್ಯ ವ್ಯಾಸರ ಆದ್ಯ ಶಿಷ್ಯರಾದ ಸುಮಂತು, ಜೈಮಿನಿ, ಪೈಲ, ಶುಕ, ವೈಶಂಪಾಯನರಿಂದಲೇ ಆರಂಭವಾಯಿತು, ಆರಂಭಕಾಲದಲ್ಲಿಯೇ ಸಂಪ್ರದಾಯಭಿನ್ನತೆ ಇತ್ತೆಂಬುದು ಅನೇಕ ಪಾಠಬೇಧಗಳಿಂದ ತಿಳಿದು ಬರುತ್ತದೆ. ಹೀಗೆ ಕಾಲಕ್ರಮದಲ್ಲಿ ಜನತೆಯ ಜೀವನಾಡಿಯೇ ಆಗಿ ಪರಿಣಮಿಸಿದ ಈ ಭಾರತ ಪ್ರಚಾರಾವಸರದಲ್ಲಿ ವೃದ್ಧಿಹ್ರಾಸಗಳನ್ನು ಪಡೆಯಿತು.

ಗ್ರಂಥಸ್ವರೂಪ : ಮಹಾಭಾರತದ ಶ್ಲೋಕಗಳಷ್ಟು ಪಾಠಾಂತರಗಳನ್ನೂ ಪಾಠವೈವಿಧ್ಯಗಳನ್ನೂ ಪಡೆದಿರುವ ಗ್ರಂಥ ಬೇರೆ ಯಾವ ದೇಶದಲ್ಲಿಯೂ ಯಾವ ಭಾಷೆಯಲ್ಲಿಯೂ ದುರ್ಲಭ. ಶ್ರುತಿಯಿಂದ ಗ್ರಂಥರೂಪಕ್ಕೆ ಇಳಿದ ಈ ಭಾರತವನ್ನು ಉತ್ತರಭಾರತದ ಪಾಠ, ದಕ್ಷಿಣಭಾರತದ ಪಾಠ, ಅವುಗಳಲ್ಲಿ ನಾಲ್ಕಾರು ಶಾಖೆಗಳು ಉಪಶಾಖೆಗಳು, ಒಂದೇ ದೇಶಭಾಗದ ಹಲವು ಪಾಠಗಳಲ್ಲಿ ಅನೈಕಮತ, ಅಭಿಪ್ರಾಯ ಒಂದೇ ಇದ್ದರೂ ಪದಗಳ ವ್ಯತ್ಯಯಗಳು, ಅನೇಕ ಶ್ಲೋಕಗಳ ಮತ್ತು ಇಡೀ ಉಪಾಖ್ಯಾನಗಳ ಸ್ಥಾನಾಂತರಗಳು ಹೀಗೆ ನಾನಾರೀತಿಯಿಂದ ವೈವಿದ್ಯಮಯವಾಗಿ ಕಾಣುವಂತಾಗಿದೆ.

ಮಹಾಭಾರತ ಪರಿಷ್ಕರಣೆ : ೧೯ನೆಯ ಶತಮಾನದ ಅಂತ್ಯದವೇಳೆಗೆ ಪ್ರಪಂಚದಾದ್ಯಂತ ಅನೇಕ ಪಂಡಿತರು ಮಹಾಭಾರತದ ಅಧ್ಯಯನವನ್ನು ವೈಜ್ಞಾನಿಕವಾಗಿ ಕೈಗೊಂಡರು. ಆನಂತರ ಪುಣೆಯ ಭಾಂಡಾರಕರ್ ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯಡಿ ಹತ್ತಾರುಜನ ಪ್ರಕಾಂಡ ವಿದ್ವಾಂಸರ ಅನೇಕ ದಶಕಗಳ ಪರಿಶ್ರಮದಿಂದ ಪರಿಷ್ಕೃತ ಭಾರತವನ್ನು ಹೊರತರಲಾಯಿತಾದರೂ ಸಂಪೂರ್ಣವಾಗಿ ಪ್ರಕ್ಷಿಪ್ತ ಶ್ಲೋಕಗಳನ್ನು ಬೇರ್ಪಡಿಸಲಾಗಿಲ್ಲ.

ಈ ಪ್ರಕಾರವಾಗಿ ವೈವಿದ್ಯಮಯವಾಗಿಯೂ ವ್ಯಾಪಕವಾಗಿಯೂ ಬೆಳೆದು ಬಂದ ಮೂಲ ಸಂಸ್ಕೃತ ಭಾರತ ಇಡೀ ದೇಶದಾದ್ಯಂತ ಜನರಾಡುವ ಭಾಷೆಯಲ್ಲಿಯೂ ಹುಟ್ಟಿಬಂತು. ಒಬ್ಬಕವಿಯಿಂದ ಮತ್ತೊಬ್ಬಕವಿ ಸ್ಫೂರ್ತಿ ಪಡೆಯುತ್ತಾ ಅನೇಕ ಕವಿಗಳ ಭಾರತ ವಿವಿಧ ಭಾಷೆಗಳಲ್ಲಿ ಬೆಳೆದುಬಂದು ಹೆಚ್ಚು ವಿಸ್ತಾರ ಪಡೆಯಿತು.

ಕನ್ನಡದಲ್ಲಿಯೂ ಆದಿಕವಿ ಪಂಪ ನಿಂದ ಆರಂಭಗೊಂಡು ಸಂಪೂರ್ಣ ಭಾರತ, ಕೆಲವು ಪರ್ವಗಳ ಕಥಾಭಾಗಉಳ್ಳ ಭಾರತ, ವೈದಿಕಭಾರತ, ಜೈನಭಾರತ, ಉತ್ತರಾರ್ಧ ಕಥಾಭಾಗವನ್ನೊಳಗೊಂಡ ಜೈಮಿನಿ ಭಾರತ ಹೀಗೆ ನಾನಾ ಪ್ರಕಾರದ ಭಾರತಗಳು ವಿವಿಧ ಕಾಲಘಟ್ಟದಲ್ಲಿ ರಚಿತವಾದವು. ಅವುಗಳಲ್ಲಿ ಕುಮಾರವ್ಯಾಸ ಭಾರತ ಉಳಿದ ಭಾರತಗಳಿಗಿಂತ ಹೆಚ್ಚು ಜನಾದರಣೆಯನ್ನು ಕಂಡು ಪಂಡಿತ ಪಾಮರಾದಿಗಳ ಮೆಚ್ಚುಗೆಪಡೆದು ಪ್ರಸಿದ್ಧಿಯಾದ ಕಾವ್ಯವಾಯಿತು.

ಮೂಲಭಾರತದಲ್ಲಿ ಪ್ರಕ್ಷಿಪ್ತಗಳು ಬೆಳೆದು ಬಂದಂತೆ ಕನ್ನಡಭಾರತದಲ್ಲೂ ವಾಚಿಸುವವರು, ಕೇಳುಗರು, ಗಮಕಿಗಳು, ಪಂಡಿತರು, ಲಿಪಿಕಾರರು, ಪ್ರವಚನಕಾರರು ಮೊದಲಾದವರಿಂದ ಪಾಠಭೇದ ಉಂಟಾಯಿತು.

೨೦ನೆಯ ಶತಮಾನದ ಎರಡನೆಯ ದಶಕದವೇಳೆಗೆ 'ಪ್ರಾಚ್ಯವಿದ್ಯಾ ಸಂಶೋಧನಾಲಯ'ದಿಂದ ಕ್ರಮಬದ್ಧವಾದ ಪಾಠಪರಿಷ್ಕರಣಾಕಾರ್ಯವು ಆರಂಭವಾಯಿತು. ಸಾಕಷ್ಟುಪ್ರತಿಗಳು ದೊರೆತರೂ ಶುದ್ಧ ಹಸ್ತಪ್ರತಿಯ ಕೊರತೆ, ವಿಪುಲವಾಗಿ ಬೆಳೆದು ಬಂದಿರುವ ಪ್ರತಿಗಳು ಅವುಗಳಲ್ಲಿಸಿಗುವ ಗೊಂದಲಮಯ ಪಾಠಭೇದಗಳು ಮೊದಲಾದ ಕಾರಣಗಳಿಂದಾಗಿ ಪರಿಷ್ಕರಣೆಗೊಂಡ ಆವೃತ್ತಿಗಳು ಪುನರ್ ಪರಿಷ್ಕರಣೆಗೆ ಒಳಪಡಬೇಕಾಯಿತು.

ಕುಮಾರವ್ಯಾಸಭಾರತದ ವಿರಾಟಪರ್ವವನ್ನು ಮೊದಲು ೧೯೨೦ ರಲ್ಲಿ ಆರ್.ಶಾಮಾಸಾಸ್ತ್ರಿಗಳು ಪರಿಷ್ಕರಿಸಿದರೂ ಈ ಮೇಲೆ ಹೇಳಿದ ಕಾರಣಗಳಿಂದಾಗಿ ೧೯೭೫ರಲ್ಲಿ ಪುನರ್ ಪರಿಷ್ಕರಣೆಗೆ ಒಳಪಡಿಸಲಾಯಿತು, ಎರಡನೆಯ ಬಾರಿ ಈ ಕಾರ್ಯವನ್ನು ಎಸ್.ಎನ್.ಕೃಷ್ಣಜೋಯಿಸರು ಇಪ್ಪತ್ತು ಹಸ್ತಪ್ರತಿಗಳ ಸಹಾಯದಿಂದ ನೆರವೇರಿಸಿದರು.

ಹೆಚ್ಚು ಹೆಚ್ಚು ಪ್ರತಿಗಳನ್ನೂ ಪರಿಶೀಲಿಸಿದಷ್ಟೂ ಹೆಚ್ಚು ಹೆಚ್ಚು ಪಾಠಗಳು ಲಭಿಸಿ ಗೊಂದಲವನ್ನುಂಟುಮಾಡುವುದಾದರೂ ಜೋಯಿಸರು ತಮಗೆ ಸಮರ್ಪಕವೆನಿಸಿದ ಇಪ್ಪತ್ತು ಪ್ರತಿಗಳನ್ನು ತಮ್ಮ ಕಾರ್ಯದಲ್ಲಿ ಬಳಸಿಕೊಂಡಿದ್ದಾರೆ. ಆ ಎಲ್ಲ ಪ್ರತಿಗಳನ್ನೂ ಪರಿಶೀಲಿಸಿರುವುದು ಪದ್ಯಗಳ ಕೆಳಗೆ ಕೊಟ್ಟಿರುವ ಪಾಠಾಂತರಗಳಿಂದ ತಿಳಿದು ಬರುತ್ತದೆ. ಅಲ್ಲದೆ ತಾವು ಪ್ರಕ್ಷಿಪ್ತವೆಂದು ಪರಿಗಣಿಸಿ ತೆಗೆದುಕೊಂಡಿಲ್ಲದ ಪದ್ಯಗಳನ್ನೂ ಅವುಗಳ ಪಾಠಾಂತರ ದೊಂದಿಗೆ ಅನುಬಂಧದಲ್ಲಿ ನೀಡಿರುವುದು, ಒಂದೇ ಭಾವಾರ್ಥವಿರುವ ವಿಭಿನ್ನ ಪ್ರಕ್ಷಿಪ್ತಪದ್ಯಗಳನ್ನು ಪರಿಶೀಲಿಸಿರುವುದು, ಕುಮಾರವ್ಯಾಸ ಈ ಕಾವ್ಯವನ್ನು ಮೂಲಭಾರತದೊಡನೆ ತುಲನೆಮಾಡಿರುವುದು ಇವೇ ಮೊದಲಾದ ಕಾರ್ಯಗಳು ಇವರ ಸೂಕ್ಷ್ಮದೃಷ್ಟಿ, ಆಳವಾದ ಅಧ್ಯಯನ, ಹಾಗೂ ಪಾಠಪರಿಷ್ಕರಣಾ ವಿಧಾನದೊಂದಿಗೆ ಇವರ ಪಾಂಡಿತ್ಯ, ಪರಿಶ್ರಮ, ಆಸಕ್ತಿ, ಕಾಳಜಿಗಳನ್ನು ತಿಳಿಸುತ್ತದೆ.

ಈ ಅಧ್ಯಯನದಲ್ಲಿ ಕುಮಾರವ್ಯಾಸನ ವಿರಾಟಪರ್ವದ ವಿವಿಧ ಆವೃತ್ತಿಗಳಾದ ಶಾಮಾಶಾಸ್ತ್ರಿ, ಕೃಷ್ಣಜೋಯಿಸರು, ಕುವೆಂಪು ಮತ್ತು ಮಾಸ್ತಿ, ಎ.ವಿ.ಪ್ರಸನ್ನರು ಸಂಪಾದಿಸಿರುವ ಸಮಗ್ರ ವಿರಾಟಪರ್ವ ಹಾಗೂ ತ.ಸು.ಶಾಮರಾಯರು, ಎಂ.ವಿ.ಸೀ, ಕೆ.ಎಂ.ಕೃಷ್ಣರಾವ್ ರವರು ಸಂಪಾದಿಸಿರುವ ವಿರಾಟಪರ್ವ ಸಂಗ್ರಹವನ್ನೂ ಬಳಸಿಕೊಂಡು ಐದು ವಿಭಿನ್ನ ಅಧ್ಯಾಯಗಳಲ್ಲಿ ಅಧ್ಯಯನ ನಡೆಸಲಾಗಿದೆ.

ಜೋಯಿಸರ ಪಾಠಕ್ಕಿಂತ ಇತರ ಮುದ್ರಣದ ಪಾಠ ಸಾಧುವೆಂದೂ ತೋರುವ ಒಂದೆರಡು ಉದಾಹರಣೆಗಳು ದೊರೆತರೂ, ಹಸ್ತಪ್ರತಿಗಳ ಸಮಗ್ರ ಬಳಕೆಯಾಗಲೀ, ಪಾಠಾಂತರ ಸಮಸ್ಯೆಯನ್ನು ಬಿಡಿಸಿರುವುದಾಗಲೀ, ಪರಿಷ್ಕರಣಾಕಾರ್ಯವು ಜೋಯಿಸರ ಕೃತಿಯಲ್ಲಿ ಹೆಚ್ಚು ಸಮರ್ಪಕವಾಗಿ ನಡೆದಿರುವುದು ಈ ಅಧ್ಯಯನದಲ್ಲಿ ಕಂಡು ಬಂದಿದೆ. ಪ್ರಕೃತ ಅಧ್ಯಯನದಲ್ಲಿ ವಿರಾಟಪರ್ವದ ಬಗೆಗಿನ ಅಧ್ಯಯನವನ್ನು ನಡೆಸಲಾಗಿದೆ ಮತ್ತು ಸಾಧ್ಯವಿರುವ ಮಟ್ಟಿಗೂ ವಿರಾಟಪರ್ವದ (ಕುಮಾರವ್ಯಾಸ ಭಾರತದ) ಪರಿಷ್ಸರಣಗಳು ಮತ್ತು ಅವುಗಳ ಪ್ರಕಟಣೆಯ ವಿವರಗಳನ್ನು ಸಾಧ್ಯವಿರುವ ಮಟ್ಟಿಗೂ ಖಚಿತವಾಗಿ ನೀಡಲಾಗಿದೆ ಅನುಬಂಧಗಳಲ್ಲಿ ಕುಮಾರವ್ಯಾಸಭಾರತದ ಬಗೆಗೆ ಬಂದಿರುವ ಲೇಖನಗಳು ಮತ್ತು ಗ್ರಂಥಸೂಚಿಯನ್ನು ಇತ್ಯಾದಿ ವಿವರಗಳೊಂದಿಗೆ ನೀಡಲಾಗಿದೆ. ಈ ವಿರಾಟಪರ್ವದ ಪಾಠ ಪರಿಷ್ಕರಣೆ ನಡೆದಿರುವ ಬಗೆಯನ್ನು ಸಾಧ್ಯವಿರುವ ಮಟ್ಟಿಗೂ ವಿಶ್ಲೇಷಿಸಲಾಗಿದೆ. ಇದೇ ರೀತಿಯ ಅಧ್ಯಯನವು ದಶಪರ್ವಗಳಿಗೂ ನಡೆಯಬೇಕಾದ ಅವಶ್ಯಕತೆಯನ್ನು ಈ ಅಧ್ಯಯನವು ಸೂಚಿಸುತ್ತದೆ ಆದ ಕಾರಣ ಮುಂದೆಯೂ ಇದೇರೀತಿಯ ಅಧ್ಯಯನಗಳು ನಡೆಯ ಬೇಕಾಗಿದೆ.

ಆಕರಗ್ರಂಥಸೂಚಿ

ಅನುಬಂಧ-೧

ಕುಮಾರವ್ಯಾಸ ಭಾರತದ ವಿವಿಧ ಆವೃತ್ತಿಗಳು (ಸಮಗ್ರಕಾವ್ಯ)

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಸಂಪಾದಕರು	ಪ್ರಕಾಶಕರು	ಪ್ರಕಟಣಾ ವರ್ಷ
1	ಕನ್ನಡ ಭಾರತವು (ಮೊದಲ ನಾಲ್ಕು ಪರ್ವಗಳು) (ಕಲ್ಲಚ್ಚು)	(ಸಂ)?	ಜರ್ಮನ್ ಮಿಶನ್ ಪ್ರೆಸ್ ಮಂಗಳೂರು	೧೮೫೧
2	ಕನ್ನಡ ಭಾರತ ದಶಪರ್ವ	(ಸಂ)?	ವಿಚಾರ ದರ್ಪಣ ಮುದ್ರಾಕ್ಷರ ಶಾಲೆ, ಬೆಂಗಳೂರು, (ತೆಲುಗು ಅಕ್ಷರಗಳ ಅಚ್ಚು)	೧೮೬೫
3	ಕನ್ನಡ ಭಾರತದೊಳ್ ಆದಿಪಂಚಕವು	(ಸಂ)?	ವಿಚಾರ ದರ್ಪಣ ಮುದ್ರಾಕ್ಷರ ಶಾಲೆ, ಬೆಂಗಳೂರು,	೧೮೬೫
4	ಕನ್ನಡ ಭಾರತವು	(ಸಂ)?	ವಿಚಾರ ದರ್ಪಣ ಮುದ್ರಾಕ್ಷರ ಶಾಲೆ, ಬೆಂಗಳೂರು,	೧೮೭೫
5	ಕನ್ನಡ ಭಾರತ (ಆದಿಪಂಚಕವು ಯುದ್ಧಪಂಚಕವೂ)	ಸಂ. ಸಿದ್ಧಾಂತಿ ಸುಬ್ರಹ್ಮಣ್ಯಶಾಸ್ತ್ರಿ	ಸ.ತಿರುವೇಂಕಟಾಚಾರ್ಯ ಸರಸ್ವತಿ ನಿಲಯ ಮುದ್ರಾಕ್ಷರಶಾಲೆ, ಮದ್ರಾಸು,	೧೮೭೭
6	ಕನ್ನಡ ಭಾರತ	(ಸಂ)?	ಸಂ.ಶಿವಲಿಂಗಂ ಶೆಟ್ಟಿ, ಮದರಾಸು,	೧೮೮೭
7	ಕನ್ನಡ ಭಾರತ ಕಥಾಮಂಜರಿ (ಸಚಿತ್ರ)	(ಸಂ)?	ಸರಸ್ವತಿ ವಿಲಾಸ ಮುದ್ರಾಕ್ಷರಶಾಲೆ, ಮದ್ರಾಸು,	೧೮೮೦
8	ಕರ್ನಾಟಕ ಭಾರತಾಷ್ಟಾದಶಪರ್ವ ಸಂಪೂರ್ಣ ಗ್ರಂಥವು (ಆದಿಪಂಚಕ)	(ಸಂ)?	ವೈ ಬಿ ಸುಬ್ಬಯ್ಯ ಅಂಡ್ ಸನ್ಸ್, ಮೈಸೂರು ಡಿಪೋ ಪ್ರೆಸ್, ಬೆಂಗಳೂರು,	೧೮೮೭
9	ಕನ್ನಡ ಮಹಾಭಾರತ ದಶಪರ್ವ	ಸಂ.ನಂಜನಗೂಡು ಶ್ರೀಕಂಠಶಾಸ್ತ್ರಿ	ಶ್ರೀವಾಣಿವಿಲಾಸ ಬುಕ್ ಡಿಪೋ, ಮೈಸೂರು	೧೯೦೯
10	ಕನ್ನಡ ಮಹಾಭಾರತದಲ್ಲಿ ಪ್ರಥಮಾದಿ ದಶಪರ್ವಗಳು	(ಸಂ)?	ವಾಗೀಶ್ವರೀಮುದ್ರಾಕ್ಷರಶಾಲೆ, ಬೆಂಗಳೂರು,	೧೮೮೮
11	ಕನ್ನಡ ಮಹಾಭಾರತ ದಶಪರ್ವವು,	(ಸಂ)?	ವಾಜಪೇಯ ಗೋವಿಂದಯ್ಯ, ಬೆಂಗಳೂರು,	೧೯೧೬
12	ಶ್ರೀಮನ್ಮಹಾಭಾರತ ದಶಪರ್ವವು	(ಸಂ)?	ಚಿಕ್ಕಪೇಟೆ ಬುಕ್ ಡಿಪೋ, ಬೆಂಗಳೂರು,	೧೯೨೩
13	ಶ್ರೀಮನ್ಮಹಾಭಾರತ ದಶಪರ್ವವು	ಸಂ.ಭಾರತೀ ಸಂಪಂಗಿರಾಮ	ಸರಸ್ವತೀ ರತ್ನಾಕರಬುಕ್ ಡಿಪೋ, ಬೆಂಗಳೂರು.	೧೯೨೮
14	ಕರ್ಣಾಟ ಭಾರತ ಕಥಾಮಂಜರಿ	ಸಂ. ಕುವೆಂಪು ಮಾಸ್ತಿವೆಂಕಟೇಶ ಅಯ್ಯಂಗಾರ್	ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ ಮೈಸೂರುಸರ್ಕಾರ, ಬೆಂಗಳೂರು ಮೈಸೂರು ವಿಶ್ವವಿದ್ಯಾಲಯ, ಮೈಸೂರು,	೧೯೫೮. ೧೯೭೪,೮೫
15	ಕನ್ನಡ ಭಾರತ	ಸಂ.ಎ.ವಿ.ಪ್ರಸನ್ನ	ಕನ್ನಡ ವಿಶ್ವವಿದ್ಯಾಲಯ, ಹಂಪಿ.	೨೦೦೦.

ಆಕರಗ್ರಂಥಸೂಚಿ

ಅನುಬಂಧ-೨

ವಿರಾಟಪರ್ವದ ಕೃತಿಗಳು (ಮೂಲ)

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಸಂಪಾದಕರು	ಪ್ರಕಾಶಕರು	ಪ್ರಕಟಣಾವರ್ಷ
೧	ಕನ್ನಡ ಭಾರತ: ವಿರಾಟಪರ್ವ	ಸಂ.ಚಿ.ಅಪ್ಪಾಸ್ವಾಮಿ ಮೊದಲಿಯಾರ್	ಬಳ್ಳಾರಿ ಪ್ರೆಸ್, ಬಳ್ಳಾರಿ.	೧೮೮೪
೨	ವಿರಾಟಪರ್ವವೂ ಉದ್ಯೋಗಪರ್ವವೂ	ಸಂ. ಸಿದ್ಧಾಂತಿ ಸುಬ್ರಹ್ಮಣ್ಯಶಾಸ್ತ್ರಿ	ಸರಸ್ವತಿ ನಿಲಯ ಮುದ್ರಾಕ್ಷರಶಾಲೆ ಮದ್ರಾಸು.	೧೮೮೭.
೩	ಕರ್ಣಾಟಕ ಮಹಾಭಾರತ: ವಿರಾಟಪರ್ವ	ಸಂ.ಆರ್, ಶ್ಯಾಮಶಾಸ್ತ್ರಿ	ಓರಿಯಂಟಲ್ ಲೈಬ್ರರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.	೧೯೨೦
೪	ವಿರಾಟಪರ್ವ	ಸಂ.ಎಸ್.ಎನ್. ಕೃಷ್ಣಜೋಯಿಸ್	ಮೈಸೂರು ವಿಶ್ವವಿದ್ಯಾಲಯ, ಮೈಸೂರು.	೧೯೭೫.

ಆಕರಗ್ರಂಥಸೂಚಿ

ಅನುಬಂಧ–೩

ವಿರಾಟಪರ್ವದ ಸಂಗ್ರಹಗಳು

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಸಂಪಾದಕರು	ಪ್ರಕಾಶಕರು	ಪ್ರಕಟಣಾವರ್ಷ
೧	ವಿರಾಟಪರ್ವ ಸಂಗ್ರಹ	ಸಂ. ತ ಸು ಶಾಮರಾವ್, ಎಚ್.ಎಂ.ಶಂಕರನಾರಾಯಣರಾವ್	ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು,	೧೯೫೧, ೧೯೫೬, ೧೯೭೩.
೨	ಕನ್ನಡ ಮಹಾಭಾರತ ಸಂಗ್ರಹ ಭಾಗ–೧, ಸಂ.	ಸಂ. ತ ಸು ಶಾಮರಾವ್,	ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು,	೧೯೫೫, ೧೯೬೫
೩	ಕುಮಾರವ್ಯಾಸ ಭಾರತ ಕಾವ್ಯ ಸಂಗ್ರಹ	ಸಂ. ತ ಸು ಶಾಮರಾವ್,	ಸಾಹಿತ್ಯ ಅಕಾದೆಮಿ, ಹೊಸದೆಹಲಿ,	೧೯೭೧
೪	ಕುಮಾರವ್ಯಾಸ ಭಾರತ ಸಂಗ್ರಹ	ಸಂ. ಎಂ.ವಿ.ಸೀತಾರಾಮಯ್ಯ,	ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.	೧೯೯೦

ಆಕರಗ್ರಂಥಸೂಚಿ

ಅನುಬಂಧ–೪

ವಿರಾಟಪರ್ವದ ಗದ್ಯಾನುವಾದ

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಅನುವಾದಕರು	ಪ್ರಕಾಶಕರು	ಪ್ರಕಟಣಾವರ್ಷ
೧	ಕನ್ನಡ ವ್ಯಾಸಭಾರತ (ಗದ್ಯಾನುವಾದ)	ಎನ್ಕೆ	ಸಮಾಜ ಪುಸ್ತಕಾಲಯ, ಧಾರವಾಡ	೧೯೯೭
೨	ಕರ್ನಾಟಕ ಭಾರತಕಥಾಮಂಜರಿ	ಎಲ್.ಗುಂಡಪ್ಪ	ಹೇಮಂತ ಸಾಹಿತ್ಯ, ರಾಜಾಜಿನಗರ ಬೆಂಗಳೂರು	೨೦೦೨
೩	ವಿರಾಟಪರ್ವ	ಆಳಸಿಂಗರಾಚಾರ್ಯ	ಕರ್ನಾಟಕ ಡಿಪೊ, ಮದ್ರಾಸು	೧೯೩೧
೪	ವಚನಭಾರತ	ಎ.ಆರ್.ಕೃಷ್ಣಶಾಸ್ತ್ರಿ	ಗೀತಾಬುಕ್ ಹೌಸ್,	೧೯೮೧
೫	ಮಹಾಭಾರತ ಸಂಗ್ರಹ: ವಿರಾಟಪರ್ವ	ಕುಮಾಂಡು ರಾಮಸ್ವಾಮಯ್ಯಂಗಾರ್	ಐರಿಷ್ ಮುದ್ರಣಾಲಯ, ಬೆಂಗಳೂರು.	೧೯೧೮
೬	ಭಾರತಸಾರೋದ್ಧಾರ	ಭಾರತ ಬಿಂದೂರಾಯರು	ಲೋಕಶಿಕ್ಷಣಟ್ರಸ್ಟ್ ಹುಬ್ಬಳ್ಳಿ	೧೯೬೫

ಅನುಬಂಧ-೫

ವಿರಾಟಪರ್ವದ ವಿಮರ್ಶನ ಕೃತಿಗಳು.

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಲೇಖಕರು / ಸಂಪಾದಕರು	ಪ್ರಕಾಶಕರು	ಪ್ರಕಟ ವರ್ಷ
೧	ಕುಮಾರವ್ಯಾಸ ಮತ್ತು ಕೃಷ್ಣಕತೆ	ಲೇ: ಎನ್ಕೆ	ಕರ್ನಾಟಕ ಸಹಕಾರಿ ಪ್ರಕಾಶ ಮಂದಿರ, ಬೆಂಗಳೂರು	೧೯೬೮
೨	ಕುಮಾರವ್ಯಾಸ	ಲೇ: ಕೀರ್ತಿನಾಥ ಕುರ್ತುಕೋಟಿ,	ಕೇಂದ್ರ ಸಾಹಿತ್ಯ ಅಕಾದೆಮಿ, ನವದೆಹಲಿ	೧೯೮೯
೩	ಗದುಗಿನ ಭಾರತ: ಒಂದು ಸಾಂಸ್ಕೃತಿಕ ಅಧ್ಯಯನ,	ಲೇ: ದೇ ಜವರೇಗೌಡ	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ	೧೯೭೮
೪	ಕುಮಾರವ್ಯಾಸನ ಭಾಗವತ ದೃಷ್ಟಿ	ಲೇ: ಬುರ್ಲಿ.ಎ.ಆರ್.	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ	೧೯೭೫
೫	ಕುಮಾರವ್ಯಾಸ ಪ್ರಶಸ್ತಿ,	ವಿವಿಧ ಲೇಖಕರು, ಸಂ. ಬಿ.ಎಂ.ಶ್ರೀ	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು	೧೯೭೮
೬	ಕುಮಾರವ್ಯಾಸನ ರೂಪಕಗಳು	ಲೇ: ಶ್ರೀನಿವಾಸಕುಲಕರ್ಣಿ	ಶ್ರೀ ವೀರನಾರಾಯಣ ಸಂಸ್ಕೃತಿ ಪ್ರತಿಷ್ಠಾನ, ಗದಗ.	೧೯೯೨
೭	ಶ್ರೀ ಕುಮಾರವ್ಯಾಸ (ಕವಿ ಕಾವ್ಯ ಪರಂಪರೆ-೫) ‘ಜೀವನದರ್ಶನ ಹಾಗೂ ಕಾವ್ಯ ಸ್ವರೂಪ’	ಲೇ: ವಿ.ಸೀತಾರಾಮಯ್ಯ,	ಐ.ಬಿ,ಎಚ್.ಪ್ರಕಾಶನ, ಬೆಂಗಳೂರು	೧೯೨೭
೮	ಮಹಾಭಾರತ ಸಮೀಕ್ಷೆ	ಲೇ: ಸುಬ್ರಹ್ಮಣ್ಯ ಎನ್	ತ ವೆಂ ಸ್ಮಾರಕ ಗ್ರಂಥಮಾಲೆ, ಮೈಸೂರು.	೧೯೭೩
೯	ಗದುಗಿನ ಶ್ರೀ ವೀರನಾರಾಯಣ ಹಾಗೂ ಕುಮಾರವ್ಯಾಸ	ಲೇ:ಹರಿದಾಸ ಎಂ ಎಚ್.	ವಿಕ್ರಮ ಪ್ರಕಾಶ, ಗದಗ	೧೯೭೭
೧೦	ಕುಮಾರವ್ಯಾಸಯುಗ	ಲೇ:ಹಿರೇಮಠ ಆರ್ ಸಿ,	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ	೧೯೫೪
೧೧	ಕುಮಾರವ್ಯಾಸನ ಪಾತ್ರ ಸೃಷ್ಟಿ	ಲೇ:ಹೆಗಡೆ, ಎಲ್.ಆರ್.	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ	೧೯೭೫
೧೨	ಕುಮಾರವ್ಯಾಸ ಸರಸವಾಣಿ	ಲೇ: ಶೇಷಗಿರಿರಾವ್.ಡಿ.ವಿ	ಪದ್ಮಾಂಬ ಪ್ರಿಂಟರ್ಸ್, ಬೆಂಗಳೂರು.	೧೯೭೦
೧೩	ಕುಮಾರವ್ಯಾಸ ಭಾರತ: ವಿರಾಟಪರ್ವ ದೀಪಿಕೆ	ಲೇ: ಎಲ್.ಎಂ.ಎಲ್.ಶಾಸ್ತ್ರಿ	ಕುವೆಂಪುನಗರ, ಮೈಸೂರು.	೨೦೦೭
೧೪	ಕುಮಾರವ್ಯಾಸನ ಕರ್ಣಾಟಕಭಾರತ ಕಥಾಮಂಜರಿ ಪ್ರವೇಶ	ಲೇ: ಜಿ.ಎಸ್.ಭಟ್	ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ)	೨೦೦೬
೧೫	ಕುಮಾರವ್ಯಾಸ ಭಾರತ ಒಂದು ಅಧ್ಯಯನ	ಲೇ: ಸೀತಾರಾಮ ಜಾಗೀರ್‌ದಾರ್	ಶ್ರೀ ವೆಂಕಟೇಶ್ವರ ಪ್ರಕಾಶನ, ಬೆಂಗಳೂರು	೧೯೯೮
೧೬	ಕುಮಾರವ್ಯಾಸ ಮುಖಾಮುಖಿ	ವಿವಿಧ ಲೇಖಕರು ಸಂ: ರಹಮತ್ ತರೀಕೆರೆ	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ	೨೦೦೪
೧೭	ಕುಮಾರವ್ಯಾಸಭಾರತ ಒಂದು ನೋಟ	ಲೇ: ಸಿ.ಪಿ.ಕೆ,	ಸುವಿದ್ಯಾಪ್ರಕಾಶನ, ಬಸವನಗುಡಿ, ಬೆಂಗಳೂರು	೧೯೮೮
೧೮	ವಿರಾಟಪರ್ವ ಸಾಂಸ್ಕೃತಿಕನೆಲೆ	ಲೇ: ಧನವಂತ ಹಾಜವಗೋಳ	ಸಿ.ವಿ.ಜಿ.ಪಬ್ಲಿಕೇಶನ್. ಬೆಂಗಳೂರು	೨೦೦೫

ಆಕರಗ್ರಂಥಸೂಚಿ

ಅನುಬಂಧ–೬

ವಿರಾಟಪರ್ವದ ಗ್ರಂಥ ಲೇಖನ

ಮ ಂಖ್ಯೆ	ಲೇಖನದ ಹೆಸರು	ಲೇಖಕರು	ಗ್ರಂಥ	ಪ್ರಕಾಶಕರು	ಪ್ರಕಟ ವರ್ಷ
	ವ್ಯಾಸ ಮತ್ತು ಕುಮಾರವ್ಯಾಸರಲ್ಲಿ ಉತ್ತರಕುಮಾರ	ಆಮೂರ, ಜಿ.ಎಸ್	ಕುಮಾರವ್ಯಾಸನ ಕನ್ನಡ ಭಾರತ	ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು–೨	೨೦೦೪
	ಕುಮಾರವ್ಯಾಸನ ಶೈಲಿ	ಎನ್ಕೆ	ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂ–೪, ಭಾಗ–೧	ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು	೧೯೭೭
	ನಾರಣಪ್ಪನ ಪ್ರತಿಭೆ	ಕಡೆಂಗೋಡ್ಲು ಶಂಕರಭಟ್ಟ	ವಾಙ್ಮಯ ತಪಸ್ಸು	ಕರ್ನಾಟಕ ಸಹಕಾರಿ ಪ್ರಕಾಶಮಂದಿರ ನಿಯಮಿತ, ಬೆಂಗಳೂರು	೧೯೬೭
	ಕಲಿಯುದವರ ಕಾಮಧೇನು	ಕುವೆಂಪು	ವಿಭೂತಿಪೂಜೆ	ಉದಯರವಿ ಪ್ರಕಾಶನ ಮೈಸೂರು	೧೯೫೩
	ತೋರಣನಾಂದಿ (ಪ್ರಸ್ತಾವನೆ),	ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್	ಕರ್ಣಾಟ ಭಾರತ ಕಥಾಮಂಜರಿ	ಮೈಸೂರು ವಿಶ್ವವಿದ್ಯಾಲಯ, ಮೈಸೂರು	೧೯೮೮
	ಕುಮಾರವ್ಯಾಸನ ಶೈಲಿ	ಕೀರ್ತಿನಾಥ ಕುರ್ತುಕೋಟಿ	ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂ–೪ ಭಾಗ–೧	ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು	೧೯೭೭
	ಕುಮಾರವ್ಯಾಸ	ಕೀರ್ತಿನಾಥ ಕುರ್ತುಕೋಟಿ	ಕನ್ನಡ ಸಾಹಿತ್ಯ ಸಂಗಾತಿ	ಕನ್ನಡ ವಿಶ್ವ ವಿದ್ಯಾಲಯ, ಹಂಪಿ	೧೯೯೫
	ಪ್ರಸ್ತಾವನೆ	ಗುಂಡಪ್ಪ ಎಲ್	ಕುಮಾರವ್ಯಾಸ ಮಹಾಕವಿಯ ಕರ್ಣಾಟ ಭಾರತ ಕಥಾಮಂಜರಿ	ಹೇಮಂತ ಪ್ರಕಾಶನ, ಬೆಂಗಳೂರು	೧೯೭೬
	ಕುಮಾರವ್ಯಾಸನ ಕುಮಾರದ್ವಯ	ಗುಂಡ್ಮಿ ಚಂದ್ರಶೇಖರ ಐತಾಳ	ಸಮಾರಾಧನೆ	ಮಂಗಳೂರು	೧೯೭೧
೦	ಕನ್ನಡದಲ್ಲಿ ಷಟ್ಪದಿ ಕಾವ್ಯಗಳು	ಚಿದಾನಂದಮೂರ್ತಿ.ಎಂ	ಕನ್ನಡವಿಶ್ವಕೋಶ ಸಂ–೨	ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು	೧೯೭೧
೧	ಕುಮಾರವ್ಯಾಸ ಭಾರತ ಸಾರೋದ್ಧಾರ	ಜವರೇಗೌಡ.ದೇ	ಸೂರಂಟು ಪುಸ್ತಕಗಳು	ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು	೧೯೭೨

	ಮುನ್ನುಡಿ ಮತ್ತು ಸಮೀಕ್ಷೆ	[illegible]	[illegible]	ಕುಮಾರವ್ಯಾಸ ಸೇವಾ ಸಂಘದ ಪ್ರಕಟಣೆ, ಹುಬ್ಬಳ್ಳಿ	೨೦೦೦
೩	ಸಂಪಾದಕರ ನುಡಿ	ಪ್ರಸನ್ನ ಎ.ವಿ	ಕನ್ನಡ ಭಾರತ	ಕನ್ನಡ ವಿಶ್ವವಿದ್ಯಾಲಯ,	೨೦೦೧
೪	ಕುಮಾರವ್ಯಾಸನ ಉತ್ತರಕುಮಾರ	ಬೇಂದ್ರೆ.ದ.ರಾ	ಸಾಹಿತ್ಯ ವಿರಾಟ್ ಸ್ವರೂಪ	ಸಮಾಜ ಪುಸ್ತಕಾಲಯ ಧಾರವಾಡ	೧೯೭೪
೫	ಮುನ್ನುಡಿ	ಸುಜನಾ	ಭಾರತ ಕಥಾ ಮಂಜರಿ	ಸರಸ ಸಾಹಿತ್ಯ ಪ್ರಕಾಶನ, ಮೈಸೂರು	೧೯೬೪
೬	ಕುಮಾರವ್ಯಾಸನ ಕಥವಸ್ತು	ಸುಬ್ರಮಣ್ಯಂ ಎನ್	ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂ–೪, ಭಾಗ–೧,	ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು	೧೯೭೭
೭	ಕರ್ಣಾಟಕ ಭಾರತ ಕಥಾಮಂಜರಿ: ಒಂದುನೋಟ	ಸಿಪಿಕೆ	ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ ಸಂ–೫	ಮೈಸೂರು ವಿಶ್ವವಿದ್ಯಾಲಯ	೧೯೮೧
೮	ಪಂಪ ನಾರಣಪ್ಪ	ಗುಂಡಪ್ಪ.ಎಲ್	ಕುಮಾರವ್ಯಾಸನ ಕನ್ನಡ ಭಾರತ	ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು–೨	೨೦೦೪
೯	ಉತ್ತರಕುಮಾರ	ದ.ರಾ.ಬೇಂದ್ರೆ	ಕುಮಾರವ್ಯಾಸನ ಕನ್ನಡ ಭಾರತ	ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು–೨	೨೦೦೪

ಆಕರಗ್ರಂಥಸೂಚಿ

ಅನುಬಂಧ-೭

ವಿರಾಟಪರ್ವದ ಪತ್ರಿಕಾ ಲೇಖನ

ಕ್ರಮ ಸಂಖ್ಯೆ	ಲೇಖನದ ಹೆಸರು	ಲೇಖಕರು	ಪತ್ರಿಕೆ	ಸಂಚಿಕೆ/ಸಂಪುಟ	ಪ್ರಕಟಣಾವರ್ಷ
೧	ಕುಮಾರವ್ಯಾಸ	ಅನಂತರಂಗಾಚಾರ್ಯ ಎನ್	ಪ್ರಬುದ್ಧಕರ್ನಾಟಕ	ಸಂಚಿಕೆ ೧ ಸಂಪುಟ-೪೪	೧೯೬೨
೨	ಸೈರಂಧ್ರಿ	ಕೃಷ್ಣಮೂರ್ತಿ ಪುರಾಣಿಕ	ಪ್ರಬುದ್ಧಕರ್ನಾಟಕ	ಸಂಚಿಕೆ-೩ ಸಂಪುಟ-೨೧,	೧೯೪೦
೩	ಕುಮಾರವ್ಯಾಸ ವಿರಾಟಪರ್ವ	ಮಾಳವಾಡ ಸ.ಸ	ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ	ಸಂಚಿಕೆ-೨ ಸಂಪುಟ-೨೫	೧೯೪೦
೪	ಪಂಪ ಕುಮಾರವ್ಯಾಸರಲ್ಲಿ ಕೀಚಕ ಪ್ರಸಂಗ	ಶಾಸ್ತ್ರೀ.ಎಚ್.ಆರ್ ಸುರಪುರ	ಪ್ರಬುದ್ಧಕರ್ಣಾಟಕ	ಸಂಚಿಕೆ-೨ ಸಂಪುಟ-೪೧	೧೯೫೯
೫	ಗದುಗಿನ ಭಾರತದಲ್ಲಿ ಯುದ್ಧ ವರ್ಣನೆಗಳು	ಶ್ರೀಕಂಠಯ್ಯ ಕೆ.	ಕನ್ನಡಸಾಹಿತ್ಯ ಪರಿಷತ್ಪತ್ರಿಕೆ	ಸಂಚಿಕೆ-೨ ಸಂಪುಟ-೬೯	ಡಿಸೆಂಬರ್ ೧೯೮೪

ಆಕರಗ್ರಂಥಸೂಚಿ

ಅನುಬಂಧ–೮

ಮಹಾಪ್ರಬಂಧಗಳು

ಕ್ರಮ ಸಂಖ್ಯೆ	ಸಂಶೋಧನಾ ಪ್ರಬಂಧದ ಹೆಸರು	ಸಂಶೋಧಕರು	ವಿಶ್ವವಿದ್ಯಾಲಯ	ಸಲ್ಲಿಸಿದ ವರ್ಷ
೧	ಕುಮಾರವ್ಯಾಸಭಾರತ ಒಂದು ಅಧ್ಯಯನ	ಬೋರೇಗೌಡ	ಮೈಸೂರು ವಿಶ್ವವಿದ್ಯಾಲಯ	೧೯೯೮
೨	ಕುಮಾರವ್ಯಾಸನ ಪಾತ್ರಸೃಷ್ಟಿ	ಎಲ್.ಆ.ರ್.ಹೊಡೆ	ಕರ್ನಾಟಕ ವಿಶ್ವವಿದ್ಯಾಲಯ	೧೯೬೮
೩	ಕುಮಾರವ್ಯಾಸನ ರೂಪಕಗಳು	ಕುಲಕರ್ಣಿ ಶ್ರೀನಿವಾಸ	ಕರ್ನಾಟಕ ವಿಶ್ವವಿದ್ಯಾಲಯ	೧೯೯೨
೪	ಕರ್ನಾಟಕ ಭಾರತ ಕಥಾಮಂಜರಿ ಪದ್ಯಾಂತ ಶೈಲಿ	ಎಸ್.ಮಾಡಳ್ಳಿ	ಕರ್ನಾಟಕ ವಿಶ್ವವಿದ್ಯಾಲಯ	
೫	ಕುಮಾರವ್ಯಾಸ ಭಾರತ ವಿರಾಟಪರ್ವ – ಸಾಂಸ್ಕೃತಿಕ ಅಧ್ಯಯನ	ಡಿ.ಜಿ.ಹಾಜವಗೋಳ	ಕರ್ನಾಟಕ ವಿಶ್ವವಿದ್ಯಾಲಯ	೧೯೯೧
೬	ಕುಮಾರವ್ಯಾಸಭಾರತ ಒಂದು ಸಾಂಸ್ಕೃತಿಕ ಅಧ್ಯಯನ	ಕೆ.ವಿ.ಶ್ರೀನಿವಾಸಮೂರ್ತಿ	ಬೆಂಗಳೂರು ವಿಶ್ವವಿದ್ಯಾಲಯ	೧೯೯೧
೭	ಕುಮಾರವ್ಯಾಸಭಾರತದಲ್ಲಿ ಭಗವದ್ಗೀತೆ ಒಂದು ಅಧ್ಯಯನ	ಎನ್.ಸುನಂದ	ಬೆಂಗಳೂರು ವಿಶ್ವವಿದ್ಯಾಲಯ	೨೦೦೩
೮	ಕುಮಾರವ್ಯಾಸನ ಸ್ತ್ರೀಪಾತ್ರಗಳು ಸ್ತ್ರೀವಾದಿ ಅಧ್ಯಯನ	ಹೇಮಾವತಿ.ಹೆಚ್.ಸಿ	ಹಂಪಿ ಕನ್ನಡ ವಿಶ್ವವಿದ್ಯಾಲಯ	೧೯೯೩
೯	ಕುಮಾರವ್ಯಾಸನ ಕಾವ್ಯಚಿತ್ರಗಳು ಒಂದು ಅಧ್ಯಾಯ	ಎಂ.ವಿ.ಪ್ರಸನ್ನ		೨೦೦೪
೧೦	ಗದಾಯುದ್ಧ ಪ್ರಸಂಗ ತೌಲನಿಕ ಅಧ್ಯಯನ	ಶಿವಸ್ವಾಮಿ.ಎಚ್.ಎಸ್		೧೯೭೭